ಆಗ ಮಳೆ ಬಂತೆಂದು ಎಚ್ಚತ್ತು ಎದ್ದು ಬರುತ್ತಾ
ನು. ಹೌದು ಸರಿ, ಸರಿ, ಎಂದು ನೀರು ತೆಕ್ಕೊಂಡು ಸ
ಲ್ಲಿದಳು. ಮಳೆ ಬಂತೆಂದು ಹುಡುಗನೆದ್ದು ಮನೆಗೆ
ನು. ಆಗ ಮಾಂಸವನ್ನು ಮಗನಿಗೂ ತಿನ್ನಲಿಕ್ಕಿ
ತಿಂದು ನೆಮ್ಮದಿಯಾಗಿ ಮಲಗಿ ನಿದ್ದೆ ಹೋದರು.
ಕೆಯನ್ನು ಸಾಕಿದವನು ಅದನ್ನು ಎಲ್ಲೆಲ್ಲೂ ಹ
ಣವೆ ಐದು ಹಣದ ಹೋತನು ವ್ಯರ್ಥವಾಗಿ ಹೆ
ದು ಆ ತಳವಾರನ ಸಂಗಡಲೇ ತನ್ನ ದುಃಖವ
ಳಿಕೊಂಡನು. ಅದಕ್ಕವನು ಅಯ್ಯೋ! ಹುಚ್ಚು
ಬನೇ, ಸಂಜೆಗತ್ತಲ ವೇಳೆಯಲ್ಲಿ ಬಬ್ಬರೂ ಇ
ಲದ ಬರಿಬಿನಲ್ಲಿ ಕಟ್ಟಿ ಹಾಕ ಬಹುದೋ? ಹ
ಕೊಂಡು ಮೀವಿನ ಕೊಬ್ಬಿನಿಂದ ಶಿಡಿದುಬಿಮ್ದು ಓಡಿ
ಬಹುದು. ಮೂಡ್ಲ ಕಡೆ ಹುಡಿಕಿದಿಯಾ? ಪಡುವ
ಉತ್ತರದಲ್ಲಿ ಸಹಾ ನೋಡಿದಿಯಾ? ಹೆಜ್ಜೆಗಳು ಕ

ಸೂಳು ಮಂಣಿನಲ್ಲಿ ಹೆಜ್ಜೆ ಹ್ಯಾಗೆ ಕಾಣಿಸೀತು? ಕ್ಕದೆ ಹೋದ ಮೇಲೆ ಯಾರೋ ದಾರಿ ಹೋಕರು ತ್ತುಕೊಂಡೇ ಹೋಗಿರ ಬೇಕು, ಅಷ್ಟೇ ಹೊರ್ತು ರಿನಲ್ಲಿ ಇಂಥಾ ಮೋಸದ ಕೆಲಸಗಳು ಹಿಂದಿಗೆ ಂದಾದರೂ ನಡದಿದ್ದರೆ ಈ ಹೊತ್ತು ನಡೀತೆಂದು ಪಡ ಬಹುದು, ಎಂದಿಗೂ ಇಲ್ಲ, ಇಂದಿಗೂ ಇಲ್ಲ, ಅಲ್ಲ, ಯಾತಕ್ಕೆ ದುಃಖ ಪಡುತ್ತೀ? ಸುಮ್ಮನೆ ು ಸಮಾಧಾನ ಪಡಿಸಿದನು. ಅದಕ್ಕೆ ಆ ಮೇಕೆಯು ು ಊರಿಗೆ ತಳವಾರನು, ಊರಿನಲ್ಲಾದ ಕಳ್ಳತನದ ನೀನೇ ಮಾಡಬೇಕು, ಮಾಡದೆ ಬರೀ ಬಾಯಿ ಡಂಬಡಿಕೆಯಿಂದ ನನ್ನ ಬಡವೆ ಹ್ಯಾಗೆ ಬಂದೀತು? ಮ್ಮನಾದನು. ಹೀಗಿರುವಲ್ಲಿ ಮರು ದಿವಸವೋ ದಿವಸವೋ ಆ ತಳವಾರನ ಮಗನೂ ಮೇಕೆಯವನ ಇನ್ನೂ ಕೆಲವು ಮಂದಿ ಹುಡುಗರೂ ತಂಗಳುಗಳು ಮ್ಮ ತಮ್ಮ ದನಕರಗಳನ್ನು ಹೊಡಕೊಂಡು ಮೇ ಕ್ಕೆ ಅಡವಿಗೆ ಜೊತೆಯಾಗಿ ಹೋದರು. ಅಲ್ಲಿ ಹು ದನಗಳು ಮೇಯುತ್ತಾ ಇರುವಾಗ, ತಾವೆಲ್ಲರು ುಡಿ ಮರಳು ಹರಿದಿರುವ ಕಡೆ ಮನಸ್ಸು ಬಂದ ಹಾ ಆಡುತ್ತಾ, ಒಬ್ಬರಿಗೊಬ್ಬರು ನಿನ್ನೆ ರಾತ್ರಿ ನಿಮ್ಮ ಮ ನು ಮಾಡಿದರು? ಎಂದು ಕೇಳುತ್ತಾ, ನಮ್ಮ ಮ ವರೆಕಾಳು, ಹಿಟ್ಟು, ನಮ್ಮ ಮನೆಯಲ್ಲಿ ಹುರಳಿ ಮ್ಮ ಮನೆಯಲ್ಲಿ ಸೊಪ್ಪು, ಎಂದು ಅವರವರು ಹೇಳು ು; ಈ ಮೇಕೆಯವನ ಮಗನು ನಮ್ಮ ಮನೆಯಲ್ಲಿ

ಹಿಟ್ಟೇ ಮಾಡಲಿಲ್ಲ, ಹೊತಾರಿನ ತಂಗಳೇ ತಿಂದು ಇ
ಡೆವು, ನಮ್ಮ ಹೋತನು ಎಲ್ಲೋ ಹೋಯಿತೆಂದ
ಈ ತಳವಾರನ ಮಗನು ನಮ್ಮ ಮನೆಯಲ್ಲಿ ಮೇ
ದಿದ್ದರೆಂದನು. ಆ ಮಾತನ್ನು ಕೇಳಿದ ಹುಡುಗರಿಂದ
ರಲ್ಲಿ ತಿಳಿದು, ಮೇಕೆಯವನು ತಳವಾರನ ಮೇಲೆ ಕಳ್ಳ
ರಿಸುವದಕ್ಕೆ ಚಾವಡಿಗೆ ಬಂದು ಹೇಳಿದನು. ಚಾವ
ತಳವಾರನನ್ನು ಕರಿಸಿ ನಿನ್ನ ಮಗನು ಹೇಳಿದ ಮಾ
ಯಿಂದ ನಿನ್ನ ಮೇಲೆ ಕಳ್ಳತನ ಹೊರುತ್ತದೆ, ಇದಕ್ಕೆ
ತ್ತರ ಎನ್ನಲು, ಅವನು ಎಂದಿನ ಮಾತು ಹೇಳುತ್ತಾ
ವೆಂದರು ವಿಚಾರಿಸರಿ ಅಂದನು. ಚಾವಡಿಯಲ್ಲಿ ಆ
ನ್ನು ಕೇಳಿದ್ದಕ್ಕೆ ಅವನು ಮಳಿ ಬಂದ ದಿವಸ ರ
ಮಾಂಸ ತಿಂದೆನೆಂದು ಹೇಳಿದನು. ಮೇಕೆ ಹೋದ
ಳಿ ಯಿಲ್ಲವಾದ್ದರಿಂದ ತಳವಾರನ ಮೇಲೆ ತಪ್ಪು ಸ
ಈ ಮೇರಿಗೆ ಕಳ್ಳರು ಸುಳ್ಳಾಡಿ ತಪ್ಪಿಸಿಕೊಳ್ಳುವರು.

ಇಪ್ಪತ್ತೇಳನೇ ಕಥೆ.

ಕೆಡಕುತನ.

ಮಾರ್ಗಸ್ಥರಾದ ಇಬ್ಬರು ಸ್ನೇಹಿತರು ಬಂದು ಅ
ದು ಒಬ್ಬ ಬ್ರಾಹ್ಮಣನ ಮನೇ ನಡವೆಯಲ್ಲಿ ಇಳು ಸ
ಆಗ ಆ ಮನೆಯ ಬ್ರಾಹ್ಮಣನು ಅವರಿಗೆ ರಾತ್ರಿ ಭೋ
ಡಿಸಿ ಅವರನ್ನು ಬಹಳ ಆದರಿಸಿದನು. ಅವರಿಬ್ಬರ
ಯ ಬ್ರಾಹ್ಮಣನ ಗುಣಕ್ಕೂ ಆತನ ಪೆಂಡತಿಯ ಗ

ನು, ಈ ಗಂಡಾ ಹೆಂಡರ ಅನ್ಯೋನ್ಯ ಪ್ರೀತಿಯೂ ಸ್ನೇ
ನ್ನಾಗಿದೆ, ಈ ಮೇರಿಗೆ ಎಲ್ಲೂ ನೋಡಲಿಲ್ಲವೆಂದು ಮಾ
ಡರು. ಆಗ ಅವರಲ್ಲೊಬ್ಬನು ಇನ್ನೊಬ್ಬನನ್ನು
ಇಂಥಾ ಅನ್ಯೋನ್ಯ ದಂಪತಿಗಳಿಗೆ ಕಲಹ ಹುಟ್ಟಿಸು
ೀಡುತ್ತೀಯಾ ಎಂದನು. ಇಂಥಾವರು ಎಂದೆಂದಿಗೂ
ರೆಂದು ಆ ಇನ್ನೊಬ್ಬನು ಹೇಳಿದನು. ಮೊದಲಿನ
ು ಹಾಗನ್ನು ಬೇಡ, ಇವರ ಸ್ನೇಹ ಕೆಟ್ಟು ಹೋಗುವಂ
ತೂಡುತ್ತೇನೆ, ಅದನ್ನು ತಿರಿಗಿ ನೆಟ್ಟಗೆ ಮಾಡುವದಕ್ಕೆ
ತುರ್ಯ್ಯವಿದ್ದರೆ ಹೇಳೆಂದನು. ಈ ದಂಪತಿಗಳ ಸ್ನೇ
ುವದಕ್ಕೆ ನಾನೇ ಸರಿ ಎಂತ ಒಬ್ಬನೂ, ಅದನ್ನು ನಿ
ಡುವದಕ್ಕೆ ನಾನೇ ಸರಿ ಎಂದು ಮತ್ತೊಬ್ಬನೂ ಪ್ರತಿ
ದರು. ಹೀಗೆ ರಾತ್ರಿ ಕಳೆದು ಉದಯವಾಗುತ್ತಲೇ
ನು ಸಾಮುದ್ರಿಕಾ ಲಕ್ಷಣವನ್ನೂ ಗತಾಗತ ವರ್ತ
ನ್ನೂ ಹೇಳುವ ಜ್ಞಾನಿಯ ವೇಷವನ್ನು ಹಾಕಿಕೊಂ
ಗಾರನ ಸಂಗಡ ತತ್ವ ವಿಷಯವಾದ ಮಾತುಗಳನ್ನು
ಭಿಸಿದನು. ಆಗ ಆ ಮನೆಯ ದಂಪತಿಗಳು ಮೋ
ಳು ತಿಳಿಯದ ಸಾಧು ಗುಣ ಉಳ್ಳವರಾಗಿದ್ದ ಕಾರಣ
ಹಾ ಜ್ಞಾನಿ ಎಂದು ನೆನಸಿ ತಮಗೆ ಏನಾದರು ಉಪ
ಡ ಬೇಕೆಂದು ವಿನಯದಿಂದ ಬೇಡಿ ಕೊಂಡರು.
ಪಟ ಜ್ಞಾನಿಯು ಆ ಬ್ರಾಹ್ಮಣನಿಗೆ ತಿಳಿಯದೆ ಅವನ
ನ್ನು ನೋಡಿ, ಅಪ್ಪಾ, ನೀನು ಪುಣ್ಯಾತ್ಮಳು, ಆದ
ಂಡನು ಪೂರ್ವ ಜನ್ಮದಲ್ಲಿ ಉಪ್ಪಾರನು, ಪರಿಕ್ಷಿಸ
ಆತನು ನಿದ್ದೆ ಹೋಗುವಾಗ ಆತನ ಬೆನ್ನನ್ನು ನೆಕ್ಕಿ

ನೋಡು, ನಾಲಿಗ್ಗೆ ಉಪ್ಪುಪ್ಪಾಗಿರುವದೆಂದನು; ಸಂಗ
ಡತಿಗೆ ತಿಳಿಯದ ಹಾಗೆ ಗಂಡನನ್ನು ನೋಡಿ, ಅಯ್ಯ
ಶೋತ್ತಮನೇ, ನಿನ್ನ ಹೆಂಡತಿಯು ಪೂರ್ವ ಜನ್ಮ
ಯಾಗಿದ್ದು ಏನೋ ನಿನ್ನ ಪಾಪದಿಂದ ಈಗ ನಿನ
ಯಾಗಿದ್ದಾಳೆ, ಇವಳು ನಿದ್ದೆ ಹೊತ್ತಿನಲ್ಲಿ ನಿನ್ನ ಬೆ
ಕ್ಕುವಳು, ಅದಕ್ಕಿದೇ ದೃಷ್ಟಾಂತವೆಂದು ಹೇಳಿದನ
ಮೂಢ ದಂಪತಿಗಳು ಇವನ ಕಪಟದ ಮಾತ ನಂ
ನ್ನೊಬ್ಬರು ಪರಿಕ್ಷಿಸುವದಕ್ಕೆ ಸಿದ್ಧವಾದರು. ಆ ರಾ
ಡಕನು ಅಲ್ಲಿರದೆ ಬೇರೆ ಸ್ಥಳದಲ್ಲಿದ್ದನು, ಮತ್ತೊಬ್ಬನ
ಆ ನಡವೆಯಲ್ಲಿ ಮಲಗಿದನು. ಅರ್ಧ ರಾತ್ರಿಯಲ್ಲಿ
ಯು ನಿದ್ದೆ ಹೋಗುವ ಹಾಗೆ ಎಚ್ಚತ್ತಿರುವ ತನ್ನ ಪ್ರ
ನ್ನನ್ನು ನೆಕ್ಕಿದಳು. ಆಗ ಅವನು ಛೀ! ನಾಯೀ ಎಂ
ಶುದ್ಧಿ ಮಾಡಿದನು, ಛೀ! ಉಪ್ಪಾರನೇ ಎಂದು ಗಂಡ
ಯ್ಯಿಗೆ ಮುಯ್ಯಿ ತೀರಿಸಿದಳು. ಈ ಮೇರಿಗೆ ಪರಸ್ಪ
ಉಂಟಾಗಿ ಇಬ್ಬರೂ ಹಾಸಿಗೆ ಇಂದ ಎದ್ದು ಅಂಗಳಕ್ಕೆ ಬ
ದರು. ಈ ಪ್ರಕಾರ ಜಗಳವಾಡುವ ದಂಪತಿಗಳನ್ನು ನೋ
ಕೆಡಕನಿಂದ ಬಂದ ಕೇಡೆಂದು ತಿಳಿದು, ನಡವೆಯ
ಬಳ್ಳೀ ಮಾತಿನಿಂದ ಅವರನ್ನು ಕರದು ಹತ್ರ ಕುಳ್ಳಿ
ಡು, ಆಹೆಂಗಸನ್ನು ನೋಡಿ ಅವ್ವಾ, ನೀನು ಹೀಗೆ ಸ
ದು, ನಿನ್ನ ಮುಂಗೈಯನ್ನು ನೆಕ್ಕಿ ನೋಡಿ ಉಪ್ಪೋ ಸ
ನಿಜವಾಗಿ ಹೇಳಿಂದನು. ಅವಳದೇಪ್ರಕಾರ ನೋ
ಗಿದೆ ಎಂದು ಹೇಳಲು, ಅವನು ವಂಚಕನ ಮಾ
ಬೇಡ, ಎಲ್ಲರ ಮೈಯ್ಯೂ ಹೀಗೆ ಯಿರುವದು, ಗಂಡ

ಸು ಎಂದು ಬೋಧಿಸಿ, ಬ್ರಾಹ್ಮಣನನ್ನು ನೋಡಿ
ನ್ನು ದ್ವೇಷಿಸ ಬೇಡ, ಅವಳು ಸ್ವಬುದ್ಧಿಯಿಂದ ಮಾ
ಕ್ಷಮಿಸು, ಎಂದು ಸಮಾಧಾನ ಪಡಿಸಿದನು. ಹೀಗೆ
ಲಹವನ್ನೂ ಸಾಧುಗಳು ಸಮಾಧಾನವನ್ನೂ ಆಷೇ

ಇಪ್ಪತ್ತೈಂಟನೇ ಕಥೆ.

ನರಿಯ ಮೋಸ.

ಅಡವಿಯಲ್ಲಿ ಒಂದು ನರಿ ಮೂರು ನಾಲ್ಕು ದಿವಸ
ನಿಂದ ಆಹಾರ ಶಿಕ್ಕದೆ ಕಂಗೆಟ್ಟು ಹಸಿವಿನಿಂದ ಬಳ
ಕ್ಕಿದರೂ ತಿಂದೇನೆಂದು ಅಡವಿಯಲ್ಲಿ ತಿರುಗುತ್ತಾ ಇ
ಲ್ಲಿ ಒಂದು ಹಳೆ ಎಕ್ಕಡದ ಜೋಡು ಬಿದ್ದಿತ್ತು. ಆ
ದಿವಸದಿಂದ ಮಳೆಯಲ್ಲಿ ನೆನೆದು ಮೆತ್ತಗಾಗಿ ನರಿಗೆ
ಕ್ಕಿ ಶಬ್ಬಿಯಾಗಿತ್ತು. ಆ ನರಿ ಅಲ್ಲಿಗೆ ಬಂದು ನಿಂತು
ದವನು ಇಲ್ಲಿ ಎಲ್ಲಾದರು ಹೊಂಚಿ ತನ್ನನ್ನು ಹೊಡಿ
ಇದ್ದಾನೇನೋ ಎಂಬ ಭೆಯದಿಂದ, ಓ ಎಕ್ಕಡ
ೀ, ನಾನು ಹಸಿವಿನಿಂದ ಸಾಯುತ್ತೇನೆ, ಮಳೆಯಲ್ಲಿ
ನ್ನ ಕಾಲಿಗೆ ಬಾರದೆ ನೀನು ಬಿಸಾಡಿದ ಎಕ್ಕಡವನ್ನು
ನ್ನವದಕ್ಕೆ ಕೊಡು, ನಾನೊಂದು ಹಣ ಕೊಡುತ್ತೇನೆ,
ಸ ಎಕ್ಕಡವನ್ನು ಕೊಂಡುಕೋ ಎಂದು, ದೈನ್ಯದಿಂ
ಕೇಳಿತು. ಆ ಮಾತನ್ನು ಸರ್ವ ಜೀವರಾಶಿಗೂ ಕಾ
ಆಹಾರವನ್ನುಂಟು ಮಾಡುವ ಭಗವಂತನು ಕೇಳಿ

ತಿನ್ನು ತಿನ್ನು ಹಣಾ ಕೊಡು ಎಂದು ಅಶರೀರ
ನುಡಿದನು. ಆ ಮೇಲೆ ನರಿಯು ಬೇಗ ಬೇ
ತಿಂದು ಬಿಟ್ಟು ಹಣದ ತಗಾದಿಗೆ ಅಂಜಿ ಓಡಿ ಬಂ
ಲ್ಲಿ ಹೊಕ್ಕೊಂಡಿತು. ಆಗ ದೇವರು ಮನುಷ್ಯಾಕ
ಯ ಎದುರಿಗೆ ನಿಂತು ಹಣ ತಾ ಎನ್ನಲು, ನರಿಯು ಕ
ನ್ನೇನು ದಾರಿ, ಎಲ್ಲಿಗೆ ಹೋಗಲಿ, ಎಂದು ಮೈ ತೀ
ತ್ತಾ ಕಲ್ಲು, ಮುಳ್ಳು, ಹಳ್ಳ ಕೊಳ್ಳ ಮುಂತಾದ್ದರಲ್ಲಿ
ಕಾಲು ಮುರಿದು, ಕಿವಿ ಹರಿದು, ಕಣ್ಣು ತಗಲಿ,
ಟು, ಪಜೀತಿಯಾಗಿ ಮುಂದಕ್ಕೆ ಹೋಗಲಾರದೆ ಇ
ಆಗಿ ಹೋಗಲಿ, ನನ್ನಾಟ ಮುಗೀತು, ಎಂದು ಒ
ಗುಂಡಿನ ಮರೆಯಲ್ಲಿ ಹೊಕ್ಕೊಂಡಿತು. ಆಗ ಎಲ್ಲೆ
ಬಿಡದ ಸಾಲಗಾರನು ಎದುರಾಗಿ ಬಂದು ನಿಂತು ಕೊಂ
ಹಣಾ ತಾ, ಅಂದನು. ಅದಕ್ಕೆ ನರಿಯು "ಇಳಿಂ
ಮೇಲೆ ಛಳಿ ಏನು ಘಾಳಿಏನು" ಎಂಬ ಸಾಮತಿಯ
ಗೇನು ಭಯ, ನನ್ನಿನ್ನೇನು ಮಾಡುತ್ತಾನೆ? "ನಿ
ವರಿಲ್ಲ ನಾಯ ತಿಂದವರಿಲ್ಲ" ಎಂಬ ಸಾಮತಿ ಉ
ಗಲ್ಲದೆ ನನ್ನ ಕೊಂದು ಹಾಕಿದರೂ ಹಾಕಲಿ, ನಾ
ತು ಕೇಳುತ್ತೇನೆ, ಈ ಸಾಲಗಾರನು ಅದಕ್ಕೆ ಏ
ಹೇಳುತ್ತಾನೋ ನೋಡೋಣ ಎಂದು ಧೈರ್ಯ ತಂ
ಅಯ್ಯಾ, ಹಣಾ ತಾ ಹಣಾ ತಾ, ಎಂದು ಕೇಳುತ್ತೀ
ಣವ್ಯಾವದು? ನೀನ್ಯಾರು? ಅನಲು, ದೇವರು ಹಣ
ಕೇಳುತ್ತೀ? ನೀನು ತಿಂದ ಹಳೇ ಎಕ್ಕಡಕ್ಕೆ ಕೊ
ಪ್ಪಿಕೊಂಡ ಕ್ರಯ ನೆನಪಿಲ್ಲವೋ ಅಂದನು. ಅದ

ವನ್ನು ತಿಂದ ನರಿಗೆ ಕಣ್ಣು, ಕಾಲು, ಕಿವಿ, ಮೈ
ನ್ನಿಗಿತ್ತೋ ಇಲ್ಲವೋ? ಹೇಳಿನಲು, ದೇವರು
ಾಗ ಅದಕ್ಕೆ ಅದೆಲ್ಲಾ ಚನ್ನಾಗಿ ಇತ್ತು, ಅಂದನು.
ಾಗೋ, ಅದೆಲ್ಲಾ ಚನ್ನಾಗಿ ಯಾವ ನರಿಗೆ ಅದೆ
ನಿನಗೆ ಹಣ ಕೊಡಬೇಕಾಗಿದ್ದೀತು, ನಾನು ಕಾ
ು ಕಿವಿ ಹರಿದು ಕಣ್ಣು ತಾಕಿ ಮೈ ಎಲ್ಲಾ ಪುಡಿ
ರಕ್ತ ಸೋರಿಸಿಕೊಳ್ಳುತ್ತಾ ಬಿದ್ದಿದ್ದೇನೆ, ನನ್ನನ್ನು
ವದಕ್ಕೆ ಕಾರಣವೇನು? ಎಂದು ನುಡಿಯಿತು. ಭಗ
ಕ್ಕು ನರಿಗಳು ತಂತ್ರದಿಂದ ಜೀವಿಸಲಿ ಎಂದು ಅಂತ
ನು.

ಇಪ್ಪತ್ತೊಂಭತ್ತನೇ ಕಥೆ.

ನಾಯಿಯ ಗುಣ.

ಶುರಕನ ಬಳಿಯೆಲ್ಲಿ ಬಂದು ನಾಯಿ ಉಂಟು. ಅದು
ತಾದ ಕೆಲಸಗಳಲ್ಲಿ ಬಹಳ ಸಾಮರ್ಥ್ಯ ಉಂಟಾದ್ದಾ
ಅವನು ಆ ನಾಯನ್ನು ಒಬ್ಬ ಸಾವುಕಾರನ ಬಳಿ
ಟ್ಟು ನೂರು ವರಹಾ ಸಾಲ ತೆಕೊಂಡನು. ಈ
ಟ್ಟು ತೆಕ್ಕೊಂಡವರ ಊರುಗಳು ಬಂದೆರಡು ಹರ
ಾರದಲ್ಲಿ ಬೇರೆ ಬೇರೆ ಯಾಗಿದ್ದವು. ಹೀಗಿರುವಲ್ಲಿ
ನಾಯಿ ಈ ಸಾವುಕಾರನ ಮನೆಯಲ್ಲಿ ಹಗಲೂ ರಾ
ತ್ತೆಂಟೂಳು ಕಾವಲು ಇದ್ದ ಹಾಗೆ ಬಹು ಜಾಗ್ರತೆ
ಇರುವದು. ಆ ವರ್ತಕನ ಮನೆಗೆ ನಾನಾವಿಧ

ವಾದ ವ್ಯಾಪಾರಗಳಿಗೋಸ್ಕರ ಅನೇಕ ಜನಗ
ಹೋಗುತ್ತಾ ಇದ್ದಾಗ್ಯೂ, ಅವರವರ ಲಕ್ಷಣಗ
ಬಾಗಲಲ್ಲೇ ತಿಳಿದು ಕೊಂಡು ಯಾವಾಗಲೂ ಬ
ನ್ನು ಸರಾಗವಾಗಿ ಒಳಕ್ಕೆ ಬಿಡುತ್ತಾ, ಹೊಸಬರ
ಯಿಸಿ ಅಡ್ಡಿ ಮಾಡಿ ಯಜಮಾನನ ಸನ್ನೆಯ ಮೇ
ಬಿಡುತ್ತಾ, ಮನೆ, ಅಂಗಳ, ಹಿತ್ತಲು, ಮುಂದಿನ
ಹಿಂದಿನ ದಿಡ್ಡಿ ಬಾಗಲು, ಮುಂತಾದ ಎಲ್ಲಾ ಕ
ಗುತ್ತಾ ಇರುವದಲ್ಲದೆ, ರಾತ್ರಿಯಲ್ಲಿ ಅವನಿಗೆ ಕಾ
ಕಾಕರು ಸುಳಿಯದ ಹಾಗೆ ಎಚ್ಚರಿಕೆಯಾಗಿರು
ಗಿರುವಲ್ಲಿ ಇಂಥಾ ನಾಯನ್ನು ಅಟ್ಟಮರಿಸಿ ಗಂ
ನಾದ ಬಬ್ಬ ಕಳ್ಳನು ಈ ಸಾವುಕಾರನ ಬಂಡವಾ
ಲದ್ರವ್ಯದ ಮನೆಯನ್ನು ಮಾಳಿಗೆ ಮೇಲಿನಿಂದ
ದು ಮನೆಯೊಳಗಿಳಿದು ತಾನು ಹೊರುವಷ್ಟು ಮು
ಚೀಲಗಳ ಹಣವನ್ನು ಹೊತ್ತು ಕೊಂಡು, ತಾನು
ಯಲ್ಲಿ ಏರಿ ಹೋಗಲಾರದೆ, ಬೀಗ ಮುದ್ರೆಗಳಿಂದ
ಸ್ತಾಗಿರುವ ಆ ಕೊಠಡಿಯ ಬಾಗಲಿನ ಬಂದು ಪ
ಯಲ್ಲಿ ಕನ್ನಾ ಕೊರದು ಆ ಗಂಡಿಯಲ್ಲಿ ದೂರಿ
ಆ ಸುಳಿವೆ ಕಂಡು ಈ ನಾಯಿ ಎಲ್ಲಿಂದಲೋ
ರಿದ ಹಾಗೆ ದೂರಿ ಹಾರಿ ಕಳ್ಳನ ಗೋಮಾಳೆಯನ
ಕಚ್ಚಿ ಕೆಡವಿ ಘಟ್ಟಿಯಾಗಿ ಬಗಳಿತು. ಆಗ ಸಾವು
ಗ ಎದ್ದು ಬಂದು ಸತ್ತ ಕಳ್ಳನನ್ನೂ ಬಿದ್ದಿದ್ದ ಹಣ
ಳನ್ನೂ ಬಹು ಕೋಪದಿಂದ ಕಾಲು ಕೆರದು ಮೊ
ಯ ರಭಸವನ್ನೂ ನೋಡಿ ಆಶ್ಚರ್ಯ ಪಟ್ಟು,

ಸಳು ತಟ್ಟಿ ಮುದ್ದಿಟ್ಟು ಸಮುದಾಯಿಸಿ, ಚೀಲಗಳನ್ನು
ಕಲಿ ಮನೆಯೊಳಕ್ಕೆ ಹೊರಿಸಿ, ಕಳ್ಳನ ಹೆಣವನ್ನು
ಎಡಿಸಿ, ತರುವಾಯ ತನ್ನ ಸೂಲದ ಅಸಲು ಜುಂಗಡಿ
ಸಂತೆಂದು ಒಳ್ಳೆ ಬಾಷೀಕಾಗದದಲ್ಲಿ ರಶೀದಿ ಬರೆದು
ಗಲವಾದ ಹಣೆಯಲ್ಲಿ ಕಟ್ಟಿ, ಅದನ್ನು ನಿನ್ನ ಸಾಕಿದ
ಹೋಗೆಂದು ಕಳುಹಿಸಿ ಬಿಟ್ಟನು. ಅದು ಬಹು ಬುದ್ಧಿ
ಯಿ ಆದ್ದರಿಂದ ಅಲ್ಲಿಂದ ಹೊರಟು ಸಾಕಿದ ತುರಕ
ಗೆ ಓಡಿ ಬಂತು. ಆಗಲೇ ತುರಕನು ಮನೆಯಿಂದ
ನೀದಿಯಲ್ಲಿ ಬರುತ್ತಾ, ದೂರವಾಗಿ ಬರುವ ನಾಯ
, ತಪ್ಪಿಸಿಕೊಂಡು ಬಂತೆಂದು ಕೋಪಿಸಿ, ಕೆಟ್ಟ ನಾ
ನಾಲಿಗೆ ವಾಸಿಯನ್ನು ಹೋಗಲಾಡಿಸಿದ ನಿನ್ನ ತಲೆ
ದೇ ಪೆಟ್ಟಿನಲ್ಲಿ ಒಡೆದು ಕೊಂದು ಹಾಕಲೋ, ಎಂದು
ಡೊಣ್ಣೆಯನ್ನು ಮೇಲಕ್ಕೆತ್ತುವಾಗ, ನಾಯ ನೆತ್ತಿ
ಯನ್ನು ಕಂಡು, ಓದಿ ಸಂತೋಷದಿಂದ ಅಯ್ಯೋ
, ನಾಯನ್ನು ಕೊಂದು ಹಾಕುತ್ತಾ ಇದ್ದೆನಲ್ಲಾ,
ಸೂ ಬದಿಕಿತು, ನನಗೂ ಮೇಲಾಯಿತು, ಅಂದನು.
ಯಿಂದ ಕ್ಷೇಮವೂ, ತ್ವರೆ ಪಟ್ಟರೆ ಕೇಡೂ ಸಂಭ

ಮುವ್ವತ್ತನೇ ಕಥೆ.

ರಾಯನ ತಾಯಿಯ ಫಲದಾನ.

ನರಪತಿ ಕೃಷ್ಣರಾಯರು ಅನೆಗೊಂದಿ ಸಂಸ್ಥಾನ
ಾದ ಕರ್ನಾಟಕದೇಶ ಯಾವತ್ತು ಏಕರಾಜ್ಯವಾಗಿ

ಆಳುತ್ತಿದ್ದರು. ಆ ಸಂಸ್ಥಾನಕ್ಕೆ ಅಪ್ಪಾಜಿ ಎಂಬ
ಮುಖ್ಯ ಪ್ರಧಾನಿಯಾಗಿ ಇದ್ದನು. ಆ ಸಂಸ್ಥಾನ
ವಿದ್ವಾಂಸರೂ ಕವೀಶ್ವರರೂ ಇರುವರು. ಅವರೆ
ತ್ಕವಿಯಾಗಿಯೂ ವಿಕಟಕವಿಯಾಗಿಯೂ ಪ್ರಸಿದ್ಧನ
ರಾಮಕೃಷ್ಣನಿರುವನು. ಆ ಸಂಸ್ಥಾನದಲ್ಲಿ ಯುಕ್ತಿ
ವಿನೋದ ಹಾಸ್ಯ ಮೊದಲಾದವುಗಳಿಗೆ ಅವನು ತಕ್ಕ
ಗಿರುವನು. ರಾಯರ ತಾಯಿಯಾದ ನಾಗಮಾಂಬ
ಕವಾದ ರಾಜ ಭೋಗ ಸೌಖ್ಯಗಳನ್ನನುಭವಿಸಿ ಪ
ಪರೋಪಕಾರಗಳನ್ನು ಅನೇಕವಾಗಿ ಮಾಡಿ, ಮಹ
ಮಹಾ ರಾಜಮಾತೆ, ಪುಣ್ಯವಂತೆ, ಎಂದು ಕೀರ್ತಿ
ಯನ್ನು ಪಡದು, ಬಹುಕಾಲ ಬದಿಕಿ, ಅವಸಾನಕ
ವಸದಲ್ಲಿ ನಿತ್ಯವೂ ಮಾಡುವ ದಾನಗಳಿಗಿಂತಲು
ಗೋದಾನ, ಭೂದಾನ, ಕನ್ಯಾದಾನ, ಹಿರಣ್ಯದಾನ,
ಗಳನ್ನೆಲ್ಲಾ ಮಾಡಿ, ಫಲದಾನ ಕಾಲದಲ್ಲಿ ಸಿದ್ಧವಾ
ಫಲಗಳನ್ನು ದಾನ ಮಾಡಿದ್ದಲ್ಲದೆ, ಹಣ್ಣುಗಳೊಳಗೆ
ದ್ದು ಮಾವಿನ ಹಣ್ಣೆಂದು ತಿಳಿದು ಅದನ್ನು ತರಿ
ಸುಪುತ್ರನಾದ ರಾಯನಿಗೆ ಆಜ್ಞಾಪಿಸಿದಳು. ಆಗ
ಣ್ಣಿನ ಕಾಲವಲ್ಲದ್ದರಿಂದ ಉಗ್ರಾಣದಲ್ಲಿ ಜೇನು ತ
ವೆಗಳಲ್ಲಿ ಊರಹಾಕಿದ್ದ ಶ್ರೇಷ್ಠವಾದ ಮಾವಿನ ಹ
ಆತನು ತರಿಸುವಷ್ಟರಲ್ಲೇ ಕಾಲ ಪರಿಪಕ್ವವಾಗಿ
ದೈವ ಗತಿಯನ್ನು ಹೊಂದಿದಳು. ಹೀಗೆ ಫಲದಾ
ಕೆಂಬ ಆಶೆಯು ನೆರವೇರದೆ ಹೋದ ತಾಯಿಯ
ರಾಯನು ಮಹಾ ವ್ಯಸನ ಪಟ್ಟು, ಇದಕ್ಕೇನು

ೃಪ್ತಿ ಉಂಟಾದೀತೆಂದು ಪುರೋಹಿತರು ಮುಂತಾದ
ನ್ನ ಕೇಳಿದ್ದಕ್ಕೆ ಭಂಗಾರಿನ ಮಾವಿನ ಹಣ್ಣುಗಳನ್ನು
ಬ್ರಾಹ್ಮರಿಗೆ ಕೊಟ್ಟರೆ ಹೊರ್ತು, ಆ ತಾಯಿಯ ರೂ
ತಕ್ಕೆ ತೃಪ್ತಿಯಾಗಲಾರದೆಂದು ಅವರು ಹೇಳಿದ
ಬಹಾ ರಾಯನು ಭಂಗಾರದಿಂದ ಸಾವಿರಾರು ಮಾವಿನ
ನ್ನ ಮಾಡಿಸಿ, ಅನೇಕ ಬ್ರಾಹ್ಮರಿಗೆ ದಾನವಾಗಿ ಕೊಟ್ಟ
ವಿಕಟಕವಿಯಾದ ರಾಮ ಕೃಷ್ಣನು ಈ ಸಂಗತಿ
ರಿತು ಬಹಳ ವಿನೋದ ಮಾಡಬೇಕೆಂದು ನೆನೆಸಿ, ರಾ
ಕುನೆಯಿಂದ ದಾನವನ್ನು ತೆಗದು ಕೊಂಡು ಹೊರಟ
ಲ್ಲಾ ಬಹಳ ವಿನಯದಿಂದ ತನ್ನ ಮನೆಗೆ ಕರದು
ೋಗಿ ತಕ್ಕ ಮರ್ಯಾದಿಗಳನ್ನು ಮಾಡಿಸಿ ನಮಸ್ಕಾ
ದ್ದು ನಿಂತು ಕೈ ಜೋಡಿಸಿಕೊಂಡು, ಬ್ರಾಹ್ಮಣೋ
ಹು ದಿವಸಗಳು ಬದಿಕಿದ ನಮ್ಮ ತಾಯಿಗೆ ಕಡೆಗಾ
ರ್ವಾಯುವು ಬಂದು ಕೀಲು ಕೀಲು ಬಿಕ್ಕೊಂಡು
ವಾಗ ಅವಳು ನನ್ನ ನೋಡಿ ಮಗನೇ, ನನಗೊಂ
ಕಿಸಿದರೆ ಈ ಬಿಗುವು ಬಿಟ್ಟು ಇನ್ನೂ ಕೆಲವು ದಿವ
ವೆನೆಂದು ಸೈಗೆ ಮಾಡಿದಳು, ನಾನು ಬರೆಗೋ
ನನ್ನ ಕೈಲಿರುವ ಪ್ರಕಾರ ಕೆಂಪಗೆ ಕಾಸಿ ತರುವ
ಪ್ರಾಣ ಬಿಟ್ಟಳು, ನನ್ನ ಮಾತೃ ಭೂತಕ್ಕೆ ತೃಪ್ತಿ
ಕಾದರೆ ನಿಮಗೆ ತಲಾ ಒಂದೊಂದು ಬರೆ ತೆಗೆಯ ಬೇ
ಬರೆಗಳನ್ನು ಅಂಗೀಕರಿಸಿ ನನ್ನ ತಾಯಿಗೆ ತೃಪ್ತಿ
ರೋ? ಇಲ್ಲದೆ ರಾಯದತ್ತವಾದ ಭಂಗಾರದ ಮಾವಿ
ನ್ನು ನನಗೆ ಕೊಟ್ಟು ಬಿಟ್ಟು ನೆಮ್ಮದಿಯಾಗಿ ಮು

ನೆಗೆ ಹೋಗುತ್ತೀರೋ, ಹೇಳಿರಿ? ಇಗೋ ನೋಡಿ
ನೆಯ ತಲಬಾಗಲು ಭದ್ರವಾಗಿ ಹಾಕಿದೆ, ನೂರಾರು
ಗಳು ಕಾದು ಸಿದ್ಧವಾಗಿದೆ, ನನ್ನ ಸೇವಕರು ನಡು
ನೀವು ಬೆನ್ನು ತೋರಿಸುವದೇ ಸಾವಕಾಶವೆಂದು
ಬ್ರಾಹ್ಮರೆಲ್ಲರೂ ಘಾಬರಿ ಪಟ್ಟು ಭಂಗಾರದ ಮು
ಗಳನ್ನೆಲ್ಲಾ ಅವನಿಗೆ ಕೊಟ್ಟುಬಿಟ್ಟು ಪ್ರಾಣದಿಂದ
ರಟು ಬಂದು ಈ ವರ್ತಮಾನವನ್ನು ರಾಯನಿಗೆ
ತನು ಬ್ರಾಹ್ಮರ ಗೋಳಾಟವನ್ನು ನೋಡಿ ವಿಕಟ
ಕರಿಸಿ, ಹೀಗ್ಯಾಕೆ ಮಾಡಿದಿ? ಎಂದು ಕೇಳಿದನು.
ಮಹಾಸ್ವಾಮಿ, ನನ್ನ ತಾಯಿಯ ಆಶೆಯನ್ನು ತೀ
ದು ಕೆಂಪಗೆ ಕಾದ ಬರೆಗೋಲನ್ನು ಈ ಸಭೆಯವ
ಸಿದ ಮಾತ್ರದಲ್ಲೇ ಅವರು ಭಯಪಟ್ಟು ಸ್ವಾಮಿಂ
ಟ್ಟ ಫಲದಾನವನ್ನು ನನಗೆ ಅನುಗ್ರಹ ಸಹಿತವಾಗಿ
ನಾನೇನೂ ತಪ್ಪು ಮಾಡಲಿಲ್ಲ, ಎಂದು ಉತ್ತರ
ರಾಯರು ನಕ್ಕು ನೀನು ಮೊದಲೇ ಕುಚೋದ್ಯಗಾ
ಹ್ಮರ ಬಡವೆಯನ್ನು ಅಪಹರಿಸ ಬಾರದೆಂದು ಹೆ
ಬಿಟ್ಟು, ಇವನು ಮಾಡಿದ ವಿನೋದಕ್ಕೆ ಮೆಚ್ಚಿ ಇ
ಹಳವಾಗಿ ಬಹುಮಾನ ಕೊಟ್ಟನು. ಹೀಗೆಯೇ
ಹಾಸ್ಯಗಾರರು ಕಾಲಕ್ಷೇಪ ಮಾಡುತ್ತಿರುವರು.

ಮೂವತ್ತೊಂದನೇ ಕಥೆ.

ದಿವ್ವಗಳೂ ಒಕ್ಕಲಿಗನೂ.

ಅಡವಿಯಲ್ಲಿ ಒಂದು ದೊಡ್ಡ ಹುಣಸೇ ಮರ ಉಂ
ಮರವು ಬಹಳ ದಿವ್ವಗಳಿರುವದಕ್ಕೆ ಆಸರೆಯಾಗಿ
ನ್ನು ನೇಗಲು ತುಂಡುಗಳಿಗಾಗಿ ಕಡಿದು ಕತ್ತರಿ
ಂದು ನೆನಸಿ ಕೊಡ್ಲಿಯನ್ನು ಹೆಗಲ ಮೇಲೆ ಇ
ಬ್ಬ ಒಕ್ಕಲಿಗನು ಬಂದನು. ಹೀಗೆ ತಾವಿರು
ತ್ತರಕ್ಕೆ ಕೊಡ್ಲಿ ತೆಕ್ಕೊಂಡು ಬರುವವನನ್ನು
ು ಪಡುತ್ತಿರುವ ದಿವ್ವಗಳಿಗೆ ಮತ್ತು ಹೆಚ್ಚಾಗಿ ಭ
ು ಹಾಗೆ ಅವನು ತನ್ನ ಕೈ ಕೊಡ್ಲಿಯಿಂದ ಅವು
ಬಂದು ಪೆಟ್ಟು ಹಾಕಿದನು. ಆಗ ಆ ದಿವ್ವಗಳೆ
ಕೂಡಿ ಬಂದು, ಅಯ್ಯಾ! ಅಪ್ಪಾ! ಕುಯ್ಯೋ! ಮೊ
ಮರವನ್ನು ಯಾಕೆ ಕಡಿಯುತ್ತೀ? ನಿನಗೆ ಇ
ೋಜನವೇನು? ಎಂದು ಕೇಳಿದವು. ಎಳ್ಳು ಹೊ
ಳುವ ನೇಗಲಿಗಾಗಿ ಇದನ್ನು ಕಡಿಯುತ್ತೇನೆಂದು
ಹೇಳಲು, ಇದನ್ನು ಕಡಿಯ ಬೇಡ, ಈ ಮ
ಮೇಲೆ ನಾವು ಪರದೇಶಿಗಳಾಗಿ ಹೋಗುತ್ತೇವೆ,
ಕ್ಕೆ ಮೂರು ಖಂಡಗ ಎಳ್ಳು ತಂದು ಕೊಡು
ನುರದ ಗೋಜಿಗೆ ಬರಬೇಡವೆಂದು ದಿವ್ವಗಳು ಹೇ
ಮಾತಿಗೆ ಒಡಂಬಟ್ಟು ಒಕ್ಕಲಿಗನು ಮನೆಗೆ ಬಂದ
ಗಳು ಎಳ್ಳನ್ನು ಕೂಡಿಸುವ ತೊಂದರೆಯಿಂದ ವ್ಯ
ಇರುವಾಗ, ಅಲ್ಲಿಗೆ ಎಲ್ಲಿಂದಲೋ ಬಂದು
ಬಂದು ಯಾಕೆ ವ್ಯಸನ ಪಡುತ್ತೀರಿ ಎಂದು

ಅವುಗಳ ಕೇಳಿ ಅವುಗಳು ಕಷ್ಟ ಪಡುವ ಸಂಗ
ಕೊಂಡು, ಈ ಒಕ್ಕಲಿಗನಿಗೆ ಅಂಜುವದ್ಯಾಕೆ? ಎ
ನು? ಬಂದೀ ಪೆಟ್ಟಿನಲ್ಲಿ ಹೊಡದು ಹಾಕಿ ಬರುತ್ತೆ
ಸಾಳೆ ಮಾತು ಕೊಚ್ಚಿ, ಆ ರಾತ್ರಿ ಈ ಒಕ್ಕ
ಕೊಪ್ಪಿಗೆ ಮನೆಯ ದೂಲದ ಮೇಲೆ ಬಂದು ಕೂ
ಆಗ ಅವನು ಕೆಲವು ಎತ್ತುಗಳಿಗೂ ದನಗಳಿಗೂ
ಬರೆಗಳು ಹಾಕಿಸುತ್ತಾ, ಹೊಸ ದೆವ್ವವನ್ನು
ಬಾ, ಅದಕ್ಕೆ ಚನ್ನಾಗಿ ಬರೆ ಹಾಕಬೇಕು ಅಂದನು
ಎತ್ತಿನ ಹೆಸರಾಗಿತ್ತು, ಅದನ್ನರಿಯದೆ ಈ ಹೊಸ
ಣಕ್ಕೆ ಬಂತಲ್ಲಾ ಎಂದು ಭಯ ಪಟ್ಟು, ದೂಲದಿಂದ
ಲಿಗನ ಕಾಲು ಮೇಲೆ ಬಿದ್ದು, ಅಯ್ಯಾ, ಅಪ್ಪಾ,
ಡೆಂದು ಬೇಡಿ ಕೊಂಡಿತು. ಒಕ್ಕಲಿಗನು ನೀ
ಬಂದಿ ಎಂದು ಕೇಳಿದ್ದಕ್ಕೆ ಅದು ನಿನ್ನ ಒಕ್ಕಲಾ
ನಿನಗೆ ಎಳ್ಳು ಬೇಕೋ ಎಣ್ಣೆ ಬೇಕೋ ಕೇಳಿ ಬಾ
ಸಿದವು ಅನ್ನಲು, ಅವನು ನನಗೆ ಎಣ್ಣೆಯೇ ಬೇಕ
ಡ, ಈ ಮಾತು ಹೇಳು ಹೋಗೆಂದು ಓಡಿಸಿದನು.
ಈ ಹೊಸದೆವ್ವವು ಹೋಗಿ ಈ ಮಾತನ್ನು ಊರು
ಹೇಳಿತು. ಅವು, ಅಪ್ಪಾ, ಇದು ನೀನು ಮಾಡಿದ ಅ
ಓಡ ಬೇಕೆಂದು ಮದ್ದು ತಿಂದು ತೂಗಿಡಿಸಿ ಬಿದ್ದಿ
ಮರ ಹತ್ತಿ ಬುಡ ಕಡಪ ಹಾಗಾಯಿತು, ಎಂದು ದ
ಇನ್ನೇನು ಮಾಡೋಣ ಸಾಯಲಾರದ ಬಡತನಕ್ಕೆ
ವೇ ನಿಕ್ಷೇಪ ಎಂದು ನಿಶ್ಚಯ ಮಾಡಿ ಆ ದೆವ್ವಗಳ
ವನ್ನು ಬಿಟ್ಟು ದಿಕ್ಕಾಪಾಲಾಗಿ ಓಡಿ ಹೋದವು.

ಮೂವತ್ತೈದನೇ ಕಥೆ.

ತಾರತಮ್ಯವನ್ನು ಕುರಿತದ್ದು.

ಸನು ಬೇಟೆಗೆ ಹೊರಟು ಬೇಟೆ ಆಡುತ್ತಾ ಆಡು
ಗೊಂಡು ಅಡವಿಯಲ್ಲಿ ಹರಿಯುವ ಹೊಳೆಗೆ ಬಂ
ಕುಡಿದು ಧಡದಲ್ಲಿರುವ ಮರದ ನೆರಳಿನಲ್ಲಿ ಕೂತು
ಆಗ ಅವನು ಆ ಹೊಳೆಯಲ್ಲಿ ಬಲೆ ಬೀಸಿ ಮೀನು
ಂಡನ ಸಂಗಡ ಮೀನುಗಳನ್ನಾದು ಬುಟ್ಟಿಗೆ ತುಂ
ನ ಅಂಬಿಗಿತ್ತಿಯನ್ನು ಕಂಡನು. ಅವಳು ತುಂಬು
ದ್ದು ಸಂಗಡಲೇ ನೀರು ಮಿಂದು ಬಂದು ಹತ್ತ
ಚಲು ಚಿಗುರನ್ನು ಕಿತ್ತು ಬೇಕಾದಷ್ಟು ತಿಂದು,
ಸೆ ನೀರು ಕುಡಿದು, ಮಗುವನ್ನೆತ್ತಿಕೊಂಡು ಗಂ
ಹೋಗುತ್ತಿದ್ದಳು. ಅದನ್ನು ನೋಡಿ ಅರ
ರ್ಯದಿಂದ, ಆ ಅಂಬಿಗರವನನ್ನು ಕರದು ಅವನಿಂದ
ನ್ನೆಲ್ಲಾ ವಿಸ್ತಾರವಾಗಿ ತಿಳುಕೊಂಡು ತನ್ನೊಳ
ಂತೆಂದನು, ಲೋಕದಲ್ಲಿರುವ ಸ್ತ್ರೀ ಜಾತಿಯೆ
ಎಲ್ಲಾ ಸ್ತ್ರೀಯರಿಗೂ ಬಸುರು ಹೆರಿಗೆ ಬಂ
ೀ ಹೊತ್ತು ಬೇರೆ ಬೇರೆಯಾಗಿರದು, ಇಂಥಾ
ಅಂಬಿಗಿತ್ತಿಯು ಪ್ರಸವಿಸಿ ನೆಮ್ಮದಿಯಾಗಿರುವ
ನಮ್ಮ ರಾಜಾಂತಃಪುರದಲ್ಲಿರುವ ಪಟ್ಟದ ರಾಣಿ
ಸು ಇರಬಾರದೋ ? ಆವರಿಗೆ ರಾಜೋಪಚಾ
ಥ ಪಥ್ಯಗಳು ಪಂಡಿತರಾದ ವೈದ್ಯರ ವಿಚಾರಣೆ
ಕೆಯುವದರಿಂದ ಅವರಿಗೆ ಆಯಾಸವೂ ರಾಜಸ
ಂ, ಇದರಿಂದಲೇ ಹೆತ್ತ ಮೂರು ತಿಂಗಳ ಪರಿ

ಯಂತರವು ಹೊರಗೆ ಹೊರಡದೆ ಕೊಠಡಿಗಳಲ್ಲಿ
ರೆ, ಇನ್ನು ಮೇಲೆ ಇದಕ್ಕೆ ತಕ್ಕ ಬಂದೋಬ
ಬೇಕೆಂದು ಅರಮನೆಗೆ ಬಂದನು. ಆಗ ಪಟ್ಟಣ
ಣಿಯಾಗಿ ಏಳೆಂಟು ತಿಂಗಳಾಗಿತ್ತು. ತನ್ನ ಯೋ
ರುವದಕ್ಕೆ ಇದೇ ಸಮಯವೆಂದು ಈ ಅರಸನು
ಯ ದಾಸಿಗಳನ್ನೂ ಪಂಡಿತರನ್ನೂ ಕರಿಸಿ ಗರ್ಭಿಣಿ
ಗೆ ಹೆಚ್ಚುಗಟ್ಟಿ ಉಪಚಾರಗಳನ್ನು ಮಾಡ ಬೇಕ
ಳು ಕೊಡಬೇಡಿರಿ, ಪಥ್ಯ ವಿಡಬೇಡಿರಿ, ಎಂದು
ಹೊಳೀ ದಡದಲ್ಲಿ ನೀರು ಮಿಂದ ಅಂಬಿಗಿತ್ತಿಗೆ ಕ
ರು ಔಷಧವಾಯಿತು, ಅವಳು ಕುಡಿದ ಮೂರು
ಪಥ್ಯವಾಯಿತು, ಇಂಥಾವಳು ಮಗು ಹೆತ್ತು ನೆಂ
ಲಿಲ್ಲವೋ? ಸ್ತ್ರೀಯರಲ್ಲಿ ಭೇದ ಉಂಟೋ? ಎ
ಇವರಿಗೆ ಮಾತ್ರ ಇಂಥಾ ಉಪಚಾರಗಳು ಯಾತ
ಕೆಲಸವಿಲ್ಲ, ಏನಾಗುತ್ತದೆಯೋ ನೋಡೋಣ, ಎ
ಅಂತಃಪುರದವರನ್ನು ಕಳುಹಿಸಿ ಬಿಟ್ಟನು. ಆಗ
ಈ ಸಂಗತಿಯನ್ನೆಲ್ಲಾ ತಿಳಿದು ಈ ಅವಿವೇಕ
ವಿವೇಕ ಉಂಟು ಮಾಡಬೇಕೆಂದು ನೆನೆಸಿ, ಮಹ
ದ್ದರಿಂದ ಅರಮನೆಯಲ್ಲಿರುವ ಶೃಂಗಾರ ವನದ ಜ
ನ್ನೆಲ್ಲಾ ಕರಿಸಿ, ಈ ಹೊತ್ತುವೊದಲುಗೊಂಡು ಹು
ಳಿಗೆ ನೀರು ಹಾಕ ಬೇಡಿರಿ, ಸಣ್ಣ ಗಿಡಗಳ ಪಾತಿಗ
ಗೊಬ್ಬರ ಹಾಕ ಬೇಡಿರಿ, ಕಳೆ ಕೀಳ ಬೇಡಿರಿ,
ರಣೆ ನೀವೇನೂ ಮಾಡದೆ ಸುಮ್ಮನೆ ಇರಿ, ಎಂದು
ಆಜ್ಞಾಪಿಸಿದಳು. ಅವರು ಅದೇಪ್ರಕಾರ ಸುಮ್ಮ

ಮೂರು ನಾಲ್ಕು ದಿವಸದ ಮೇಲೆ ಆ ಉದ್ಯಾನವನ
ಆಹಾರಾರ್ಥವಾಗಿ ಬಂದು ಅಲ್ಲಿ ಗಿಡಗಳೆಲ್ಲಾ ನೀರಿಲ್ಲದೆ
ಪಾತಿಗಳಲ್ಲಿ ಕಳೆ ಕಸ ಕಡ್ಡಿ ತುಂಬಿ ನೋಡುವ
ಗಿ ಇಲ್ಲದೆ ವ್ಯಸನ ಪಡುವ ಹಾಗೆ ಇದ್ದದ್ದನ್ನು
ಕ್ಕೆ ಹೀಗಾಯಿತೆಂದು ವಿಚಾರಿಸಿದನು. ರಾಣಿಯು
ಕಾರವೆಂದು ಚಾಕರರು ಹೇಳಿದರು. ಆ ಮಾತನ್ನು
ನು ರಾಣಿಯ ಒಳಗೆ ಹೋಗಿ ಯಾತಕ್ಕೆ ಹೀಗೆ
ದು ಕೇಳಲು; ಆಕೆ ಎಲೈ ಅವಿವೇಕ ಪುಂಜವೇ,
ಗೆ ಆರೇಕೆ ಮಾಡುವವರ್ಯಾರು, ಆ ಗಿಡಗಳೂ ಬಂ
ಗಳೂ ಒಂದೇ, ಏನೂ ಭೇದವಿಲ್ಲ, ಇದಕ್ಯಾತಕ್ಕೆ
ದು ದೃಷ್ಟಾಂತವಾಗಿ ಹೇಳಿದಳು. ರಾಯನು ನಾ
ರಾಣಿಗೆ ಯಥಾಪ್ರಕಾರ ಉಪಚಾರ ಮಾಡುವದಕ್ಕೆ
ಟ್ಟನು. ಹಾಗೆಯೇ ಶೃಂಗಾರ ವನದ ಆರೇಕೆಗೆ
ಪ್ಪಣೆ ಆಯಿತು. ಹೀಗೆ ತಾರತಮ್ಯಗಳರಿತು
.

ಮುವ್ವತ್ತು ಮೂರನೇ ಕಥೆ.

ಅರಸನೂ ಗಿಣಿಯೂ.

ರಸನು ಒಂದು ಗಿಣಿಯನ್ನು ಸಾಕಿದನು. ಅದು
ದೇವಲೋಕದ ಗಿಣಿಗಳೊಡನೆ ಸ್ವರ್ಗಕ್ಕೆ ಹಾ
ಅಲ್ಲಿದ್ದ ಮಾವಿನ ಹಣ್ಣನ್ನು ತಿಂದು ಬೀಜವನ್ನು
ದು ಅರಸನಿಗೆ ಕೊಟ್ಟು, ಈ ಬೀಜದಿಂದ ಹು

ಟ್ಟಿದ ಮರದಲ್ಲಿ ಬಿಟ್ಟು ಫಲವನ್ನು ತಿಂದವರು ಸ
ರೂ ಪ್ರಾಯದವರಾಗುವರೆಂದು ಹೇಳಿತು. ಆ
ಅರಸನು ಆ ಬೀಜವನ್ನು ತನ್ನ ಸ್ವಂತ ತೋ
ಮೊಳತ ಕೂಡಲೇ ಆ ಗಿಡವನ್ನು ಚನ್ನಾಗಿ
ಸಿದನು. ಅದು ಬೆಳೆದು ಮರವಾಗಿ ಫಲಕ್ಕೆ
ಹೊತು, ಹೀಚು ಕಾಯಿ ದೊಡ್ಡಹಣ್ಣು ಈ
ಮವಾಗಿ ಫಲ ಹಿಡಿದಿರುವ ಸಮಯದಲ್ಲಿ ಆ
ಬಂದು ಹಣ್ಣು ನಾಡು ಗಿಣಿಯಿಂದ ಸ್ವಲ್ಪ
ಮರದಲ್ಲೇ ಇರುವಾಗ, ಬಂದು ಗರುಡ ಪಕ್ಷಿ
ರ್ಪವನ್ನು ಕೊಂದು ಹಿಡಿದು ಅಂತರಿಕ್ಷದಲ್ಲಿ ಹೋ
ನೇತಾಡುವ ಸರ್ಪದ ಬಾಯಿಂದ ತೊಟಕ್ಕುವ ವಿ
ದೈವ ಗತಿಯಿಂದ ಆ ಗಿಣಿ ಕಚ್ಚಿದ ಮಾವಿನ ಹಣ್ಣ
ಬಿದ್ದದ್ದರಿಂದ ಆ ಹಣ್ಣು ವಿಷವಾಯಿತು. ಅದ
ಸದ ಮೇಲೆ ತೊಟ್ಟು ಮಾಗಿ ಕೆಳಕ್ಕೆ ಬೀಳಲ
ಥಮ ಫಲವೆಂದು ತೋಟದವರು ಅರಸನಿಗೆ ತ
ರು. ಆಗ ಅರಸನ ಗುರುವು ಗ್ರಹಚಾರ ಸಾವ
ದು ಅರಸನ ಬಳಿಯಲ್ಲಿ ಕೂತನು. ಈ ಪ್ರ
ಗುರುಗಳಿಗೆ ಯೋಗ್ಯವಾದ್ದೆಂದು ಅರಸನು ವಿನ
ಟ್ಟನು. ಸಂಗಡಲೇ ಆ ಗುರುವು ಅದನ್ನು ಭ
ನು ಕೂತ ಹಾಗೆಯೇ ದೀರ್ಘ ನಿದ್ರೆ ಹೋ
ಗುರು ಹಿಂಸೆಯನ್ನು ಮಾಡಿದೆನೆಂದು ಅರಸನು
ಪಟ್ಟು, ಗುರು ದ್ರೋಹಿಗೆ ತಕ್ಷಣ ಮರಣವೇ ಶಿಕ್ಷೆ
ನ್ನು ತಾನೇ ಕೊಂದು ಕೊಳ್ಳುವದಕ್ಕೆ ಸಿದ್ಧವಾಗಿ,

ನೆಕೊಟ್ಟ ಸ್ವಾಮಿ ದ್ರೋಹಿ ಗಿಣಿಯನ್ನು ಕೊಂದು
ಸೊದಲನೇ ಕೆಲಸವೆಂದು, ಪಂಜರದ ಗಿಣಿಯನ್ನು
ನೇ ಅದರ ಕೊರಳ ಕಿವಿಚಿ, ದ್ರೋಹಿಯೇ,
ಳ ಬಿಸಾಟನು. ಅದು ದೇವಲೋಕದ ಅಮೃತ
ಸಿದಿರುವ ಕಾರಣ ಸಾಯದೆ ಮೇಲಕ್ಕೆ ಹಾರಿ ಅಂ
ತು, ಎಲೈ ರಾಯನೇ, ನಾನು ದ್ರೋಹಿಯಲ್ಲ,
ಕೆಲಸವಿಲ್ಲ, ತಿಳಿಯದ ಹಾಗೆ ಬಂದ ಅಪಾಯವ
ಉಪಾಯದಿಂದ ಪರಿಹರಿಸ ಬೇಕು, ನಾನು ನಿನಗೆ
ಸು ಕೊಟ್ಟದ್ದಕ್ಕೆ ನಿನ್ನಿಂದ ಕೊಲ್ಲಲ್ಪಟ್ಟಾಗ್ಯೂ ಆ
ತಿಂದವನಾದಕಾರಣ ಸಾಯದೆ ಬದಿಕಿ ಯಿದ್ದೇನೆ,
ಸವನ್ನು ನಿಧಾನಿಸಿ ನೋಡ ಬೇಕು, ನಾನು ಈಗ
ಕಾರಕ್ಕೆ ಅದೇ ಮರದಿಂದ ಮತ್ತೊಂದು ಹಣ್ಣನ್ನು
ಣ್ಣಿನ ರಸವನ್ನು ಈ ಬಿದ್ದಿರುವ ಗುರುವಿನ ಬಾ
ಸಿ ನೋಡೆಂದಿತು. ಅರಸನು ಮಹದಾಶ್ಚರ್ಯವ
ಏ ಹಲ್ಲು ಕಿಟ್ಟಿಕೊಂಡೋಗಿರುವ ಗುರುವಿನ ಬಾ
ಗದ ಕೈ ಹಾಕಿ ಬಾಟ ತೆರದು, ಆ ಹಣ್ಣಿನ
ಡಿಸಿದನು. ಆಗ ಆ ದಿವ್ಯ ರಸವು ಗಂಟ್ಲಲ್ಲಿ ಜಾರಿ
ನಾಭಿ ಸ್ಥಾನವನ್ನು ಹೋಗಿ ಶೇರಲು, ಗುರುವು
ಣ್ಣು ತೆರದು ನಿದ್ದೆ ಹೋದವನು ಎದ್ದ ಹಾಗೆ
ಆಗ ರಾಯನು ಪುನಃ ಗಿಣಿಯನ್ನು ಕರದು ನನ್ನ
ವೇ, ನನ್ನ ಭಾಗ್ಯದ ಗಿಣಿಯೇ, ನನ್ನ ಅಪರಾ
ಮಿಸು, ನನ್ನ ಕಾಪಾಡು, ಎಂದು ಅದನ್ನು ಲಾಲಿಸಿ,
ಂಗೆ ಗುರುವಿಗೆ ಉಪದ್ರವಾಯಿತು? ಆಲೋಚಿಸಿ

ಹೇಳೆನ್ನಲು, ಗಿಣಿಯು ದೂರ ದೃಷ್ಟಿಯಿಂದ ತಿಳಿದು ಆ ಒ
ಫಲ ಮಾತ್ರ ವಿಷವಾದ ಸಂಗತಿಯನ್ನು ಹೇಳಿತು. ಅದ
ಳಿ ಪರಮ ಸಂತೋಷ ಭರಿತನಾಗಿ ಆ ಗಿಣಿಯೊಡನೆ ಅರ
ಬಹು ಕಾಲ ರಾಜ್ಯವಾಳಿದನು.

ಮುವ್ವತ್ತುನಾಲ್ಕನೇ ಕಥೆ.

ಉಪಾಧ್ಯನೂ ಹುಲಿಯೂ.

ಧನಪಾಲಶೆಟ್ಟಿ ಎಂಬ ಸಾವುಕಾರನಿಗೆ ಶೀಲವಂತೆ ಎಂಬ
ಳು ಹುಟ್ಟಿದಳು. ಆ ಕೂಸಿನ ಜಾತಕವು ರಾಜಯೋಗ
ನ್ನವಾಗಿ ಇತ್ತು. ಅಂಥಾ ಮಗಳನ್ನು ಪಡೆದ ಸಾವುಕಾರನ
ತೋಷದಿಂದ ದಿನ ದಿನವು ಬಾಲಚಂದ್ರನ ಹಾಗೆ ಬೆಳೆಯು
ವ ಮಗಳಿಗೆ ಐದು ವರುಷ ತುಂಬಲು ಅವಳಿಗೆ ವಿದ್ಯಾಭ್ಯ
ಮಾಡಿಸಬೇಕೆಂದು ನೆನಸಿ, ಬುದ್ಧಿವಂತನಾದ ಉಪಾಧ್ಯನಿ
ತ್ತು ವರಹ ಸಂಬಳ ಮಾಡಿ ಈ ಮಗುವಿಗೆ ಚನ್ನಾಗಿ ವಿದ್ಯೆ
ಕಲಿಸಿ ಕೀರ್ತಿ ಪಡಿಯಿರೆಂದು ಉಪಾಧ್ಯನ ವಶಕ್ಕೆ ಮಗಳ
ಒಪ್ಪಿಸಿದನು. ಆ ಹುಡಿಗಿ ಮಹಾ ಸೌಂದರ್ಯವುಳ್ಳವಳಾದಾ
ಶೀಲವಂತೆ ಎಂಬ ತನ್ನ ಹೆಸರಿಗೆ ತಕ್ಕ ಒಳ್ಳೆ ಸ್ವಭಾ
ಗುಣವೂ ಉಳ್ಳವಳಾಗಿದ್ದಳು. ಆದ್ದರಿಂದ ಅವಳು ವಿದ್ಯಾ
ರುವಿಗೆ ತಕ್ಕ ಸೇವೆಯನ್ನು ವಿಶ್ವಾಸದಿಂದ ಮಾಡುತ್ತಾ
ಸಕಲ ವಿದ್ಯಾ ಪಾರಂಗತಳಾದಳು. ಹೀಗೆ ಹತ್ತು ಹನ
ದು ವರ್ಷ ತುಂಬಲು ತನ್ನ ಮಗಳಿಗೆ ಋತುಕಾಲಾ
ತಿಳಿದು ಆ ಸಾವುಕಾರನು ಮಗಳನ್ನು ಪತ್ರಕ್ಕೆ ಕರಿಸ

ಮಗುವೇ, ನಿನಗೆ ಎಲ್ಲಾ ವಿದ್ಯೆಯೂ ಬಂತು, ಗುರು
ಣೆ ಕೊಟ್ಟು ಉಪಾಧ್ಯನ ಕೈಲಿ ಅಪ್ಪಣೆ ತೆಕ್ಕೊಂಡು ಮು
ಯಲ್ಲೇ ಇರಬೇಕು, ಇನ್ನು ಮೇಲೆ ಮತೆಕ್ಕೆ ಹೋಗ ಕೆಲ
ಿಲ್ಲವೆಂದು ನೇವಿಸಿದನು. ತಂದೆ ಹೇಳಿದ ಮೇರಿಗೆ ಗುರು
ದಕ್ಷಿಣೆ ಕೊಟ್ಟು ಅಪ್ಪಣೆ ತೆಗದು ಕೊಳ್ಳುವದಕ್ಕೆ ಈ
ಕೆ ತಟ್ಟೇ ತುಂಬ ರತ್ನಗಳನ್ನು ತುಂಬಿಕೊಂಡು ಉಪಾ
ಬಳಿಗೆ ಬಂದು ಮುಂದಿಟ್ಟು ನಮಸ್ಕರಿಸಿ, ತಂದೆ ಹೇಳಿದ
ತನ್ನು ತಿಳಿಸಿ, ಅಪ್ಪಣೆ ಆಗಬೇಕು, ಮನೆಗೆ ಹೋಗುತ್ತೇ
ಅಂದಳು. ಅದಕ್ಕಾ ಉಪಾಧ್ಯನು ಮನಶ್ಚಾಪಲ್ಯದಿಂದ
ದು ಮುಂದು ನೋಡದೆ ಎಲೇ ಹೆಣ್ಣೇ, ಈ ರತ್ನಗಳಿಗೋಸ್ಕ
ನಗೆ ನಾನು ವಿದ್ಯೆ ಹೇಳಲಿಲ್ಲ, ಕನ್ಯಾರತ್ನವಾವ ನಿನ್ನನ್ನು
ವೆಯಾಗಬೇಕೆಂದು ನಾನಾ ಪಾಡುಗಳು ಪಟ್ಟೆನು, ನಾನು
ವಕನಲ್ಲ, ಕುರೂಪಿಯಲ್ಲ, ಬ್ರಾಹ್ಮಣನು, ನನ್ನ ಆಶೆಯನ್ನು
ರ್ಥ ಮಾಡಿದರೆ ನಿನಗೆ ಒಳ್ಳೇದಾಗುವದಿಲ್ಲವೆಂದು ದುರಾಶೆ
ಬ ಸಮುದ್ರದಲ್ಲಿ ಮುಣುಗಿದನು. ಆಗ ಆ ಸ್ತ್ರೀಯು ನೀ
ನನಗೆ ಗುರುವು, ನಾನು ನಿಮಗೆ ಶಿಷ್ಯಳು, ನೀವು ನನ್ನ
ನಿಮ್ಮ ಮಗಳಂತೆ ಭಾವಿಸಬೇಕು, ಅನ್ಯಥಾ ಯೋಚಿಸ
ದು, ಎಂದು ಅಲ್ಲಿ ನಿಲ್ಲದೆ ಜಾಗ್ರತೆಯಾಗಿ ಮನೆಗೆ ಬಂದಳು.
ಾಧ್ಯನು ದುರಾಲೋಚನೆಯಿಂದ ಅವಳನ್ನು ಗ್ರಹಿಸಬೇಕೆಂ
ಇದ್ದನು. ತರುವಾಯ ಕೆಲವು ದಿವಸಗಳ ಮೇಲೆ ಆ
ಣ್ಣ ಋತುಮತಿಯಾದಳೆಂಬ ವರ್ತಮಾನವನ್ನು ಕೇಳಿ, ಉ
ಾಧ್ಯನು ಸಾವುಕಾರನ ಬಳಿಗೆ ಬಂದು, ಅಯ್ಯಾ, ಇನ್ನೂ
ಕಿದ್ದೀಯಾ? ಎಂದು ವ್ಯಸನದಿಂದ ಮಾತನಾಡಿಸಲು, ಅ

ದೇನೆಂದು ಕೇಳಿದ ಸಾವುಕಾರನಿಗೆ ಪ್ರತ್ಯುತ್ತರವಾಗಿ ಉ
ನು ನಿನ್ನ ಮಗಳು ಮೈ ನೆರೆದ ಮುಹೂರ್ತ ದೋಷದಿ
ನಗೆ ದೊಡ್ಡ ಕೇಡು ಸಂಭವಿಸುವದು, ಅದನ್ನು ತಪ್ಪಿಸಿ
ಳ್ಳ ಬೇಕಾವರೆ ಅವಳು ಸ್ನಾನ ಮಾಡಿದ ಮರುದಿವಸವೇ
ಕಾರ ಮಾಡಿ ಅವಳನ್ನು ಬಂದು ಪೆಟ್ಟಿಗೆಯಲ್ಲಿ ಹಾಕಿ ಸ
ಹರಿಯುವ ಹೊಳೆಯಲ್ಲಿ ಬಿಟ್ಟುಬಿಟ್ಟು ಸಾಖ್ಯವಾಗಿರೆ
ಆ ಮೂಢನು ಆ ಮಾತು ನಿಜವೆಂದು ಅದೇಪ್ರಕಾರ ಮಾ
ನು. ಆ ಪೆಟ್ಟಿಗೆ ಹೊಳೆಯಲ್ಲಿ ತೇಲಿ ಹೋಗುತ್ತಿರುವಾಗ
ಟೆಯಾಡುತ್ತಿದ್ದ ಒಬ್ಬ ಅರಸನು ನದೀ ತೀರಕ್ಕೆ ಬಂದು,
ಹೋಗುವ ಪೆಟ್ಟಿಗೆಯನ್ನು ತಡದು ಈಚಿಗೆ ತೆಗಿಸಿ, ಬ
ನ್ನು ಮುರಿಸಿ ಮುಚ್ಚಳವನ್ನು ತೆರದು ಒಳಗೆ ಅಲಂಕಾರ
ನ್ನೆಯಾಗಿರುವ ಸುಂದರ ಸ್ತ್ರೀಯನ್ನು ನೋಡಿ ಸಂತೆ
ಪಟ್ಟು ನಡದ ವೃತ್ತಾಂತವನ್ನೆಲ್ಲಾ ಅವಳಿಂದ ಕೇಳಿ, ತಾನ
ಟೆಯಲ್ಲಿ ಹಿಡುಕೊಂಡು ಬಂದಿರುವ ಪಡ್ಡಿ ಹುಲಿಯನ್ನು
ಟ್ಟಿಗೆಯಲ್ಲಿ ಹಾಕಿಸಿ, ಮುಚ್ಚಳವನ್ನು ಬೀಗದೊಡನೆ ಮೊ
ಹಾಗೆ ಬಿಗಿದು ಹೊಳೆಯಲ್ಲಿ ತೇಲ ಬಿಟ್ಟು, ಶೀಲವಂತೆಯೆ
ತನ್ನ ಪಟ್ಟಣಕ್ಕೆ ಬಂದು, ಮದುವೆಯಾಗಿ ಸುಖದಿಂದಿ
ಇಲ್ಲಿ ಈ ಚಪಲ ಚಿತ್ತನಾದ ಬ್ರಾಹ್ಮಣನು ಬರುವ ಪೆ
ಎದುರೆದರು ನೋಡುತ್ತಾ, ಊರಿಗೆ ದೂರವಾದ ನದೀ ತೀ
ಕಾದು ಕೊಂಡಿದ್ದು ಪೆಟ್ಟಿಗೆಯನ್ನು ಕಂಡು, ಬಹು ಪ್ರ
ದಿಂದ ಮತ್ತೊಬ್ಬರಿಗೆ ತಿಳಿಯದೆ ತಾನೊಬ್ಬನೇ ಧಡಕ್ಕೆ
ಸಿ ಕೊಂಡು ಬಂದು, ತಾನಿದ್ದ ಊರಿಗೆ ಅವಳನ್ನು ಕರಕೆ
ಹೋದರೆ ಪ್ರಾಣಕ್ಕೆ ಬರುವದು, ಬೇರೊಂದು ಊರಿಗೆ ಕ

ಮೊಡಿಕೊಂಡು ಕೆಲವು ದಿವಸಗಳ ಮೇಲೆ ತನ್ನೂರಿಗೆ
ಬಹುದೆಂದು ನಿಶ್ಚೈಸಿ, ತನ್ನ ಆಲೋಚನೆ ಕೈಕೂಡಿ
ದು, ಬೀಗ ಮುರಿದು ಪೆಟ್ಟಿಗೆ ಮುಚ್ಚಳವನ್ನು ತೆರದ
ಗ "ಹೆಸಿದ ಹುಲಿಗೆ ಹಾರುವಯ್ಯ ಶಿಕ್ಕ್ಯದನೆಂಬ" ಸಾಮು
ರಿಯಾಗಿ ಪಡ್ಡೆ ಹುಲಿಯು ಮಹಾ ಕೋಪದಿಂದೆದ್ದು ಈ
ಕೊರಳ ಹಿಡಿದು ಮೇಲಕ್ಕೆತ್ತಿ ನೆಲಕ್ಕೆ ಕುಕ್ಕಿ ಕುಗ್ಗಿ
ವನ್ನೆಲ್ಲಾ ಹೀರಿ ಹಿಪ್ಪೆಯನ್ನು ಬಿಸಾಟು ಹೋಯಿ
ಆದ್ದರಿಂದ ಮೋಸಗಾರರಿಗೆ ನಾಶವೇ ಸಂಭವಿಸುವದು.

ಮುವ್ವತ್ತೈದನೇ ಕಥೆ.

ಮತದ್ವೇಷ.

ೋಕದಲ್ಲಿ ಶೈವ ವೈಷ್ಣವ ಮತಗಳಿಗೆ ಅಂತರಂಗವನ್ನು
ಸಿ ನೋಡಿದರೆ ಅನ್ಯೋನ್ಯ ಸ್ನೇಹವಿದ್ದಾಗ್ಯೂ ಆಯಾ
ರು ತಮ್ಮ ತಮ್ಮ ಮತವನ್ನು ವೃದ್ಧಿ ಹೊಂದಿಸುವದ
ಸ್ಕರ ಹೊರತರಕ್ಕೆ ವ್ಯಾಜ್ಯ ವಾಡುತ್ತಿರುವರು. ಇದ
ದು ಚಿಕ್ಕ ಕಥೆ ಉಂಟು, ಅದೇನಂದರೆ, ಚೋಳ ದೇಶದ
ರೀ ತೀರದಲ್ಲಿ, ಶ್ರೀರಂಗ ಜಂಬುಕೇಶ್ವರಗಳೆಂಬ ಎರಡು
ಗುಂಟು. ಶ್ರೀರಂಗದಲ್ಲಿ ವೈಷ್ಣವರೂ ಜಂಬುಕೇಶ್ವರ
ವರೂ ಇರುವರು. ಅವರಿಬ್ಬರಿಗೂ ಆಗಿಂದಾಗ್ಯೆ ಹರಿ
ಹರ ಹೆಚ್ಚು ಎಂಬ ವ್ಯಾಜ್ಯವು ಸಾಧಾರಣವಾಗಿ ನ
ತ್ತಿರುವದು. ಹೀಗಿರುವಲ್ಲಿ ಒಬ್ಬ ವೈಷ್ಣವನು ನಿತ್ಯವೂ
ಕೇಶ್ವರಕ್ಕೆ ಉಪಾಡಾನಕ್ಕೆ ಬರುತ್ತಿರುವನು. ಅವನ್ನ

ನೋಡಿ ಶೈವರು ವೈಷ್ಣವ ಕಾಗಿ ನೆಲದ ಮೇಲೆ ನಡಿಯ
ಮೇಲಕ್ಕೆ ಹಾರಿ ಹೋಗಬಾರದೋ ಎಂದು ಅನ್ಯಾಪದೆ
ನಿಂದಿಸುತ್ತಾ ಇರುವರು. ಅದನ್ನು ಕೇಳುತ್ತಲೇ
ಕೋಪ ಬಂದಾಗ್ಯೂ ಆ ಮಾತಿಗೆ ಪ್ರತ್ಯುತ್ತರ ಕೊಟ್ಟ
ಪಾಮಾನ ಹಾಕರೆಂದು ಅವನು ಸುಮ್ಮನಿರುವನು. ಒ
ವಸ ಆ ಈಶ್ವರದೇವಸ್ಥಾನದ ಗೋಪುರದ ಮೇಲೆ
ಕಾಗಿ ಬಂದು ಕುಳಿತು ತನ್ನ ಮೂಗು ಕೊಕ್ಕೆಯನ್ನು
ಕೊಳ್ಳುತ್ತಾ ಇತ್ತು. ಆಗಲೇ ಅದನ್ನು ಈ ಉಪ
ವೈಷ್ಣವನು ಬೀದಿಯಲ್ಲಿ ಬರುವಾಗ ಕಂಡು ಎಲ್ಲೆ ಗೊ
ಮೇಲಿರುವ ಶ್ರೀರಂಗದ ವೈಷ್ಣವಕಾಗಿಯೇ, ನಾನು ಭಿಕ್ಷ
ಎತ್ತಿ ಈ ವೂರಿನವರನ್ನು ಬಡವರು ಮಾಡುತ್ತೇನೆ,
ನಿನ್ನ ಮೂಗಿನ ಕೊನೆಯಿಂದ ಈ ಗೋಪುರ ಪ್ರಾಕಾ
ಸ್ಥಾನವನ್ನೆಲ್ಲಾ ಕೆಡವಿ ಬಿಟ್ಟು ಕಾವೇರಿಯಲ್ಲಿ ಸ್ನಾನ
ಶ್ರೀರಂಗಕ್ಕೆ ಹೋಗು ಎಂದು ಘಟ್ಟಿಯಾಗಿ ಕೂಗಿದನು.
ಮನಸ್ಸಿನಲ್ಲಿರುವ ದ್ವೇಷವು ಎಂದಿಗಾದರು ಹೊರಗೆ ಬ

ಮುವ್ವತ್ತಾರನೇ ಕಥೆ.

ದೀಪವೂ ದಡ್ಡನೂ.

ಒಬ್ಬ ದಡ್ಡನಾದ ದರಿದ್ರನು ತನ್ನ ಅಕ್ಕನನ್ನೂ
ನ್ನೂ ನೋಡಲಿಕ್ಕೆ ಅವರು ಇರುವ ಊರಿಗೆ
ಆ ಭಾವನು ನೆಂಮದಿಪರನಾಗಿ ದೊಡ್ಡ ಮನೆಯನ್ನು
ಕೊಂಡು ಅನ್ನ ವಸ್ತ್ರಕ್ಕೆ ಕಡಮೆ ಇಲ್ಲದೆ ಸುಖ್ಯವಾ

ಮನೆಗೆ ಬಂದ ಈ ದಡ್ಡನಿಗೆ ಬಡತನ ಬ್ರಂಹೇತಿ ಈ ಎರ
ಹೊಂದಿರುವದು. ಹೀಗಿರುವವನ ಗುರುತು ಹಿಡಿದು ಭಾವ
ಮೈದನಿಗೆ ತಕ್ಕ ಮರ್ಯಾದೆ ಮಾಡಿ, ಯೋಗಕ್ಷೇಮಾ ವಿ
ನು, ದಾಕ್ಷಿಣ್ಯದಿಂದ ಆ ರಾತ್ರಿ ಒಂದೇ ಪಜ್ತಿಯಲ್ಲಿ ಭೋಜನ
ತ್ತಿರುವ ಸಮಯದಲ್ಲಿ, ಆ ಮೂಢನು ಗೂಡಿನಲ್ಲಿ ಉರಿ
ದೀಪದಿಂದ ಮನೆಯೆಲ್ಲಾ ಬೆಳಕಾಗಿರುವದನ್ನು ನೋಡಿ,
ಇದೇನು? ಒಳ್ಳೇ ಬೆಳಕು, ಒಳ್ಳೇ ಬೆಳಕು, ಅಂದನು.
ವನು ಈ ಬೆಳಕಿನ ವಸ್ತುವು ನಿಮ್ಮ ಊರಲ್ಲಿ ಇಲ್ಲ
? ನೀನರಿಯೆಯೋ? ಎಂದು ಕೇಳಿದನು, ಮೈದನು ನಮ್ಮ
ಾಡಿನಲ್ಲಿ ಸೂರ್ಯನ ಬೆಳಕು ಒಂದಲ್ಲದೆ ಎರಡನೇದು ಇಲ್ಲ
ನು. ಭಾವನು ಹಳ್ಳಿಯವರಿಗೆ ರಾತ್ರಿ ಭೋಜನ ಉಂ
? ಅಂದನು. ಮೈದನು ಉಂಟು, ಆದರೆ ಏನು? ಅಂದ
ಭಾವನು ಕತ್ತಲೊಳಗೆ ಊಟ ಹ್ಯಾಗೆ ಮಾಡುತ್ತೀರಿ? ಅಂ
ಮೈದನು ಕೈಗೂ ಬಾಯಿಗೂ ಕತ್ತಲು ಉಂಟೋ?
ಹೇಳಿದನು. ಭಾವನು ಕತ್ತಲಲ್ಲಿ ತಿನ್ನುವವರಿಗೂ ಹು
ಕುರುಡರಿಗೂ ಭೇದವಿಲ್ಲವೆಂದು ಅಪಹಾಸ್ಯ ಮಾಡಿ, ಈ
ನ ವಸ್ತುವು ಬಹಳ ಬೆಲೆಯುಳ್ಳದ್ದು, ದ್ವೀಪಾಂತರದಿಂದ
ನ ಮೇಲೆ ಬರುತ್ತದೆ, ಇದರ ಹೆಸರು ಸೂರ್ಯನ ಕೂಸು,
ನುಡಿದನು. ಭೋಜನವಾದ ಮೇಲೆ ಮನೆಯವರೆಲ್ಲಾ
ಮಲಗಿ ನಿದ್ದೆ ಹೋಗುತ್ತಿರುವಾಗ, ಈ ಮೂಢನು ತನ್ನ
ಗೆ ಸೂರ್ಯನ ಕೂಸನ್ನು ತೆಕ್ಕೊಂಡು ಹೋಗ ಬೇಕೆಂ
ುರಿಯುವ ದೀಪವನ್ನು ಆ ಮನೆಗೆ ಸ್ವಲ್ಪ ದೂರವಾಗಿರುವ
ಮನೇ ಸೂರಿನಲ್ಲಿ ಬಚ್ಚಿಟ್ಟನು. ಸಂಗಡಲೇ ಹುಲ್ಲು

ಮನೆ ಹತ್ತಿಕೊಂಡು ಧಗಧಗನೆ ಉರಿಯಿತು. ಸುತ್ತು ಮು
ನೆರೆಯವರೆಲ್ಲಾ ಬಂದು ಉರಿಯುವ ಬೆಂಕಿಯನ್ನು ಆರಿಸ
ಇರುವಾಗ, ಮೂಢನು ಕೂಸು ದೊಡ್ಡದಾಗಲಿ, ಯಾಕೆ ಆ
ಯುತ್ತೀರಿ? ಎಂದು ಕೈ ಚಪ್ಪಾಳೆ ತಟ್ಟಿ ಕುಣಿದಾಡಿದನು.
ವ ಕೂಸೆಂದು ಭಾವನು ಕೇಳಿದ್ದಕ್ಕೆ, ಮೈದನು ನೀನು ಹೆ
ಸೂರ್ಯನ ಕೂಸು, ಅದನ್ನು ನಮ್ಮೂರಿಗೆ ತೆಕ್ಕೊಂಡು ಹೆ
ಬೇಕೆಂದು ಹುಲ್ಲು ಮನೇ ಸೂರಿನಲ್ಲಿ ಬಚ್ಚಿಟ್ಟನು, ಕೂ
ದೊಡ್ಡದಾಯಿತು, ಶಾಬಾಸ್ ಶಾಬಾಸ್ ಎಂದನು. ಆಗ ಭಾ
ಮೈದನ ಹೆಡ್ಡತನವನ್ನು ತಿಳಿದು ಅವನಿಗೆ ತಕ್ಕ ಬಂದೋಬ
ಮಾಡಿ, ದುಷ್ಟನನ್ನು ದೂರ ಹೊರಡಿಸ ಬೇಕೆಂದು ಹಿರಿ
ಹೇಳಿದ ಮಾತಿನ ಮೇರಿಗೆ ಆ ಮೂಢನನ್ನು ಮರು ದಿವ
ಮನೆಯಿಂದ ಹೊರಡಿಸಿ ಬಿಟ್ಟನು. ಅದಕ್ಕೆ ಅವನ ಅಕ್ಕ ಕ
ಪಟ್ಟಳು. ಅವಳನ್ನು ನೋಡಿ ಭಾವನು ನಿನ್ನ ತಮ್ಮನು ಎಷ್ಟ
ಕೋಣನು, ನೀನು ಎಮ್ಮೆಯಾಗಿ ದುಃಖ ಪಡಬೇಡ
ಸಮುದಾಯಿಸಿದನು. ಹೀಗೆ ಬುದ್ಧಿ ಹೀನರು ಮಾನ ಕೆಡಿ
ಳ್ಳುವರು.

ಮೂವತ್ತೇಳನೇ ಕಥೆ.

ಬುದ್ಧಿಸಾಗರನೆಂಬ ಮಂತ್ರಿ.

ಶೂರಸೇನನೆಂಬ ಅರಸನ ಬಳೀಲಿ ಬುದ್ಧಿಸಾಗರನೆಂಬ
ತ್ರಿ ಇದ್ದನು. ಆತನು ತನ್ನ ಪರಾಕ್ರಮದಿಂದಲೂ ಮಂ
ಬುದ್ಧಿ ಬಲದಿಂದಲೂ ಪರ ರಾಯರಿಗೆ ಭಯಂಕರನಾಗಿ
ಳುವ ರಾಜ್ಯವು ಕೊಂಚವಾಗಿದ್ದಾಗ್ಯೂ ಬೇರೆ ಬೇರೆ ದೊ

ಳನ್ನಾಳುವ ಅರಸುಗಳ ದೊಡ್ಡ ಸಭೆಗಳಲ್ಲಿ ತನ್ನ ಕೀರ್ತಿ
ನ್ನು ಹೊಗಳಿಸಿ ಕೊಳ್ಳುತ್ತಾ ಇರುವನು. ಕೀರ್ತಿವಂತನೂ
ಕ್ರಮ ಶಾಲಿಯೂ ಆದ ಆ ರಾಯನನ್ನು ಯುದ್ಧದಲ್ಲಿ ಜ
ಕೂಡದೆಂಬ ಮಾತು ಪ್ರಸಿದ್ಧವಾಗಿರುವದು. ಅನ್ಯರ ಉ
ಗಳೂ ಛದ್ಮನೆಗಳೂ ಮಂತ್ರಿಯ ಬುದ್ಧಿ ಬಲದಿಂದ ರಾ
ಮೇಲೆ ಎಪ್ಪು ಮಾತ್ರವೂ ನಡಿಯಲಾರದೆ ಈತನ ರಾ
ಶಂಕಾತಂಕವಿಲ್ಲದೆ ಇರುವದು. ಈ ರಾಯನಿರುವ
ಕೋಟೆಗೆ ನಿಶ್ಶಂಕ ರಾಯನ ಕೋಟೆ ಎಂಬ ಹೆಸರುಂ
ತು. ನಿಶ್ಶಂಕರಾಯ ಅಂದರೆ ಶತ್ರುಗಳ ಭಯ ಲೇಶವೂ
ಯಿಲ್ಲದಿರುವ ರಾಯನೆಂಬ ಅರ್ಥವು. ಈ ಹೆಸರು ಮಾ
ಅಲ್ಲ, ರಾಜ್ಯಭಾರದ ಬಿಂಕವೂ ಹಾಗೆಯೇ ಯಿರುವದು.
ಲದಲ್ಲಿ ಡಿಲ್ಲಿ ಪಾದಷಹಾ ಎಂಬ ಅಶ್ವಪತಿಯು ಒಹಳ
ನಾಗಿ ಲೆಖ್ಖವಿಲ್ಲದ ಕುದುರೇ ಫಾಜು ವುಳ್ಳವನಾಗಿದ್ದನು.
ಫಾಜು ಗಣಿತಿಯಾಗಬೇಕಾದರೆ, ದೊಡ್ಡ ದೊಡ್ಡ ಬಿದು
ಂಬುಗಳು ಒಂದು ಹರದಾರಿ ವರಿಗೂ ನೆಲದ ಮೇಲೆ ದಟ್ಟ
ಹಾಕಿಸಿ, ಕುದುರೆಗಳನ್ನು ಆ ಬಂಬುಗಳ ಮೇಲೆ ಇತ್ತಕ
ದ ಅತ್ತಕಡೆಗೆ ದೌಡು ಬಿಡಿಸಿ ಆ ಬಂಬುಗಳೆಲ್ಲಾ ಪುಡಿ ಪು
ಗಿ ನೇದ ಧೂಳಿನಲ್ಲಿ ಕಲತು ಹೋಗಲು, ಅದೇ ಗುರುತು
ಕೊಂಡು ಗಣಿತಿ ಆಯಿತೆಂದು ನಿಶ್ಚೈಸುವನು. ಅಷ್ಟು
ನ್ನು ಇಟ್ಟುಕೊಂಡು ಅನೇಕಾವರ್ತಿ ಯುದ್ಧಗಳು ಮಾಡಿ ಬ
ಯಗಳನ್ನು ಪಡದ ರಾಯನನ್ನು ಪಾದಷಹಾ ಬಂದಾವರ್ತಿ
ರೂ ಜಯಿಸಲಾರದೆ ವ್ಯಸನ ಪಟ್ಟು ತನ್ನ ಮಂತ್ರಿಗಳೊಡನೆ
ಲೋಚಿಸಿ ವುಪಾಯದಿಂದ ಆ ಬುದ್ಧಿಸಾಗರ ಮಂತ್ರಿಯನ್ನು

ಕರಿಸಿ ಕೈದಿನಲ್ಲಿಟ್ಟರೆ, ಆ ರಾಯನನ್ನು ತಾನು ಜಯಿಸಬಹ
ದು ನಿಶ್ಚೈಸಿ, ರಾಯನೊಡನೆ ಸ್ನೇಹವನ್ನು ಬೆಳಿಸಿ ನಂಬಿಕೆ
ಟು ಮಾಡಿಕೊಂಡು, ಕೆಲವು ವರ್ಷಗಳ ಮೇಲೆ ನಿಮ್ಮ್
ತ್ರಿಯನ್ನು ನೋಡಬೇಕೆಂಬ ಅಪೇಕ್ಷೆ ನಮಗೆ ಬಹಳ ಉ
ದಯವಾಡಿ ಕಳುಹಿಸಿ ಕೊಟ್ಟಲ್ಲಿ ಕಂಡು ಸಂತೋಷಿಸು
ಎಂದು ರಾಯನಿಗೆ ಬರೆದನು. ರಾಯನು ಕಳುಹಿಸಲಿಕ್ಕೆ
ಮಾನಿಸುತ್ತಿರಲು, ಧೈರ್ಯಶಾಲಿಯಾದ ಮಂತ್ರಿಯು ಅರಸನ
ಸಮಾಧಾನ ಪಡಿಸಿ ಅಪ್ಪಣೆ ತೆಗದುಕೊಂಡು ತಕ್ಕ ಸನ್ನಾ
ದ ಹೊರಟು ಡಿಲ್ಲಿಗೆ ಬಂದು ಶೇರಿದನು. ಅದನ್ನು ಪಾದ
ಕೇಳಿ ದೊಡ್ಡ ದರಬಾರು ಮಾಡಿ, ಧೂಳಿ ದರ್ಶನದಲ್ಲೇ
ದರೆ ಮೊದಲನೇ ಸರ್ತಿ ಕಾಣುವದರಲ್ಲೇ ಆ ಮಂತ್ರಿಯ ಬ
ಯನ್ನು ಅರಿಯ ಬೇಕೆಂದು ತನ್ನ ಮಂತ್ರಿಗಳೊಳಗೆ ಒಬ್ಬನ
ತಾನು ಕೂತು ಕೊಳ್ಳುವ ಸ್ಥಲದಲ್ಲಿ ಕುಳ್ಳಿರಿಸಿ ತಾನಾ ಮಂತ್
ಸ್ಥಳದಲ್ಲಿ ಕೂತು ಕೊಂಡು ಬುದ್ಧಿಸಾಗರ ಮಂತ್ರಿಯನ್ನು
ಬಾರಿಗೆ ಕರಿಸಿದನು. ಆತನು ಬಹು ದಿಟ್ಟದಿಂದ ದರಬ
ಬಂದು ಎಲ್ಲಿ ಪಾದಷಹಾ ಕುಳಿತು ಇದ್ದನೋ ಅಲ್ಲೇ ನಿಂತ
ಜರು ಮಾಡಿದನು. ಆಗ ಪಾದಷಹಾ ಎಲೈ ಮಂತ್ರಿ ಶ್ರೇಷ್ಠ
ನನ್ನ ಗುರುತು ನಿನಗೆ ಹ್ಯಾಗೆ ತಿಳಿಯಿತು ಎಂದು ಪ್ರಶ್ನೆ ಮ
ಲು, ಬುದ್ಧಿಸಾಗರನು ಪ್ರಭುವೇ, ದರಬಾರಿನಲ್ಲಿ ಎಲ್ಲಾ ಜನ
ದೃಷ್ಟಿಯೂ ನಿಮ್ಮನ್ನೇ ಆಶ್ರಯಿಸಿ ಯಿರುವದರಿಂದ ನನ್ನ ಗ
ಯೂ ನಿಮ್ಮನ್ನೇ ಹೊಂದಿತು. ಅಯಸ್ಕಾಂತಶಿಲೆಯ ಸ
ಸೂಜಿ ತಿರಗದೆ ಇರುವದೋ ? ಕ್ಷಮಿಸ ಬೇಕೆಂದು ಪಾದ
ನ ಅಪ್ಪಣೆ ಪ್ರಕಾರ ಮಂತ್ರಿ ಸ್ಥಾನದಲ್ಲಿ ಕುಳಿತು ಕೊಂ

ಗ ಪಾದಷಹಾ ಆಶ್ಚರ್ಯ ಪಟ್ಟು ಇಂಥಾ ಮಂತ್ರಿಯ ಬುದ್ಧಿ
ಲದಿಂದಲೇ ನಿಶ್ಶಂಕ ರಾಯನ ಕೋಟೆಯಲ್ಲಿ ಶೂರಸೇನ ರಾ
ನು ಪರರಾಯರಿಗೆ ಅಸಾಧ್ಯನಾಗಿದ್ದಾನೆ ಎಂದು ತನ್ನಲ್ಲಿ ತಾನೇ
ತೋಷಪಟ್ಟು, ರಾಯ ಮಂತ್ರಿಯನ್ನು ನೋಡಿ ರಾಯನಿಗೆ
ನ್ಯವೆಷ್ಟು ಇದೆ? ಎನ್ನಲು ಬಂದೇ ಮನಸ್ಸುಳ್ಳದ್ದಾಗಿದೆ ಎಂತ
ಬುದ್ಧಿಸಾಗರನು ಅಂದನು. ಪಾದಷಹಾ ಖಜಾನೆ ಎಷ್ಟದೆ? ಅ
ಲು, ಮಂತ್ರಿ ಶೀಮೆ ಆಬಾದಾಗಿದೆ ಅಂದನು. ಪಾದಷಹಾ
ಟ್ಟಿಯಲ್ಲಿ ಶಿಕ್ಕಿದ ಹಾವು ಬಿಟ್ಟು ಹೊರ್ತು ಹೋಗುವದೋ?
ನ್ನಲು, ಮಂತ್ರಿ ದಿಟ್ಟವಾದ ಘಾಳಿಯಿಂದ ಪೆಟ್ಟಿಗೆಯ ಮು
ಳ್ಳ ತೆರೆಯಲ್ಪಡುವದು ಅಂದನು. ಪಾದಷಹಾ ಕಾಲಿಲ್ಲದ
ಹಾವು ಕೋಲಿನ ಪೆಟ್ಟಿಗೆ ಶಿಕ್ಕದೋ? ಅನ್ನಲು, ಮಂತ್ರಿ ಕಾ
ಗೆ ಸುತ್ತಿದ ಹಾವು ಕಚ್ಚದೆ ಬಿಡದು ಅಂದನು. ಪಾದಷಹಾ
ಹಾವು ಕಚ್ಚಿ ಬರೀ ಬಾಯಿ, ಅನ್ನಲು, ಮಂತ್ರಿ ಬರೀ ಬಾಯಿ
ದರೂ ನೊರೆ ಬಾಯಲ್ಲಿ ಬರವಾಡುವದು ಅಂದನು. ಈ
ಕಾತ ಸರಿಯಾದ ಉತ್ತರಗಳನ್ನು ಕೊಟ್ಟು ರಾಯ ಮಂತ್ರಿ
ನನ್ನು ಮೆಚ್ಚಿ ಅವನಿಗೆ ಭಾರಿ ಖಿಲ್ಲತ್ತು ಕೊಟ್ಟು ಅವನನ್ನು
ಹಳ ಮರ್ಯಾದೆಯಿಂದ ಪುನಃ ರಾಯನ ಸಂಸ್ಥಾನಕ್ಕೆ ಕಳು
ಸಿ ಕೊಟ್ಟನು. ಇದೇ ಮಹಾಮಂತ್ರಿಯ ಗುಣವು.

ಮುವ್ವತ್ತೈಂಟನೇ ಕಥೆ.

ದಡ್ಡನು ಮಾನು ಹಿಡಿದ್ದು.

ಒಬ್ಬ ಬಕ್ಕಲಿಗನಿಗೆ ಒಬ್ಬ ಮಗನಿದ್ದನು. ಆ ಹುಡುಗನು
ಯಾವ ಕೆಲಸವೂ ಮಾಡದೆ ಇದ್ದಾಗ್ಯೂ ತಿನ್ನುವದೂ ತಿರುಗು

ವದೂ ಈ ಎರಡನ್ನು ಮಾತ್ರ ಮರೆಯದೆ ಮಾಡುವನು.
ದು ಬರಹ ಎಂಬ ಸಮಾಚಾರವೇ ಇಲ್ಲ. ಅವನಿಗೂ ಹ
ಹದಿನಾರು ವರುಷವಾಯಿತು. ಹೀಗಿರುವ ಮಗನನ್ನು ನೊ
ತಂದೆ ಬಂದು ದಿವಸ ಎಲಾ ಹೈದಾ, ಸುಮ್ಮನೆ ತಿಂದು ತಿರು
ವವಕ್ಕೆ ಬದಲು ಕೆರೆಯಲ್ಲಿ ಮೀನಾದರೂ ಹಿಡುಕೊಂಡು ಬ
ಬಾರದೇ? ಅಂದನು. ಅದಕ್ಕವನು ಹಾಗೇ ಆಗಲೆಂದು ತ
ತಂದೆಯು ಆರಂಬಿದ ಗದ್ದೆಗೆ ಆಧಾರವಾದ ಅಣೆಕಟ್ಟಿನ ಹತ್ರ
ಹೋಗಿ ತುಂಬು ನೀರಿನಲ್ಲಿ ಮೀನು ಹಿಡಿಯು ಕೂಡದೆಂ
ಆ ಕಟ್ಟೆಯನ್ನು ನಾಲ್ಕೈದು ಕಡೆ ಅಗದು ಕಿತ್ತು ಬಿ
ಅಣೆಯ ನೀರೆಲ್ಲಾ ಹೊರಟು ಹೋದ ಮೇಲೆ ತಳದಲ್ಲಿ ತೆ
ನಿಂತ ಕೆಸರಿನಲ್ಲಿಳಿದು ಕೈಯಿಂದ ಹುಡಿಕಿ ಹುಡಿಕಿ ಶಿಕ್ಕಿದ ಅ
ದಾರು ಮೀನುಗಳನ್ನು ಹಿಡಿಯಲ್ಲಿ ಹಿಡುಕೊಂಡು ಬಂದು,
ಗೋ ಅಪ್ಪಾ, ತಂದೆನೆಂದು ತಂದೆಯ ಮುಂದೆ ಮಡಗಿದ
ಅದನ್ನು ನೋಡಿ, ತಂದೆಯು ಶಾಬಾಸು, ಶಾಬಾಸು, ಶಾನೆ ವಾ
ಈ ಕೆಲಸವಾದರು ಮಾಡಿದಿಯಲ್ಲಾ, ಇನ್ನುಮೇಲೆ ಭಯವಿ
ಎಂದು ಮೆಚ್ಚಿ, ಇಷ್ಟೊತ್ತು ಏನು ಮಾಡಿದಿ? ಎಂದು ಕೇಳಲು, ಮ
ಡುಗನು ಅಪ್ಪಾ, ನಾನು ಆಗಲೇ ಬರುವೆ, ನಮ್ಮ ಅಣೇ ನೀ
ಲ್ಲಾ ಹೊರಟು ಹೋಗಿ ತಳದ ಕೆಸರು ಕಾಣಿಸುವದಕ್ಕೆ ತಡ
ಯಿತು, ಅಂದನು. ಅದಕ್ಕೆ ತಂದೆ ಎಲಾ ಪಾಪಿ! ಅಣೇ ನೀ
ಲ್ಲಾ ಹೋಯಿತೋ ಅಂದನು. ಮಗನು ಹೌದಪ್ಪಾ, ನೀರೆಲ್ಲ
ಹೋಯಿತು, ಕೆಸರು ಇನ್ನೂ ಅದೆ ಅನ್ನಲು, ಗದ್ದೆಯ ಪೈರೆಲ್ಲ
ನಷ್ಟವಾಗಿ ಹೋಯಿತಲ್ಲಾ! ಎಂದು ತಂದೆ ದುಃಖ ಪಟ್ಟನ
ಹೀಗೆ ದಡ್ಡರಿಂದ ನಷ್ಟ ಉಂಟಾಗುವದು.

ಮುವ್ವತ್ತೊಂಭತ್ತನೇ ಕಥೆ.

ರಾಜಕುಮಾರನು.

ಪರಾಕ್ರಮಶಾಲಿಯಾದ ಒಬ್ಬ ಅರಸನುಂಟು. ಆತನು ಅ
ೀಕ ರಾಜ್ಯಗಳನ್ನು ಜಯಿಸಿ, ದ್ವೀಪಾಂತರಗಳಿಗೆ ಪ್ರವೇಶಿಸಿ
ಲ್ಲಿ ನಡದ ಅಘೋರ ಯುದ್ಧರಂಗದಲ್ಲಿ ಮಡಿದನು. ಇದು
ಪ್ರತಾಪವುಳ್ಳ ಸೂರ್ಯನು ಲೋಕಾಂಧಕಾರವನ್ನು ಪ್ರಕಾಶದಿಂ
ಜಯಿಸಿ ಅಸ್ತಮಿಸುವ ಹಾಗೆ ಆಯಿತು. ಸೂರ್ಯನ ತೇಜಸ್ಸು
ತ್ರಿಯಲ್ಲಿ ಅಗ್ನಿಗೆ ಉಂಟಾಗಿರುವ ಹಾಗೆ ತಂದೆಯ ರಾಜ್ಯವು
ಪ್ರಭಾವ ಸಿದ್ಧವಾಗಿ ಮಗನಿಗೆ ಚಿಕ್ಕಂದಿನಲ್ಲೇ ಬಂತು. ತಂ
ಯಿಂದ ಜಯಿಸಲ್ಪಟ್ಟಿದ್ದ ಅರಸುಗಳೆಲ್ಲರೂ ಈ ರಾಜಕುಮಾ
ನಿಗೆ ವಿಧೇಯರಾಗಿ ಇದ್ದರು. ಅದು ಮಂತ್ರಿಗಳ ಬುದ್ಧಿ
ಸಾಹಸ ಸಾಮರ್ಥ್ಯಬಲದಿಂದ ಉಂಟಾಗಿತ್ತು. ಹೀಗಿರುವಲ್ಲಿ
ಈ ಶ್ರೇಷ್ಠರಾದ ಮಂತ್ರಿಗಳಿಂದ ರಾಜ ಕುಮಾರನಿಗೆ ರಾಜ
ೀತಿಯ ಮಾರ್ಗವು ಚನ್ನಾಗಿ ತಿಳಿಸಲ್ಪಟ್ಟಿತು. ಅಂಥಾ ತಿದ್ದು
ಾಟು ಹೊಂದಿದ ರಾಜಕುಮಾರನು ಬಾಲಕನಾಗಿದ್ದಾಗ್ಯೂ,
ಮಂತ್ರಿಗಳ ಮನೋಭಾವವನ್ನು ತಿಳಿಯ ಬೇಕೆಂದು ನೆನೆಸಿ,
ಾಜ ಸಿಂಹಾಸನದ ಮೇಲೆ ಕುಳಿತು, ಇಷ್ಟರಾದ ಅಷ್ಟಮಂತ್ರಿ
ಗಳೊಡನೆ ಕೇಳಿರೈಯ್ಯಾ, ಮಹಾ ಪ್ರಧಾನಿಗಳಿರಾ, ನಮ್ಮ ರಾ
ಜ್ಯದಲ್ಲಿರುವ ಪ್ರಜೆಗಳಿಂದ ಅರಮನೆಗೆ ಬರತಕ್ಕ ಹೊಲ ಗ
ದ್ದೆ ತೋಟ ಮುಂತಾದ ಜಮೀನು ಬಾಬಿನ ಕಂದಾಯ, ಮನೆ
ಕಂದಾಯ, ಮೆರಗಳ ಗುತ್ತಿಗೆ, ಸುಂಕ ಮುಂತಾದ ತೆರಿಗೆ ಇವು
ಗಳೆಲ್ಲಾ ಪೂರ್ವದ ಕಾಲಿನ ಪ್ರಕಾರಕ್ಕೆ ವರುಷಂಪ್ರತಿ ವ

ಸೂಲಾಗಿ ಬರುತ್ತದೋ ಇಲ್ಲವೋ ? ಅಂದನು. ಅದ
ರು ವರುಷಂ ಪ್ರತಿ ವರುಷವೂ ಮಾಮೂಲು ಮೇರಿಗೆ ನಿಗದಿ
ದ ತೆರಿಗೇ ಹಣ ಅಡ್ಡಿ ಇಲ್ಲದೆ ಹಸ್ತಾಂತ್ರಕ್ಕೆ ವಸೂಲಾ
ಗುತ್ತದೆ ಅಂದರು. ರಾಜ ಕುಮಾರನು ಹೀಗೆ ಬರುವ
ಯು ಹಣಕ್ಕಾಗಿ ವರ್ಷ ವರ್ಷ ಪ್ರಜೆಗಳನ್ನು ನಾವು
ತಕ್ಕೆ ತೊಂದರೆ ಮಾಡ ಬೇಕು, ಇದು ಮೊದಲು ಇಪ್ಪ
ನಾಲ್ಕು ವರುಷದ ಕಂದಾಯವನ್ನು ಬಂದೇ ಸರ್ತಿ ಒ
ಬರಮಾಡಿದರೆ, ಅರಮನೆ ಬೊಕ್ಕಸದಲ್ಲಿ ಬಹಳ ದ್ರವ್ಯ
ತ್ತದೆ, ರೈತರಿಗೂ ತೊಂದರೆ ಇಲ್ಲದೆ ನೆವ್ಮದಿ ಆಗುತ್ತದೆ
ದನು. ಮಂತ್ರಿಗಳು, ಪ್ರಭುವೇ, ಹಾಂಗೆ ಮಾಡಕೂ
ಯಾಕಂದರೆ, ೧. ಪ್ರಜೆಗಳಿಂದ ಆಯಾ ವರುಷದ ತೆರಿಗೆಯ
ಆಯಾ ವರುಷ ವಸೂಲು ಮಾಡುವ ಪೂರ್ವ ಪದ್ಧತಿ ತಪ್ಪ
ದೆ. ೨. ಭೂಮಿಯ ಪೈರಿನಿಂದ ಬದುಕುವ ರೈತರನ್ನು
ಯುಂಟಾದ ವರುಷಕ್ಕೂ ಬೆಳೆ ಇಲ್ಲದ ವರುಷಕ್ಕೂ ಸಮ
ಟ್ಟಾಗಿ ಕಂದಾಯ ಕೊಡ ಹೇಳಿ ಕೇಳುವದು ನ್ಯಾಯ ವಿರೋ
೩. ವಿದ್ಯಾಶಾಲೆಯ ಹುಡುಗರನ್ನು ಆಗಾಗ್ಯೆ ಪರಿಕ್ಷಿಸದೆ
ಸದೆ ಬಿಟ್ಟರೆ ಉಪಾಧ್ಯನು ಕಲಿಸಿದ್ದನ್ನು ಅವರು ಹ್ಯಾಗೆ
ರೆಯುವರೋ ಹಾಗೆಯೇ ವರುಷಂ ಪ್ರತಿಯೂ ಸರಕಾರ
ಚಾರಣೆ ಇಲ್ಲದಿದ್ದರೆ ಪ್ರಜೆಗಳು ತಮ್ಮ ಬಡಿಯನನ್ನೇ ಮರ
ವರು. ೪. ಹಣಗಾರರಾದ ರೈತರು ಇಪ್ಪತ್ತುನಾಲ್ಕು ವರ
ತೆರಿಗೆಯನ್ನು, ಬಂದೇ ವರುಷದಲ್ಲಿ ಕೊಟ್ಟರೂ ಕೊಟ್ಟ
ಬಡವರು ಬಗ್ಗರಿಂದ ಆ ಮೇರಿಗೆ ಹೊಡದು ಬಡದು ಹ
ಲು ಮಾಡಿದರೆ, ಅವರು ನಿಭಾಯಿಸಲಾರರು. ೫. ಬಂದು

ಬ್ಬರಿಬ್ಬರು ನಿಮ್ಮಂದಿ ಪರರು, ಕಡಿವಿಯವರೆಲ್ಲರೂ ಬಡವರು.
ಬಡವರಾದ ರೈತರು ಈ ದಂಡಾ ತೆತ್ತು ಓಡಿ ಹೋದರೆ
ಊರಿನ ಭೂಮಿ ಯೆಲ್ಲಾ ಪಾಳುಬಿದ್ದು ಸರಕಾರಕ್ಕೆ ನಷ್ಟ
ಭವಿಸುವದು. ೬. ಇಪ್ಪತ್ತೂಕ್ಕೂ ರೈತರನ್ನೆಲ್ಲಾ ಕರಿಸಿ ಇಪ್ಪ
ನಾಲ್ಕು ವರುಷದ ಕಂದಾಯವನ್ನು ಒಟ್ಟಾಗಿ ಕೊಡಿರೆಂದು
ಳಿದರೆ, ಇಪ್ಪತ್ತು ನಾಲ್ಕು ವರುಷದ ಫಲವನ್ನು ಈಗಲೇ
ರೆಗಳು ನಮಗೆ ಉಂಟು ಮಾಡಿ ಕೊಟ್ಟರೆ ನಾವು ಕಂದಾಯ
ಟ್ಟೇವೆಂದು ಅವರು ಹೇಳಿದಲ್ಲಿ, ಆ ಮಾತಿಗೆ ಉತ್ತರವಿಲ್ಲದೆ
ೀಗುವದು. ೭. ರಾಜ್ಯದ ಕಂದಾಯವೆಲ್ಲಾ ಒಟ್ಟಾಗಿ ಅರ
ನೇ ಬೊಕ್ಕಸಕ್ಕೆ ಶೇರಿದ ತರುವಾಯ ಸೈನ್ಯಕ್ಕೆಲ್ಲಾ ಇಪ್ಪ
ನಾಲ್ಕು ವರುಷದ ಸಂಬಳವನ್ನು ಒಂದೇ ಗಂಟಾಗಿ ಕೊಡ
ಕಾಗಿ ಅರಮನೆ ಹಸ್ತಾಂತ್ರವು ಯಥಾಪ್ರಕಾರ ಉಳಿಯು
ೀ ಹೊರ್ತು ಹೆಚ್ಚದು. ಈ ಮೇರಿಗೆ ಸಪ್ತ ಮಂತ್ರಿಗಳು
ಳಿದ ತರುವಾಯ ಎಂಟನೇಯವನಾದ ಮುಖ್ಯ ಮಂತ್ರಿಯು,
ಮಹಾ ರಾಯನೇ, ನನ್ನ ಬಿನ್ನಹವನ್ನು ಚಿತ್ತಕ್ಕೆ ತರ
ಕು, ಹಾಲು ಕರೆಯುವ ಹಸುಗಳನ್ನು ಚನ್ನಾಗಿ ಮೇಯಿ
ರೆ, ಅವು ಪ್ರತಿ ದಿನವೂ ಕೊಡುವ ಹಾಲು ಮುಂತಾದ ಹಯ
ದಲೂ, ಅವುಗಳ ಹೊಟ್ಟೆಯಲ್ಲಿ ಹುಟ್ಟುವ ಕರಗಳಿಂದಲೂ,
ಂದಿಯ ಯಜಮಾನನು ಐಶ್ವರ್ಯವನ್ನು ಹೊಂದುವನು,
ಗಳನ್ನು ಕಾಪಾಡಿ ಕ್ರಮದಿಂದ ಹಾಲು ಕರಕೊಳ್ಳದೆ ಒಂದೇ
ರ್ಶ ಕರೆಯ ಬೇಕೆಂದು ಹಾಲು ತುಂಬಿದ ಕೆಚ್ಚಲುಗಳನ್ನು
ಹಾಯಿಸಿದರೆ ನಷ್ಟ ಉಂಟಾಗುವ ಹಾಗೆಯೇ ಪೂರ್ವ ಪದ್ಧತಿ
ನ್ನು ತಪ್ಪಿಸಿದರೆ ನಷ್ಟ ಉಂಟಾಗುವದು. ಪ್ರಜೆಗಳಿಗೆ

ಕೊಟ್ಟಿರುವ ಕಾಲಿನ ಪದ್ಧತಿಯ ಮೇರಿಗೆ ಆಯಾ ವರುಷ
ತೆರಿಗೆಯನ್ನು ಖಿಸ್ತು ಬಂದೀ ಪ್ರಕಾರ ವಸೂಲಾಗುವ
ಅಪ್ಪಣೆ ದಯಪಾಲಿಸ ಬೇಕೇ ಹೊರ್ತು ಇಪ್ಪತ್ತು ನಾ
ವರುಷದ ಕಂದಾಯವನ್ನು ಒಟ್ಟಾಗಿ ಕೊಡಬೇಕೆಂದು ರೈ
ನ್ನು ತೊಂದರೆ ಪಡಿಸ ಕೂಡದು, ಸರ್ವಜ್ಞ ಚಿತ್ತ, ಪ್ರಜೆಗಳನ
ಸಂತೋಷ ಪಡಿಸುವದೇ ರಾಜ ಧರ್ಮವು, ಪ್ರಜೆಗಳಿಂದ
ರಾಜ್ಯವು, ರಾಜ್ಯದಿಂದಲೇ ರಾಯನು, ರಾಯನೇ ಸತ್ಯ
ರಾಯನೇ ಧರ್ಮವು, ರಾಯನೇ ಸಕಲ ವರ್ಣಗಳಿಗೂ ರಕ್ಷ
ನು, ಮತ್ತೂ ಎಲ್ಲಾ ಮನುಷ್ಯರಿಗೂ ತಾಯಿ ತಂದೆಯ ಹಾ
ಪ್ರೀತಿ ಪಡಿಸುವವನು ರಾಯನು ಹೊರ್ತು ಮತ್ತೊಬ್ಬರಿ
ಮಕ್ಕಳ ವಿಷಯವಾಗಿ ತಾಯಿ ತಂದೆಗಳು ಏನಾದರು ಬಂ
ಅನ್ಯಾಯ ನಡಿಸಿದರೆ ಅದನ್ನು ವಿಚಾರಿಸಿ ತಿದ್ದಿ ಕಾಪಾಡ
ಧರ್ಮವು ರಾಯನಿಗೆ ಉಂಟು. ರಾಯನ ಕೋಪವನ್ನು
ಯಿ ತಂದೆಗಳು ಶಾಂತ ಪಡಿಸಲಾರರು. ರಾಜಾಧಿ ರಾಜ
ಪ್ರಜೆಗಳನ್ನು ಪರಿ ಪಾಲಿಸುವ ವಿಷಯದಲ್ಲಿ ಕರುಣಾ ಕಟಾ
ಪರಿಪೂರ್ಣವಾಗಿರ ಬೇಕು ಎಂದು ರಾಜ ನೀತಿಯನ್ನು ತಿ
ದನು. ಅದನ್ನು ಪರಮ ವಿವೇಕಿಯಾದ ರಾಜ ಕುಮಾರ
ಮನಸ್ಸಿಗೆ ತಂದು ಕನಿಕರದಿಂದ ಪ್ರಜಾರಂಜನೆಯೇ ಮುಖ
ವಾಗಿ ರಾಜ್ಯವನ್ನಾಳುತ್ತಾ ಬಹು ಕಾಲ ಸಾಖ್ಯವಾಗಿದ್ದ
ಇದೇಪ್ರಕಾರ ಮಹಾ ಮಂತ್ರಿಗಳ ಆಲೋಚನೆಯಿಂದ ರಾ
ವನ್ನು ಆಳುವ ಧೊರೆಗಳು ಸಾಖ್ಯ ಕೀರ್ತಿಗಳನ್ನು ಹೊಂ
ವರು.

ನಾಲ್ವತ್ತನೇ ಕಥೆ.

ಆನೆಗಳೂ ಇಲಿಗಳೂ.

ಕೋಯಿಮುತ್ತೂರು ಸತ್ಯಮಂಗಲ ಮುಂತಾದ ಶೀಮೆಯಲ್ಲಿ
ಾನೆಗಳ ಅವಾಂತ್ರವು ಬಹಳವಾಗಿರುವದು. ರಾತ್ರಿ ವೇಳೆ
ಲ್ಲಿ ಗುಂಪು ಗುಂಪಾಗಿ ಆನೆಗಳು ಬಂದು ಕಬ್ಬು ತೋಟ ಬಾಳೆ
ೀಟಗಳನ್ನು ಕಿತ್ತು ತಿಂದು ಧ್ವಂಸ ಮಾಡುತ್ತಿರುವವು.
ಗೆ ಆನೆಗಳಿಂದ ಕಿತ್ತು ಹಾಕಲ್ಪಟ್ಟು ಅಷ್ಟಿಷ್ಟು ಉಳಿದ ಬ
ಗದ್ದೆಯನ್ನು ಇಲಿಗಳ ಗುಂಪು ಬಂದು ತಿಂದು ಹೋಗುವ
ಹೀಗೆ ಆನೆಗಳಿಂದಲೂ ಇಲಿಗಳಿಂದಲೂ ಆ ಶೀಮೆಯ
ಗೆ ಬಹಳ ಕೇಡುಂಟಾಗಿರುವದು. ಹೀಗಿರುವಲ್ಲಿ ಬಂದು
ಸ ರಾತ್ರಿ ದೊಡ್ಡ ಮಳೆ ಹೊಯ್ದು ಕಾವೇರಿ ಭವಾನಿ ಎಂ
ನದಿಗಳು ಪೂರಾ ಪ್ರವಾಹ ಹರಿಯುತ್ತಿರಲಾಗಿ, ಎಂದಿನ
ಯೇ ಆನೆಗಳೂ ಇಲಿಗಳೂ ತೋಟ ಗದ್ದೆಗಳನ್ನು ಮೇದು
ಿನ ಝಾವದಲ್ಲಿ ಓಡಿ ಹೋಗುವಾಗ ಪ್ರವಾಹವನ್ನು ದಾ
ಸಾಮರ್ಥ್ಯವಿಲ್ಲದ ಇಲಿಗಳ ಗುಂಪು ಆನೆಗಳ ಗುಂಪನ್ನು
ಡಿ, ಎಲ್ಲೆ ಆನೆಗಳಿರಾ, ಹೊಳೆಯನ್ನು ದಾಟುವದಕ್ಕೆ ನೀ
ಶಕ್ತರು, ನಾವು ಅಶಕ್ತರು, ಆದ್ದರಿಂದ ನಮ್ಮ ಮೇಲೆ
ವಿಟ್ಟು ನೀವು ನಮ್ಮನ್ನು ಈ ಹೊಳೆಯ ದಾಟಿಸಿ ಕಾಪಾ
ಈ ಉಪಕಾರಕ್ಕೆ ಪ್ರತ್ಯುಪಕಾರವನ್ನು ನಾವು ನಿಮಗೆ
ಗಾದರೂ ಮಾಡುವೆವು, ಎಂದು ಪ್ರಾಣ ಭಯದಿಂದ ಬೇಡಿ
ಡಿತು. ಈ ಚಿಕ್ಕ ಚಿಕ್ಕ ಇಲಿಗಳಿಂದ ಬಲವಂತರಾದ
ಗೆ ಏನು ಉಪಕಾರವಾದೀತೆಂದು ತಾತ್ಸಾರ ಮಾಡಿ, ಆನೆಗ
ುಂಪೆಲ್ಲಾ ಹೊಳೆಯ ದಾಟಿ ಹೋದವು. ಅವುಗಳ ಹಿಂದುಗಡೆ

ಯಾಗಿ ಬಂದ ಒಂದು ದೊಡ್ಡ ಮುದಿಯಾನೆ ಮಾತ್ರ ಇಲಿ
ಮಾತನ್ನು ಅಸಡ್ಡೆ ಮಾಡದೆ ತನ್ನ ಅಗಲವಾದ ಬೆನ್ನಿನ ಮೆ
ಒಂದೊಂದು ಸಾರಿಗೆ ಬಹಳ ಇಲಿಗಳನ್ನು ಗುಂಪು ಗುಂಪ
ಏರಿಸಿಕೊಂಡು ಒಂದು ಇಲಿಯಾದರೂ ಸಾಯದ ಹಾಗೆ ಹೆ
ದಾಟಿಸಿ ಬಿಟ್ಟು, ಇಲಿಗಳಿರಾ ಬದಿಕಿರಿ, ಆಡಿದ ಮಾತು ನೆರವ
ಸಿರಿ, ಲೋಕದಲ್ಲಿ ಪ್ರತ್ಯುಪಕಾರವನ್ನು ಅಪೇಕ್ಷಿಸದೆ ಪರ
ಉಪಕಾರಗಳನ್ನೇ ಮಾಡುವವರು ಉತ್ತಮೋತ್ತಮರು, ಪರ
ಪಕಾರವನ್ನು ಮಾಡಿ, ಅವರಿಂದ ತಾವು ಪ್ರತ್ಯುಪಕಾರವ
ಅಪೇಕ್ಷಿಸುವವರು ಉತ್ತಮರು, ಪರರಿಂದ ಉಪಕಾರವ
ಹೊಂದಿ ಪ್ರತ್ಯುಪಕಾರವನ್ನು ಮಾಡುವದಕ್ಕೆ ಶಕ್ತಿ ಇ
ಮನಸ್ಸಿನಲ್ಲೂ ಮಾತಿನಲ್ಲೂ ಸಹ ಉಪಕಾರಿಗೆ ಪ್ರತ್ಯುಪಕ
ವನ್ನು ಮಾಡುವದಕ್ಕೆ ಇಲ್ಲದೆ ಹೋಯಿತಲ್ಲಾ ಎಂದು ವ್ಯ
ಪಡುವವರು ಮಧ್ಯಮರು. ಉಪಕಾರಿಗಳಿಗೆ ಪ್ರತ್ಯುಪಕ
ವನ್ನು ಮಾಡ ಮನಸ್ಸಿಲ್ಲದೆ, ಆ ಉಪಕಾರವನ್ನು ಮರತು ಹೆ
ಗುವವರು ಅಧಮರು, ಉಪಕಾರಿಗಳಿಗೆ ಅಪಕಾರವನ್ನೇ ಠ
ಕಿ ಹುಡಿಕಿ ಮಾಡುವವರು ಅಧಮಾಧಮರು. ಹೀಗೆ ಈ
ಪ್ರಕಾರವಾದ ಪ್ರಕೃತಿಗಳಲ್ಲಿ ಉತ್ತಮೋತ್ತಮರು, ಉತ್ತಮ
ಇವರಿಬ್ಬರೂ ಕೃತಜ್ಞರೆನ್ನಿಸಿ ಕೊಂಬುವರು, ಅಧಮರು ಅಧ
ಧಮರು ಇವರಿಬ್ಬರೂ ಕೃತಘ್ನರೆನ್ನಿಸಿ ಕೊಂಬುವರು, ಮ
ಮರು ದ್ವಿಸ್ವಭಾವವುಳ್ಳ ಮಿತ್ರರೆನ್ನಿಸಿ ಕೊಂಬುವರು, ಹೀಗೆ
ವಲ್ಲಿ ಇಲಿಗಳಿರಾ, ನೀವು ಕೃತಘ್ನರಾಗ ಬೇಡಿರಿ, ಮಿತ್ರರಾ
ರೋಪಿನೋ ನನಗೆ ತಿಳಿಯದು, ಕೃತಜ್ಞರಾಗಿ ಕೀರ್ತಿ ಸಂ
ದಿಸಿರೆಂದು ಇಲಿಗಳಿಗೆ ಬೋಧಿಸಿ, ಆನೆಗಳ ಗುಂಪಿನ ಸಂ

ಾಗಿ ಶೇರಿಕೊಂಡಿತು. ಇಲಿಗಳು ತಮ್ಮ ತಮ್ಮ ಬಿಲಗಳಲ್ಲಿ
ರಿಕೊಂಡವು. ತರುವಾಯ ಒಂದು ದಿವಸ ಆ ಶೀಮೆಯ ಒ
ಲಿಗರೆಲ್ಲಾ ಕೂಡಿ ನಮ್ಮ ಪೈರನ್ನು ನಾಶ ಮಾಡುವ ಆನೆಗಳ
ನ್ನು ಹಿಡಿಯ ಬೇಕೆಂದೆಣಿಸಿ, ಆನೆಗಳು ಬರುವ ಹಾದಿಯಲ್ಲಿ
ುಡ್ಡ ಕಪ್ಪುಗಳು ತೆಗದು, ಅವುಗಳಿಗೆ ಮುಚ್ಚಳದ ಚಪ್ಪರವ
ನ್ನು ಹಾಕಿ ಅದರ ಮೇಲೆ ಗೇಣುದ್ದ ಮಣ್ಣನ್ನು ಹರಡಿ, ತೆಳ್ಳಗೆ
ೋಳದ ಪೈರನ್ನು ಬೆಳಸಿ ಇಟ್ಟರು. ಈ ಮೇರಿಗೆ ಒಂದು ಕ
ದುಲ್ಲದೆ ಶೀಮೆಯಲ್ಲಿರುವ ತೋಟ ತೋಟಗಳ ಹತ್ತರ ಕಪ್ಪು
ಗಳನ್ನು ಮರೆ ಮಾಡಿದ್ದರು. ಆನೆಗಳು ಜೋಳದ ಪೈರಿನ ಆಶೆ
ಂದ ಬಂದು ಕಪ್ಪುಗಳಲ್ಲಿ ಬಿದ್ದು ಹೋದವು. ಆಗ ಇಲಿಗಳ
ುಪ್ಪು ಮೊದಲು ತಮಗೆ ಉಪಕಾರಾ ಮಾಡಿದ ಮುದಿಯಾನೆಯ
ುವ ನ್ನು ನೋಡಿ ಅದು ಬಿದ್ದಿರುವ ಹಳ್ಳದ ಸುತ್ತಲಿರುವ ಮಣ್ಣ
ನ್ನು ತೋಡಿ ಹಳ್ಳವನ್ನು ಹೂಣುತ್ತಾ ಬರಲು, ಆ ಆಸರೆಯಿಂದ
ುದಿಯಾನೆ ತನ್ನೊಂದಿಗೆ ಬಿದ್ದಿರುವ ಆನೆಗಳೊಡನೆ ಆ ಮಣ್ಣ
ನ್ನು ಮೆಟ್ಟಿ ಮಿಟ್ಟಿ ಮಾಡಿ ಕೊಂಡು ಮೇಲಕ್ಕೆ ಬಂದು, ತರು
ಯ ಅಲ್ಲಲ್ಲಿ ಕಪ್ಪುಗಳಲ್ಲಿ ಬಿದ್ದಿರುವ ದರೋಬಸ್ತು ಆನೆಗಳ
ನ್ನು ಇದೇ ಪ್ರಕಾರ ಮೇಲಿನ ಮಣ್ಣಿನಿಂದ ಹಳ್ಳಗಳನ್ನು ಹೂಣಿ,
ಟ್ಟುಗಳ ಆಸರೆಯಿಂದ ಎದ್ದು ನಿಂತವುಗಳ ಸೊಂಡಲುಗಳನ್ನು
ಮ್ಮ ತಮ್ಮ ಸೊಂಡಲುಗಳಿಂದ ಹಿಡಿದು ಹೊರಗೆ ತೆಗದು, ಎಲ್ಲಾ
ುಪಾಗಿ ಮಹೋಪ ಕಾರಿಗಳಾದ ಇಲಿಗಳನ್ನು ಹೊಗಳುತ್ತಾ
ೊರಟು ಹೋದವು. ಹೀಗೆ ಉಪಕಾರಿಗಳಿಗೂ ಪ್ರತ್ಯುಪಕಾ
ಳಿಗೂ ಅಕಸ್ಮಾತ್ತಾಗಿ ಬಂದ ಅಪಾಯಗಳು ಪರಸ್ಪರವಾಗಿ
ುಹರಿಸಲ್ಪಡುವವು.

ನಾಲ್ವತ್ತೊಂದನೇ ಕಥೆ.

ಸಂಪನ್ನ ಶೆಟ್ಟಿಯೂ ಗಂಟುಕಳ್ಳ ವೀರನೂ.

ಸಂಪನ್ನ ಶೆಟ್ಟಿ ಎಂಬ ಒಬ್ಬ ವರ್ತಕನಿದ್ದನು. ಅವನು ಳ್ಳಿ ಪಳ್ಳಿಗಳಲ್ಲಿರುವ ಗವುಡಗಳಿಗೂ ರೈತರಿಗೂ ನೂರಾರು ವ ಹಾಗಳು ಬಡ್ಡಿಗೆ ತಲವಾಸಿಗೆ ದವಸಕ್ಕೆ ಸಹ ಕೊಟ್ಟು ತೆಕ್ಕೊ ಳ್ಳುತ್ತಾ ವ್ಯಾಜ್ಯ ವ್ಯವಹಾರಗಳಿಲ್ಲದೆ ಸಜ್ಜನಿಕೆಯಾಗಿ ವರ್ತ ತನ ಮಾಡಿಕೊಂಡು, ಒಳ್ಳೇ ಸಂಪನ್ನನು ಒಳ್ಳೇ ಸಂಪನ್ನ ಎಂಬ ಹೆಸರುವಾಸಿ ಸಂಪಾದಿಸಿ ಕಾಲಕ್ಷೇಪ ಮಾಡುತ್ತಿರುವನ ಹೀಗಿರುವಲ್ಲಿ ಗಂಟುಕಳ್ಳ ವೀರನೆಂಬ ಒಬ್ಬ ತುಂಟ ಬಕ್ಕ ಗನಿಗೆ ಪತ್ರ ಬರಿಸಿ ಕೊಂಡು ನೂರು ವರಹಾ ಸಾಲ ಕೊ ಟ್ಟನು. ಆದರೆ ಬಕ್ಕಲಿಗನ ಮೋಸಗಾರಿಕೆ ಶೆಟ್ಟಿಗೆ ತಿ ಯದೆ ಅವನ ಬೇಳುವೆ ಮಾತಿಗೆ ಬೆರಗಾಗಿ ನಾಲ್ಕಾರು ಏರುಳು ಸಂಸಾರಿ ಎಂಬ ನಂಬಿಕೆಯಿಂದ ಹತ್ತೆಂಟು ವರುಷದ ವರಿಗೂ ಕೊಟ್ಟ ಹಣಕ್ಕೆ ತಗಾದಿ ಹಚ್ಚದೆ ಸುಮ್ಮನೆ ಇದ್ದನು. ತರ ವಾಯ ಶೆಟ್ಟಿಯು ಚೀಟು ಬರದು ಆಳನ್ನು ಕಳುಹಿಸಲು, ಗಂ ಟುಕಳ್ಳ ವೀರನು ಆ ಆಳನ್ನು ನೀನ್ಯಾರು? ಅವನ್ಯಾರು? ಹಣ ವೇನು? ಕಾಸೇನು? ನಾನರಿಯೆ ಹೋಗೆಂದು ಉಡಾಫೆ ಮಾ ದನು. ಆ ಆಳು ಬಹಳ ತರದೂದಿನಿಂದ ಮಾಡುವ ತಗಾದೆ ತಪ್ಪಿಸಿ ಕೊಂಡು ಗಂಟುಕಳ್ಳ ವೀರನು ಓಡಿ ಹೋದನು ಈ ಸಂಗತಿಯನ್ನು ತಿಳಿಸಿದ ಆಳಿನ ಮಾತನ್ನು ಕೇಳಿ ವರ್ತಕ ನು ತಾನೇ ಬಂದು ಈ ತುಂಟನು ಮನೆಯಲ್ಲಿರುವ ಸಮಯದಲ್ಲಿ ಕಂಡು ಹಿಡಿದು, ಪತ್ರಾರ್ಥದ ಹಣ ಕೊಡೆಂದು ತಗಾದಿ ಹಚ್ಚಿ

ು; ಅದಕ್ಕವನು ಪತ್ರವಂದರೇನು? ನಾನು ನಿನಗೆ ಪತ್ರವೇ
ಬರಕೊಡಲಿಲ್ಲ, ನೀನು ಓದುಬರಹಾ ಕಲಿತವನು, ನನ್ನ ಹೆಸ
ಲ್ಲಿ ನೀನೇ ಪತ್ರಾ ಬರಕೊಂಡಿದ್ದೀಯೋ ಏನೋ, ಹೀಗೆ ಎ
ಮನೆಗಳು ಮುಣಿಗಿಸಿದ್ದೀ ? ನನಗೆ ನೀನು ನೂರು ವರಹಾ
ಸಿ ಕೊಟ್ಟದ್ದಕ್ಕೆ ಸಾಕ್ಷಿ ತೋರಿಸು, ಎಂದೋ ಬಂದು ದಿವಸ
ದಾಯಕ್ಕೆ ಹತ್ತು ರೂಪಾಯಿ ಕೊಟ್ಟಿದ್ದಿ, ಅದು ಆ ಹೊತ್ತೇ
ರಿಸಿ ಬಿಟ್ಟೆ, ಇನ್ನೇನೂ ಕೊಡತಕ್ಕದ್ದಿಲ್ಲ, ಹೋಗೆಂದು ದಬಾ
ಸಿದನು. ಅವನ ದಬಾವಣಿಗೆ ಈ ವರ್ತಕನು ಅಂಜದೆ ಎ
ೀ ಗಂಟುಕಳ್ಳನೇ, ಕಚೇರಿಗೆ ನಡಿ, ನಿನ್ನ ಪೂರ್ವೋತ್ತರ
ಗಡಿಸುತ್ತೇನೆ, ಎಂದು ಶರಗು ಹಿಡಿದು ದರದರನೆ ಎಳಕೊಂ
ಹೋದನು. ಆಗ ಈ ತುಂಟ ಒಕ್ಕಲಿಗನು ಈ ಉಳ್ಳಿ
ಮಾರಿಕೊಂಡು ಕಾಲ ಕಳಿಯುವ ವರ್ತಕನಿಗೆ ತಕ್ಕ ಕೆಲ
ಕೊಡ ಬೇಕೆಂದೆಣಿಸಿ ಹೊಂದಿಕೆ ಮಾತುಗಳಾಡಿ, ಎಪ್ಪಾದರು
ಟ್ಟವನು ತಾಯಿ, ತಾಯಿಗೆ ಮೋಸ ಮಾಡಬಾರದೆಂದು ನ್ಯಾ
ದ ಮಾತುಗಳು ನುಡಿಯುತ್ತಾ ಶೆಟ್ಟಿಯ ಮನಸ್ಸು ಕರಗಿಸಿ,
ಕೇರಿ ಇರುವ ಊರಿನ ಸಮೀಪಕ್ಕೆ ಬಂದು, ಅಲ್ಲಿ ಕೂತು
ಂಡು, ಅಯ್ಯಾ ಶೆಟ್ಟೀ, ನನ್ನ ಪತ್ರವೆಲ್ಲಿ? ನೋಡೋಣ, ನ
ನ್ಯಾಯ ನಾವೇ ಹರಿಸಿ ಕೊಳ್ಳೋಣ ಅನ್ನಲು, ಇಗೋ
ೀಡು, ನಿನ್ನ ಪತ್ರವೆಂದು ನಡುವಿನಲ್ಲಿದ್ದ ಕಾಗದವನ್ನು ತೆಗ
ವರ್ತಕನು ಕೊಟ್ಟನು. ಆ ಕ್ಷಣದಲ್ಲೇ ಈ ಒಕ್ಕಲಿಗನ
ನ್ನು ಪರ್ಯಂತ ಹರಿದು ಅಲ್ಲಿದ್ದ ಶೇದುವ ಭಾವಿಯಲ್ಲಿ ಹಾಕಿ
ಟ್ಟನು. ಆಗ ಮಹಾ ಕೋಪವನ್ನು ಹೊಂದಿದ ಸಂಪನ್ನ
ಗಂಟು ಕಳ್ಳನ ಮುಡಿ ಹಿಡಿದು ಬಂದೇ ಬಿರುವಿನಲ್ಲಿ ಕ

ಚೀರಿಗೆ ಎಳಕೊಂಡು ಹೋಗಿ ನ್ಯಾಯಾಧಿಕಾರಿಗೆ ಆ ತುಂಟ
ಕ್ಕಲಿಗನು ಮಾಡಿದ ಸಂಗತಿಯೆನ್ನೆಲ್ಲಾ ತಿಳಿಸಲು, ಆ ಅಧಿಕ
ಯು ಎಲೋ ಒಕ್ಕಲಿಗಾ, ನಿನ್ನ ಹೆಸರು ಗಂಟು ಕಳ್ಳ ವೀರ
ಹೌದೋ, ಆ ಹೆಸರಿಗೆ ತಕ್ಕ ಹಾಂಗೆ ಕೊಟ್ಟವರ ಗಂಟನ್ನು ನ
ಗಿ ಬಿಟ್ಟಿಯೋ ? ಗಂಟು ನುಂಗಿ ಬಿಟ್ಟದ್ದಲ್ಲದೆ ಪತ್ರವನ್ನು ಸ
ಹರಿದು ಬಿಟ್ಟಿಯಾ ? ಸುಳ್ಳು ಹೇಳ ಬೇಡ, ಪ್ರಮಾಣವಾಗಿ ನ
ಳಿಂದು ಆಜ್ಞಾಪಿಸಿದನು. ಅದಕ್ಕಾ ತುಂಟನು ಪ್ರಮಾಣಕ್ಕೆ ಹ
ತೆಗಿಯದೆ ನಾನಿವನ ಪತ್ರವನ್ನು ಹರಿಯಲಿಲ್ಲ ವೆಂದು ಬೊಂಕಿ
ನು. ಆಗ ನ್ಯಾಯಾಧಿಪತಿಯು, ಓ ಸಂಪನ್ನ ಶೆಟ್ಟೀ, ಇವ
ನಿನ್ನ ಪತ್ರವನ್ನು ಹರಿದು ಭಾವಿಯಲ್ಲಿ ಹಾಕಿ ಬಿಡುವಾಗ ಕ
ವು ಚೂರುಗಳು ಘಾಳಿಗೆ ಹಾರಿ ಮೇಲೆ ಎಲ್ಲಾದರು ಬಿದ್ದಿರ ಬಹ
ದು, ಹುಡಿಕಿ ಆದುಕೊಂಡು ಬಾ ಹೋಗೆಂದನು. ಹಾಗೆಯೆ
ಆಗಲೆಂದು ವರ್ತಕನು ಹೊರಟು ಹೋದ ತರುವಾಯ ಈ ನ
ಯಾಧಿಪತಿಯು ವರ್ತಕರೇ ಮೋಸಗಾರರು ಹೊರ್ತು ಒಕ್ಕ
ಮುಕ್ಕಳಲ್ಲಿ ಮೋಸಗಾರಿಕೆ ಎಷ್ಟು ಮಾತ್ರವೂ ಇಲ್ಲವೆಂದು ಲೆ
ಕಾಭಿರಾಮವಾದ ಮಾತುಗಳಿಂದ ಈ ಒಕ್ಕಲಿಗನನ್ನು ಉಬ್ಬಿ
ಇಷ್ಟು ಹೊತ್ತಿಗೆ ಆ ವರ್ತಕನು ಆ ಸ್ಥಳಕ್ಕೆ ಹೋಗಿರುವನೆ
ಎಂತ ಅಂದು ಕೊಂಡದ್ದಕ್ಕೆ, ಇನ್ನೂ ಹೊಗಿರಲಾರನು ಬುಡ
ಎಂಬ ಮಾತು ಗಂಟುಕಳ್ಳ ವೀರನ ಬಾಯಿಂದ ಹೊರಟಿತ
ಆ ಮರ್ಮವನ್ನು ಗ್ರಹಿಸಿ ನ್ಯಾಯಾಧಿಪತಿಯು ಈ ಒಕ್ಕ
ಗನನ್ನು ಹಿಂಗಟ್ಟು ಕಟ್ಟಿಸಿ, ಜಿಲೀಬಿದಾರಾ, ಇವನಿಗೆ ನೂ
ಯಿಪ್ಪತ್ತು ಕೊರಡೆ ಹೊಡಿ, ಪತ್ರ ಹರಿಯದಿದ್ದರೆ ಆ ಸ್ಥಳ
ಗೊತ್ತು ಯಿವನಿಗೆ ಹ್ಯಾಗೆ ತಿಳಿಯಿತು, ಎಂದು ಗದರಿಸಿದ ವ

ದಲ್ಲೀ, ಗಂಟುಕಳ್ಳ ವೀರನು ಬುದ್ದೀ, ಹಣ ಕೊಡತಕ್ಕದ್ದು ಂಟೆಂದನು. ನ್ಯಾಯಾಧಿಪತಿ ಕೊಟ್ಟುಬಿಡೆಂದು ವರ್ತಕನಿಗೆ ೊಡಿಸಿ ಬಿಟ್ಟನು. ಇದೇ ನ್ಯಾಯಾಧಿಪತಿಗಳ ಗುಣವ್ರು.

ನಾಲ್ವತ್ತೈರಡನೇ ಕಥೆ.

ಬೆಲ್ಲದ ಕಿತ್ತಾಟ.

ನಾಮಗುಂಡ್ಲದ ಬೆಲ್ಲದ ಶೆಟ್ಟಿ ಎಂಬವನು ಬೆಲ್ಲದ ವ್ಯಾಪಾರದ ೀ ಬಲ್ಲಿದನಾಗಿದ್ದನು. ಅವನು ಕಬ್ಬು ತೋಟ ಮಾಡುವ ತರಿಗೆ ಬೆಲ್ಲಕ್ಕೆ ಮುಂಗಡವಾಗಿ ಬಹಳ ಹಣ ಕೊಟ್ಟು, ಆಲೆ ಾಡಿ ಬೆಲ್ಲಗಳಾದ ಕೂಡ್ಲೀ ಉಂಡೆಗಳನ್ನೂ ಅಚ್ಚುಗಳನ್ನೂ ಂಡಿಗಳಿಗೂ ಎತ್ತಿನ ಹೇರುಗಳಿಗೂ ತುಂಬಿ, ಕಣವೇ ಮೀ ನ ಶೀಮೆಯಿಂದ ಕಣವೇ ಕೆಳಗೆ ಚನ್ನಪಟ್ಣ ಮುಂತಾದ ಸ್ಥಲ ಗಳಿಗೆ ಕೇಪು ಕಳುಹಿಸಿ ಬಂದಕ್ಕೆ ರಡು ಲಾಭ ಬರುವ ಮೇರಿಗೆ ಾರಿಸಿ ಬಹಳ ದ್ರವ್ಯವಂತನಾಗಿ ಇದ್ದನು. ಹೀಂಗಿರುವಾಗ ಂದುಸಲ ಈ ಶೆಟ್ಟಿಗಾರನು ಸಾವಿರಾರು ಭಂಡಿಗಳೂ ಹೇರುಗ ೂ ಕೋಲಾರ ಮಾರ್ಗವಾಗಿ ಸಾಗಿ ಹೋಗ ಕಳುಹಿಸಿ, ತಾನು ತ್ತೆಂಟು ಗೋಣಿಗಳನ್ನು ಎತ್ತುಗಳ ಮೇಲೆ ಹೇರಿಸಿ, ಬಂದು ಾಜಿಲು ಹಿಂದಾಗಿ ಹೋಗುತ್ತಿರುವಾಗ, ಭಲ್ಲೇರಿ ಎಂಬ ಗ್ರಾ ದ ಬಳಿಯ ಹುಲ್ಲೆಗಳ ಚಲ್ಲಾಟಕ್ಕೆ ಈ ಎತ್ತುಗಳಲ್ಲಿ ಬಂದು ಾಯಿ ಹೋರಿ ಬೆದರಿ ಹಾರಿತು. ಆಗ "ಎತ್ತು ಹಾರುವದಕ್ಕೆ ಮುಂಚೆ ಗೋಣಿ ಹಾರಿತು" ಎಂಬ ಸಾಮತಿಗೆ ಸರಿಯಾಗಿ, ಆ ರೋರೀ ಮೇಲಿನ ಬೆಲ್ಲದ ಗೋಣಿ ಮೂರಾರು ಬಾರು ದೂರ

ಹಾರಿ ಬಿತ್ತು. ಹೇರುಗಳ ಸಂಗಡ ಬರುತ್ತಿದ್ದ ಆಳುಗ
ಮುಂದಕ್ಕೆ ಸಾಗಿ ಹೋದರು. ಶೆಟ್ಟಿಯು, ಹೋರಿ ಹಾರಿ ಬಿ
ಗೋಣಿ ಸಹಿತ, ಹಿಂದಾದನು. ಆಗ ತಂಟ್ಲೆಮಾರನೆಂಬ ಬ
ಒಕ್ಕಲಿಗರ ಹುಡುಗನು ಆ ದಾರಿಯ ಮಗ್ಗಲಲ್ಲೇ ದನ
ಮೇಯಿಸುತ್ತಾ ಇದ್ದನು. ಅವನನ್ನು ನೋಡಿ ಎಲಾ ಹು
ಗಾ, ರವಪ್ಪ ಇಲ್ಲಿ ಬಾ, ನಿನಗೆ ಶಾನೆ ಬೆಲ್ಲ ಕೊಡುತ್ತೇ
ಈ ಗೋಣೀ ಹಿಡಿದು ಎತ್ತು, ಎತ್ತಿನ ಮೇಲೆ ಹಾಕೋಣ,
ದು ಕೂಗಿದ ಶೆಟ್ಟಿಯ ಹತ್ರಕ್ಕೆ ಆ ಹುಡುಗನು ಬಂದು ಇದು
ಲ್ಲದ ಗೋಣಿಯೋ ಉಪ್ಪಿನ ಗೋಣಿಯೋ? ನಾನು ಇದ
ಹಿಡಿದರೆ ಶಾನೆ ಬೆಲ್ಲ ಕೊಡುತ್ತಿಯೋ? ಅಂದನು. ಅದಕ್ಕೆ ಶೆ
ಯು ಎಲಾ ತಂಡಕ ಹುಡುಗನೇ, ಇದು ಉಪ್ಪಲ್ಲ, ಬೆಲ್ಲ
ಗೋಣೀ ಹಿಡಿದೆತ್ತು, ಶಾನೆ ಬೆಲ್ಲ ಕೊಡುತ್ತೇನೆ, ತಿಂದು
ರು ಕುಡಿಯುವಿಯಂತೆ, ಉಪ್ಪು ತಿಂದಷ್ಟು ದಾವರವಾಗಿ ಬ
ಹೋದೀಯೆ, ಬೆಲ್ಲವೇ ತಿನ್ನು, ಎಂದು ಮಾತನಾಡಿಸಿ, ತಾನು
ನ ಕೂಡ ಹೇರೆತ್ತಿ ಹೋರೀ ಮೇಲೆ ಹಾಕಿ ಹೋರಿಯ
ದಾರಿಯಲ್ಲಿ ಸಾಗ ಬಿಟ್ಟು, ತನ್ನ ಹೆಗಲಿನ ಹಸಿಬೆಯಲ್ಲಿದ್ದ
ದುಂಡಿಗಳಲ್ಲಿ ಬಂದುಂಡೆಯನ್ನು ತೆಗದು ಆ ಹುಡುಗನಿಗೆ
ಟ್ಟನು. ಆಗ ಆ ತಂಡಕನು ಏನೈಯ್ಯಾ, ಶೆಟ್ಟೀ, ನೀನು ಬ
ವನೇ, ಶಾನೆ ಬೆಲ್ಲ ಕೊಡುತ್ತೇನೆಂದು ಹೇಳಿ ಒಂದುಂಡೆ ಕ
ಕ್ಕಿದಿ, ನಿನ್ನ ಬಿಡೋದಿಲ್ಲ, ಕೊಟ್ಟುಬಿಟ್ಟು ಹೋಗು, ಎ
ಶರಗು ಹಿಡಿದು ಕೊಂಡು ಹಿಗ್ಗಾ ಮುಗ್ಗಾ ಎಳೆದನು. ಶೆಟ್ಟಿ
ಕೋಪ ಬಂದಾಗ್ಯೂ, ಅವನು ಇವನು ಹುಡುಗನು, ಹೊಡೆ
ಬಾರದೆಂದು ತಾಳಿಮೆಯಿಂದ ಸಮುದಾಯಿಸಿ, ಎರಡು ಮು

ುಂಡೆಗಳು ಕೊಟ್ಟ್ಯಾಗ್ಯೂ, ಶಾನೆ ಕೊಡು, ಚಾನೆ ಕೊಡು, ಎಂಬ
ಾತು ಬಿಡದೆ ತೊಂದರೆ ಪಡಿಸಿದನು. ಆಗ ಶೆಟ್ಟಿಯು ಬೆಪ್ಪಾ
ಹುಡುಗ ಸಹವಾಸ ಬಂತಲ್ಲಪ್ಪಾ, ಎಂದು ಕಿತ್ತಾಡುತ್ತಾ ಇರು
ಾಗ, ಆ ಮಾರ್ಗದಲ್ಲಿ ಬಂದ ಒಬ್ಬ ಮನುಷ್ಯನು ಇದನ್ನು
ೂಡಿ ತಂಟ್ಲೆಮಾರನೆಂಬ ಹೆಸರು ನಿನಗೆ ಸಲ್ಲೋದೆಂದು ಉಬ್ಬಿ
, ಹುಡುಗನಿಗೆ ತಕ್ಕ ಉಪಾಯ ಮಾಡ ಬೇಕೆಂದು, ಬಂದುಂ
ಬೆಲ್ಲವನ್ನು ಒಡದು ನಿಂಬೇಕಾಯಷ್ಟು ಬೆಲ್ಲ ಬಲಗೈಯಲ್ಲೂ
ಲ್ಲೀಕಾಯಷ್ಟು ಎಡಗೈಯಲ್ಲೂ ಹಿಡುಕೊಂಡು, ಎಲಾ ಒಕ್ಕಲಿ
, ಇದು ಶಾನೆಯೋ, ಇದು ಶಾನೆಯೋ, ಎಂದು ಕೇಳಿದನು. ಅ
ಕ್ಕವನು "ಅತಿ ಯುಕ್ತಿ ಮತಿ ಕೆಡಿಸಿತೆಂಬ" ಗಾದೆಗೆ ಸರಿಯಾ
ಇದು ಶಾನೆ ಎಂದು ಬಲಗೈ ಬೆಲ್ಲವನ್ನು ತೋರಿಸಿದನು. ಆ
ರೆ ಹಿಡಿ, ನಿನ್ನ ಹಿಡಿ ತುಂಬಿತು, ಬಾಯಿ ತುಂಬ ಹಾಕ್ಕೊ,
ುಂಬಾ ಬೆಲ್ಲವಾಯಿತೋ, ಹೋಗು, ದಾರಿ ಹಿಡಿ, ಎಂದು ಆ
ನುಷ್ಯನು ಗದರಿದನು. ಆ ತಂಟ್ಲೆಮಾರಿ ಹುಡುಗನು ಅ
ಮೋರೆ ಹಾಕಿ ಕೊಂಡು ಓಡಿ ಹೋದನು. ಈ ಪ್ರಕಾರ
ೂಡ್ಡವರಾಗಲಿ ಚಿಕ್ಕವರಾಗಲಿ ಅತಿ ಆಶೆ ಪಟ್ಟರೆ, "ಕಡಾಶೆ
ಣ್ಣು ಕೊಂಡು ಹೋಗುವದು" ಎಂಬ ಸಾಮತಿಯ ಹಾಗೆ
ೂದಲಿಗೆ ಮೋಸ ಬರುವದು.

ನಾಲ್ವತ್ತುಮೂರನೇ ಕಥೆ.

ಸನ್ಯಾಸಿಯೂ ನಿಕ್ಷೇಪವೂ.

ದೇಶ ಸಂಚಾರದಿಂದ ತೀರ್ಥ ಯಾತ್ರೆಯನ್ನು ಮಾಡುತ್ತಿರು
ಬ್ಬ ಸನ್ಯಾಸಿಯು ಮಹಾ ಯೋಗ್ಯನಾಗಿ ಅರ್ಘಾವೇಕ್ಷೆ ಇ

ಲ್ಲದೆ ಇದ್ದನು. ಅವನ ಕಣ್ಣಿಗೆ ಗೊಂಡಾರಣ್ಯದ ಮಾರ್ಗದ
ಬಂದು ನಿಕ್ಷೇಪವು ಕಾಣಿಸಿತು. ಅದನ್ನು ಕಂಡ ಮಾತ್ರದಲ್ಲಿ ಹೆ
ರಿ ಪ್ರಾಣಘಾತಕ ಪ್ರಾಣಘಾತಕವೆಂಬ ಓಡಿ ಹೋಗುವ ಸ
ಸನ್ಯಾಸಿಗೆ ಎದುರಾಗಿ ಇಬ್ಬರು ಬೇರೆ ಸನ್ಯಾಸಿಗಳು ಅವರ ಪ
ಚಾರಕ ನೊಬ್ಬನು ಅಂತು ಮೂರು ಮಂದಿ ಬರುತ್ತಾ ಏನು ಕ
ಡು ಬೆದರಿ ಓಡಿ ಹೋಗುತ್ತೀ ಎಂದು ಕೇಳಿದರು. ಅದಕ್ಕೆ ಆ
ಪ್ರಾಣ ಘಾತಕವನ್ನು ದ್ರವ್ಯ ರೂಪವಾಗಿ ಕಂಡು ಬೆದರಿ ಓ
ತ್ತೇನಂದನು, ಆ ಮಾತನ್ನು ಕೇಳಿ ಇವನು ದಡ್ಡನೆಂದು ನ
ತ್ತಾ ಬಂದು, ಅವರು ಆ ನಿಕ್ಷೇಪವನ್ನು ಕಂಡು ಎತ್ತಿಕೊಂ
ಕೆಲವು ದೂರ ಹೋಗಿ, ಅಲ್ಲೊಂದು ಭಾವಿಯೂ ಮುಂಟಪಷ
ಇದ್ದದ್ದು ನೋಡಿ ಅಡಿಗೆ ಮಾಡಿ ಊಟ ಮಾಡುವದಕ್ಕಾಗಿ ನಿಂ
ರು. ಈ ಇಬ್ಬರು ಸನ್ಯಾಸಿಗಳನ್ನು ಕೊಂದು ಬಿಟ್ಟು ದ್ರವ್ಯ
ನ್ನು ತಾನೇ ಅಪಹರಿಸ ಬೇಕೆಂದು ಪರಿಚಾರಕನು ಆ ಇಬ್ಬ
ಗೂ ಮಾಡಿದ ಅಡಿಗೆಯಲ್ಲಿ ವಿಷವನ್ನು ಬೆರೆಸಿಟ್ಟನು. ಈ ಪರಿಚ
ರಕನನ್ನು ಕೊಂದ ಹೊರ್ತು ಅವನಿಗೆ ಸಲ್ಲತಕ್ಕ ಪಾಲು ತ
ಗೆ ದಕ್ಕದೆಂದು ಈ ಸನ್ಯಾಸಿಗಳು ನೆನೆಸಿ, ತಮಗೆ ಅಡಿಗೆ ವ
ಡಿಟ್ಟು ಭಾವಿಯ ಕಡೆಯ ಮೇಲೆ ಕುಳಿತಿದ್ದ ಪರಿಚಾರಕನನ
ಅದಾಟೂಗಿ ಭಾವಿಯೊಳಗೆ ತಳ್ಳಿ ಬಿಟ್ಟರು. ಅದರಲ್ಲಿ ಬಿದ್ದು ಸ
ಪರಿಚಾರಕನ ಅಡ್ಡಿ ತೀರಿದ ಸಂತೋಷದಿಂದ ಈ ಇಬ್ಬ
ಸನ್ಯಾಸಿಗಳೂ ಆ ವಿಷಾನ್ನವನ್ನು ಗಬಕು ಗಬಕ್ಕೆಂದು ತಿಂ
ಒರಗಿ, ದ್ರವ್ಯವು ಪ್ರಾಣಘಾತಕವೆಂಬ ಮಾತು ನಿಶ್ಚಯವೆಂ
ಕೂಗಿ ಹೊರಳಿ ಸತ್ತರು. ಹೀಗೆ ಅರ್ಥವು ಅನರ್ಥ
ಕಾರಣವಾಗಿರುವದು.

ನಾಲ್ವತ್ತುನಾಲ್ಕನೇ ಕಥೆ.

ಗಂಟು ವ್ಯಾಜ್ಯದ ಮಾರ್ಗಸ್ಥರು.

ನಾಲ್ಕು ಮಂದಿ ಕೂಡಿ ಪ್ರಯಾಣ ಹೋಗುತ್ತಿರುವಾಗ, ದಾ
ಯೆಲ್ಲಿ ಬಂದು ಗಂಟು ಬಿದ್ದಿತ್ತು. ಅದನ್ನು ಅವರಲ್ಲಿ ಬಬ್ಬನು
ಂಡು ಅದೇನೋ ಗಂಟು ಬಿದ್ದದೆ ಎಂದು ಹೇಳಿದನು, ಮತ್ತೊ
ನು ಏನೋ ಬಟ್ಟೇಗಂಟು ಅಂದನು, ಇನ್ನೊಬ್ಬನು ಬಟ್ಟೇ
ಂಟು ಆದಾಗ್ಯೂ ಘಟ್ಟಿಯಾಗಿರುವ ಹಾಗೆ ಕಾಣಿಸುತ್ತದೆ ಎಂ
ು ಅದರ ಹತ್ರಕ್ಕೆ ಬಂದನು, ಅಷ್ಟರಲ್ಲಿ ನಾಲ್ಕನೆಯವನು ಬೇ
ಬಗ್ಗಿ ಗಂಟನ್ನು ಕೈಗೆತ್ತಿ ಕೊಂಡನು. ಎಲ್ಲರೂ ಬಿಟ್ಟಗೆ ಗಂ
ು ಬಿಚ್ಚಿ ನೋಡಿ ಹಣವೆಂದು ತಿಳಿದು ಕೊಂಡ ಮೇಲೆ ಈ
ಣವನ್ನು ನಾಲ್ಕು ಮಂದಿಯೂ ಸರಿಯಾಗಿ ಹಂಚಿ ಕೊಂಬೋ
ಎಂದು, ಬಟ್ಟೆ ಗಂಟೆಂದ ಎರಡನೆಯವನು ಹೇಳಿದನು, ಘಟ್ಟಿ
ಾದ ಗಂಟೆಂದು ಹೇಳಿದ ಮೂರನೆಯವನು ನಿನಗಿಂತಲು ನನ
ಹೆಚ್ಚಾಗಿ ಪಾಲು ಬರಬೇಕೆಂದನು, ಗಂಟನ್ನು ಕಂಡ ಮೊದ
ನೆಯವನು ನಿಮ್ಮಿಬ್ಬರಿಗಿಂತಲು ನನಗೆ ಹೆಚ್ಚಾಗಿ ಪಾಲು ಬರ
ೇಕೆಂದನು, ನಾಲ್ಕನೆಯವನು ಗಂಟು ಶಿಕ್ಕಿದ್ದು ನನಗೆ, ನಿವು
ಲ್ಲ, ಯಾತಕ್ಕೆ ಪಾಲು ಕೊಡುವದು, ಅಥವಾ ಕೊಟ್ಟಾಗ್ಯೂ
ನಾದರು ಅಲ್ಪ ಸ್ವಲ್ಪವಾಗಿ ಕೊಡುತ್ತೇನೆ ಎಂದು ಉಳಿದವರ
ನ್ನು ಉಡಾಯಿಸಿ ಮಾತನಾಡಿದನು. ಈ ಮೇರಿಗೆ ಬಬ್ಬರಿಗೊಬ್ಬ
ಗೆ ವ್ಯಾಜ್ಯ ಉಂಟಾಗಿ ಬಬ್ಬರ ಮಾತೊಬ್ಬರು ಕೇಳದೆ, ಅವ
ರು ಈ ಸಂಗತಿಯನ್ನು ಬೇರೆ ನಾಲ್ಕು ಮಂದಿ ಸಂಪನ್ನರಿಗೆ
ತಿಳಿಸಿ ಅವರು ಹೇಳಿದ ಪ್ರಕಾರ ಹಂಚಿಕೊಂಬೋಣ ಎಂದು

ಬಡಂಬಟ್ಟು, ಮಾರ್ಗದಲ್ಲಿರುವ ವೋರುಗಲ್ಲೆಂಬ ಊರಿಗೆ ಶೇ
ನಡುಪೇಟೆಗೆ ಬಂದು, ಸರಾಫ ಕಟ್ಟೆಯಲ್ಲಿ ಸ್ವಂತ ಅಂಗಡಿಂ
ಮೇಲೆ ಕುಳಿತಿರುವ ಸಾವುಕಾರನನ್ನು ಕಂಡು, ಅಯ್ಯಾ ಶೆಟ್ಟಿ
ಈ ಗಂಟು ಅಮಾನತಾಗಿ ನಿನ್ನಲ್ಲಿ ಇಟ್ಟು ಕೊಂಡಿರು, ನಾ
ನಾಲ್ಕು ಮಂದಿಯೂ ಒಟ್ಟಿಗೆ ಬಂದು ಕೇಳಿದರೆ ಹೊರ್ತು ಕೊ
ಬೇಡ, ನಾವು ಅಗೋ ಆ ಭಾವಿಗೆ ಹೋಗಿ ಅಶನಾ ತೀರಿಸಿಕೊ
ಡು ಬರುತ್ತೇವೆಂದು ಹೇಳಿ, ಗಂಟಿನ ಮೇಲೆ ತಮ್ಮ ಹೆಗ್ಗು
ತು ಮಾಡಿ ವರ್ತಕನ ಕೈಲಿ ಕೊಟ್ಟು ಹೋದರು. ತರುವಾಂ
ಭಾವಿಗೆ ಹೋಗಿ ಬುತ್ತಿಯ ಬಾಯಲ್ಲಿ ಹಾಕಿಕೊಂಡು ಭಾವಿಂ
ಕಟ್ಟೇ ಮೇಲೆ ಬಂದು ಕೂತು ಕೊಂಡು, ಯೆಲೆ ಅಡಿಕೆ ಗೊ
ಸ್ಕರ ನಾಲ್ಕನೆಯವನನ್ನು ಶೆಟ್ಟಿಯ ಬಳಿಗೆ ಕಳುಹಿಸಿದರು,
ವನು ಬಂದು ಬಂದು ದುಡ್ಡಿಗೆ ಯೆಲೆ ಅಡಿಕೆ ತರಿಸಿ ಕೊಡೆಂ
ಕೇಳುವದಕ್ಕೆ ಬದಲಾಗಿ ಓ ಶೆಟ್ಟೀ, ಆ ಗಂಟಲ್ಲಿ ತಾ ಅಂದನ
ಶೆಟ್ಟಿಯು ನೀವು ನಾಲ್ಕು ಮಂದಿಯೂ ಕೂಡಿ ಬಂದು ಕೇಳಿ
ಹೊರ್ತು ನಾನು ಕೊಡುವದಿಲ್ಲವೆಂದನು. ಆಗ ಆ ನಾಲ್ಕನೆ
ವನು ಉಳಿದ ಮೂರು ಮಂದಿಯನ್ನು ಕುರಿತು ಶೆಟ್ಟಿ ಕೊಡೊ
ದಿಲ್ಲವಂತೆ, ಕೋಡೋದಿಲ್ಲವಂತೆ, ಎಂದು ಕೂಗಿದ್ದಕ್ಕೆ, ಶೆಟ್ಟಿ
ಕೊಡ್ಯೆಯ್ಯಾ ಕೊಡ್ಯೆಯ್ಯಾ ಎಂದು ಅವರು ಹೇಳಿದರು.
ಮಾತನ್ನು ಕೇಳಿ ಶೆಟ್ಟಿಯು ಗಂಟಿತ್ತಿ ಕೈಗೆ ಕೊಡಲು, ಆ ಷ
ದಲ್ಲೇ ಅವನು ಕಂಬಿ ಕಿತ್ತನು. ಆಗ ಉಳಿದ ಮೂರು ಮಂ
ಯ ಕೆಲಸ ಮೂರುದಾರಿ ಆರುಬಟ್ಟೆ ಆಯಿತು. ಬಳಿಕ ಸ್ವಂ
ಹೊತ್ತಿಗೆ ಆ ಮೂರು ಮಂದಿಯೂ ಸರಾಫನ ಹತ್ರಕ್ಕೆ ಓ
ಬಂದು ನಮ್ಮವನೆಲ್ಲಿ, ಗಂಟವನ ಕೈಲಿ ಕೊಟ್ಟೆಯೋ, ಅ

ನಮಗೆ ನಿಮಿತ್ತವಿಲ್ಲ, ನಮ್ಮ ಗಂಟಿಗೆ ನೀನೇ ಉದಾರಣೆ ಹೇಳ
ಬೇಕು, ಛಾವಡಿಗೆ ನಡಿ, ಎಂದು ವಿಚಾರಣೆ ಕರ್ತನ ಬಳಿಗೆ
ಶೆಟ್ಟಿಯನ್ನು ಎಳ ಕೊಂಡು ಬಂದು, ತಮ್ಮ ಘಿರಿಯಾದು ಸಂಗ
ತಿಯನ್ನೆಲ್ಲಾ ತಿಳಿಸಿದರು. ನ್ಯಾಯಧಿಕಾರಿಯು ಶೆಟ್ಟಿಯನ್ನು
ಕರಿಸಿ ವಿಚಾರಿಸಿ ಅವನು ಮೋಸ ಹೋದನೆಂದು ತಿಳುಕೊಂಡು
ಈ ಮೂರು ಮಂದಿಯನ್ನು ನೋಡಿ ಅವಿವೇಕ ಶಿಖಾಮಣಿಗಳಿ
ನಾ, ನೀವು ಮಾಡಿದ ನಿಗದೀ ಪ್ರಕಾರಕ್ಕೆ ನೀವು ನಾಲ್ಕು ಮುಂ
ಏಯೂ ಕೂಡಿ ಬನ್ನಿರಿ, ನಿಮ್ಮ ಗಂಟು ಕೋಡಿಸುತ್ತೇವೆಂದು
ಹೇಳಿದನು. ಆ ಮಾತಿಗೆ ಪ್ರತ್ಯುತ್ತರವಿಲ್ಲದೆ ನಾಚಿಕೆ ಪಟ್ಟು,
ಈ ಮುಸಾಫರರು ಹೊರಟು ಹೋದರು.

ನಾಲ್ವತ್ತೈದನೇ ಕಥೆ.

ವಿದ್ಯೆಯೇ ಧನ.

ಮಲಯಾಳ ದೇಶದ ಜನಾರ್ದನ ಪುರವೆಂಬ ಊರಿನಲ್ಲಿ ಇ
ಬ್ಬರು ಸ್ನೇಹಿತರಿದ್ದರು. ಅವರಲ್ಲಿ ಒಬ್ಬನ ಹೆಸರು ಸಮುಖ
ನು, ಮತ್ತೊಬ್ಬನ ಹೆಸರು ಸುವಿಶೇಷನು. ಅವರು ಐಶ್ವರ್ಯ
ವಂತರ ಮಕ್ಕಳು, ಬಾಲ್ಯದಾರಭ್ಯ ಒಬ್ಬರನ್ನೊಬ್ಬರು ಸ್ನೇಹಿಸಿ
ಇದ್ದರು. ಬಂದಾನೊಂದು ದಿನ ಈ ಸಂಗಾತಿಗಳು ಆಲೋಚಿ
ಸಿ ತಮ್ಮ ತಮ್ಮ ತಂದೆಗಳನ್ನು ನೋಡಿ ಅಯ್ಯಾ, ನಾವಿಬ್ಬರೂ
ದೇಶ ಸಂಚಾರ ಮಾಡಿ ಅಲ್ಲಲ್ಲಿ ನಡಿಯುವ ನಡತೆಗಳನ್ನೂ ವರ್ತ
ಕ ಧರ್ಮದ ಲಕ್ಷಣಗಳನ್ನೂ ತಿಳುಕೊಂಡು ವ್ಯಾಪಾರ ಮಾಡಿ
ದ್ರವ್ಯವಂತರಾಗಿ ಪುನಃ ನಿಮ್ಮ ಸನ್ನಿಧಾನಕ್ಕೆ ಬರಬೇಕೆಂದು

ಯಿದ್ದೀವೆ, ಹಾಂಗೆ ಆಶೀರ್ವದಿಸ ಬೇಕೆಂದು ವಂದಿಸಿ ನಮ
ಸ್ಕರಿಸಿ ಅವರ ಅಪ್ಪಣೆ ತೆಗದು ಕೊಂಡು ದಕ್ಷಿಣ ದೇ
ದಿಂದ ಉತ್ತರ ದೇಶಕ್ಕೆ ಹೊರಟರು. ಆಗ ತಲಾ ಸಾವಿ
ವರಹಾದ ಹುಂಡೀ ಕಾಗದವನ್ನು ಕಾಶೀ ಪಟ್ಣದಲ್ಲಿರುವ ಸಾ
ವುಕಾರರ ಹೆಸರಿಗೆ ಇಲ್ಲಿನ ತಕ್ಕ ಸಾವುಕಾರರ ಕಡೆಯಿಂದ ಬ
ರಿಸಿ ಕೊಂಡು, ಕಂಕಳಲ್ಲಿ ಗಂಟು, ಕೈಯಲ್ಲಿ ಕೋಲು, ಹೀ
ಯೇ ಏಕಾಯೇಕಿ ಪೈಣ ನಡದು ಕೆಲವು ತಿಂಗಳಲ್ಲಿ ಕಾಶಿ
ಪಟ್ಣವನ್ನು ಶೇರಿದರು. ಸಂಗಡಲೇ ಹುಂಡೀ ಅಯಿವಜನ್ನು
ಬರ ಮಾಡಿ ಕೊಂಡು ಉಭಯತ್ರರು ಒಂದೇ ಮನೆಯಲ್ಲಿ ಒ
ದೇ ಕೆಲಸವನ್ನು ಮಾಡುವದಕ್ಕೆ ಮನಸ್ಸಿಲ್ಲದೆ, ಬಬ್ಬೊಬ್ಬರ
ಒಂದೊಂದು ಮನೆಯಲ್ಲಿ ಇದ್ದುಕೊಂಡು ಸ್ನೇಹವನ್ನು ಮಾತ್ರ
ಬಿಡದೆ, ದುರ್ವ್ಯಾಪಾರಗಳಲ್ಲಿ ಪ್ರವರ್ತಿಸದೆ, ಕಳ್ಳಾ ಶುದ್ಧಿ ಕೆ
ಯಾ ಶುದ್ಧಿ ವಾಕ್ಕು ಶುದ್ಧಿಗಳು ಉಳ್ಳವರಾಗಿ ಸುಖದಿಂದಿದ್ದರು
ಅವರಲ್ಲಿ ಸುಮುಖನೆಂಬುವನು ವರ್ತಕ ಪ್ರವರ್ತಕ ಮಾರ್ಗ
ವನ್ನು ತಿಳಿದು ವ್ಯಾಪಾರವನ್ನು ಮಾಡಿ, ಲಾಭೋದಾಯದಿಂ
ಮಹಾ ಧನವಂತನೆಂದು ಮಾತಿನವಾಶಿಯನ್ನು ಹೊಂದಿದನು
ಸುವಿಶೇಷನೆಂಬುವನು, ದ್ರವ್ಯವನ್ನು ಸಂಪಾದಿಸ ಮನಸ್ಸಿಲ್ಲದೆ
ಎಲ್ಲಾ ಧನಗಳಿಗೂ ಶ್ರೇಷ್ಠವಾದ ಧನವು ವಿದ್ಯೆಯೇ ಎಂದು ಆ
ಲೋಚಿಸಿ ನಿಶ್ಚೈಸಿ, ಅಂಥಾ ವಿದ್ಯಾ ಧನವನ್ನೇ ಸಂಪಾದಿಸ ಬೇ
ಕೆಂದು, ಆ ಪಟ್ಣದಲ್ಲಿ ಚತುಶ್ಶಾಸ್ತ್ರ ಪಂಡಿತನೆಂಬ ಹೆಸರುಳ್ಳ ಒ
ಬ್ಬ ವಿದ್ವಾಂಸನ ಬಳಿಗೆ ಹೋಗಿ ವಿನಯದಿಂದ ಕಂಡು ನಮ
ಸ್ಕಾರ ಮಾಡಿ, ಸ್ವಾಮಿಾ, ನಾನು ದಕ್ಷಿಣ ದೇಶದಿಂದ ವಿದ್ಯಾರ್ಥಿ
ಯಾಗಿ ತಮ್ಮ ಸನ್ನಿಧಾನಕ್ಕೆ ಬಂದು ಇದ್ದೇನೆ, ಕನಿಕರಿಸಿ ನನ

ವಿದ್ಯಾದಾನ ಮಾಡಬೇಕೆಂದು ಬೇಡಿಕೊಂಡು, ತನ್ನ ಕೈಲಿದ್ದ
ವಿರ ವರಹಾಗಳನ್ನು ಆ ವಿದ್ವಾಂಸನ ಪಾದಗಳ ಮುಂದೆ ಕಾಣಿ
ನೂಗಿ ಇಟ್ಟನು. ಆಗ ಆ ವಿದ್ವಾಂಸನು ಈ ವಿದ್ಯಾರ್ಥಿಯ
ಣವನ್ನು ಅವನ ಮುಖವ ನೋಡಿದ ಮಾತ್ರದಿಂದಲೇ ತಿಳು
ಂಡು, ಎಲೈ ದಾಕ್ಷಿಣ್ಯವಂತನೇ, ನಿನ್ನ ಹೆಸರೇನೆಂದು ಕೇಳಿ
ು. ಅವಕ್ಕಿವನು ಸ್ವಾಮಿ, ನನ್ನನ್ನು ಸುವಿಶೇಷನೆಂದು ಕರಿ
ುತ್ತಾರೆ ಎಂದನು. ಆಗ ವಿದ್ವಾಂಸನು ನಿನಗೆ ಸುವಿಶೇಷನೆಂ
ಹೆಸರು ಸಲ್ಲುವದು, ಹ್ಯಾಗಂದರೆ, ಲೋಕದಲ್ಲಿ ವಿದ್ಯಾರ್ಥಿ
ು ವಿದ್ಯೆಯನ್ನೆಲ್ಲಾ ಕಲಿತ ತರುವಾಯ ಗುರುದಕ್ಷಿಣೆ ಕೊಡು
ು ವಿಶೇಷವು, ಕಲಿಯುವದಕ್ಕೆ ಬಂದಾಗಲೇ ನೀನು ಗುರು
ಕ್ಷಿಣೆಯನ್ನು ಕೊಟ್ಟದ್ದೇ ಸುವಿಶೇಷವು, ಎಂದು ಸಂತೋಷ
ಟ್ಟು, ತನಗೆ ಬರುವ ವಿದ್ಯೆಯನ್ನೆಲ್ಲಾ ಅವನಿಗೆ ಚನ್ನಾಗಿ ಕಲಿ
ನು. ಅವನು ಬುದ್ಧಿವಂತನಾದ್ದರಿಂದ ನಾಲ್ಕು ವರುಷದಲ್ಲಿ
ಲ್ಕು ಶಾಸ್ತ್ರವನ್ನು ಓದಿ ಪರಿಕ್ಷೆ ಕೊಟ್ಟು ದೊಡ್ಡ ವಿದ್ವಾಂಸ
ಬ ಹೆಸರನ್ನು ಪಡೆದನು. ಹೀಗೆ ವಿದ್ವಾಂಸನಾದ ತನ್ನ
ೀಹಿತನ ಸಮಾಚಾರವನ್ನು ಐಶ್ವರ್ಯವಂತನಾದ ಸುಮುಖ
ಕೇಳಿ ಸುವಿಶೇಷನನ್ನು ಮರ್ಯಾದೆಯಿಂದ ತನ್ನ ಮನೆಗೆ
ಕೊಂಡು ಬಂದು ತನ್ನ ಮನೆಯಲ್ಲಿ ಆದರಿಸಿ ಇಟ್ಟು ಕೊಂಡ
ು. ಬಂದೆರಡು ವರ್ಷವಾದ ಮೇಲೆ ಸ್ವಂತ ದೇಶಕ್ಕೆ ಹೋ
ೀಕೆಂಬ ಮನಸ್ಸು ಹುಟ್ಟಿ ಸುಮುಖನು ತಾನು ಸಂಪಾದಿಸಿದ
ವ್ಯವನ್ನೆಲ್ಲಾ ಬಂಟಿಗಳ ಮೇಲೆ ಹೇರಿಸಿ, ಸ್ನೇಹಿತನಾದ ಸುವಿ
ಷ ನೊಡನೆ, ಕಾಶೀ ಪಟ್ಣದಿಂದ ಹೊರಟನು. ಹೀಗೆ ಹೊರ
ಗೊಂಡಾರಣ್ಯ ಮಧ್ಯದಲ್ಲಿ ಬರುತ್ತಿರುವಾಗ, ಪೆಂಡಾರರೆಂಬ

ಆ ದೇಶದ ಕಳ್ಳರು ಸಾವಿರಾರು ಜನ ಒಗ್ಗಟ್ಟಾಗಿ ಬಂದು ಪ
ಹೊಡದು ಹಣವೆಲ್ಲಾ ಸುಲುಕೊಂಡು ಹೋದರು. ಆಗ ಸ
ಮುಖನಿಗೂ ಸುವಿಶೇಷನಿಗೂ ಭೇದವಿಲ್ಲದೆ ಇಬ್ಬರೂ ಬಡ
ದರು. ದೋಪು ಕೊಟ್ಟು ದರಿದ್ರನಾದ ಸುಮುಖನಿಗೆ ಬ
ವ್ಯಸನ ವುಂಟಾಗಿ ತಾನು ಧನಿಕನಾಗಿ ಬಾಳಿದ ಕಾಶೀ ಪಟ್ಣಕ
ತಂದೆ ಇರುವ ಜನಾರ್ದನ ಪುರಕ್ಕೂ ಸಹ ದರಿದ್ರನಾಗಿ ಪ
ಹೋಗುವದಕ್ಕೆ ಮನಸ್ಸಿಲ್ಲದೆ ದುಃಖ ಪಡುತ್ತಾ ಇದ್ದನು.
ವನನ್ನು ನೋಡಿ ಸುವಿಶೇಷನು, ಎಲೈ ಸುಮುಖನೇ, ನೀನು
ಳ್ಳರಿಂದ ಕದಿಯಲ್ಪಡುವ ಧನವನ್ನು ಸಂಪಾದಿಸಿದಿ, ನಾನು ಕ
ರು ಅಪಹರಿಸ ಕೂಡದ ವಿದ್ಯಾಧನವನ್ನು ಸಂಪಾದಿಸಿದ್ದೇನೆ, ಆ
ರಿಂದ ನಿನ್ನನ್ನು ಪುನಃ ಧನವಂತನಾಗಿ ಮಾಡುತ್ತೇನೆ, ಯೋ
ನೆ ಮಾಡಬೇಡವೆಂದು ಸಮಾಧಾನ ಪಡಿಸಿ, ಇಬ್ಬರೂ ಕಾಲು ನ
ಯಿಂದಲೇ ಉಜ್ಜಿನೀ ಪಟ್ಣಕ್ಕೆ ಬಂದರು. ಆ ಮೇಲೆ ಸುವಿ
ಷನು ಆ ಪಟ್ಣ ವಾಳುವ ಬದ್ಧನೇಂದ್ರ ರಾಯನೆಂಬ ಅರಸನ ಆ
ಗೆ ಹೋಗಿ ರಾಜ ಸಭೆಯನ್ನು ಪ್ರವೇಶಿಸಿ ತನ್ನ ಪಾಂಡಿತ್ಯವನ್ನ
ಸಂಪೂರ್ಣವಾಗಿ ಪ್ರಕಟನೆ ಮಾಡಲು ಅಕ್ಷರ ಪಕ್ಷಪಾತಿಯ
ಆ ಪ್ರಭುವು ಸುವಿಶೇಷನನ್ನು ಬಹುಮಾನಿಸಿ, ಅವನಿಗೆ ಅನೇ
ದ್ರವ್ಯವನ್ನು ಕೊಟ್ಟನು. ಅದೇ ದ್ರವ್ಯದಿಂದ ಈ ಉಭಯರೂ
ರೂ ಐಶ್ವರ್ಯವಂತರಾಗಿ ಸ್ವಂತ ಪಟ್ಣವನ್ನು ಶೇರಿ ಸುಖದಿ
ದ್ದರು. ಈ ಮೇರಿಗೆ ವಿದ್ವಾಂಸರು ಸುಖಪಡುವರು.

ನಾಲ್ವತ್ತಾರನೇ ಕಥೆ.

ಅರಳೀ ಮರದ ದಿವ್ವವು.

ಒಂದು ಊರಿನಲ್ಲಿ ಒಬ್ಬ ಬ್ರಾಹ್ಮಣನು ಇದ್ದನು. ಅವನು
ಕ್ಷಗಾರನಾದ್ದರಿಂದ ಊರೆಲ್ಲಾ ತಿರಿಗಿ ಭಿಕ್ಷವೆತ್ತಿದ ಅಕ್ಕಿಯನ್ನು
ದು ಹೆಂಡತಿಯ ಕೈಲಿ ಕೊಡುವನು. ಅವಳು ಅದನ್ನು ಅಡಿ
ಮಾಡಿ ಗಂಡನ ಯೆಲೆಗೆ ಬಡಿಸಿ ಸಂಗಡಲೇ ಕಸಪೊರಿಕೆಯಿಂ
ಗಂಡನನ್ನು ಒಂದು ಪೆಟ್ಟು ಹೊಡೆಯುವಳು. ನಿತ್ಯವೂ ಈ
ಕಾರ ಹೆಂಡತಿಯ ಕೈಲಿ ಪೊರಿಕೆ ಪೆಟ್ಟು ತಿಂದು ಆಗ್ಯೆ ಮಾತ್ರ
ಖಿ ಪಡುತ್ತಾ ತನ್ನ ಕಟ್ಲೆ ಪ್ರಕಾರ ಭಿಕ್ಷ ಬೇಡಿ ಸಂಸಾರ
ನಾಡುತ್ತಾ ಇರುವನು. ಹೀಗೆ ಬಹಳ ದಿವಸದಿಂದ ಪೆಟ್ಟು
ದು ಬೇಸತ್ತು, ಆ ಬ್ರಾಹ್ಮಣನು ನಾಲ್ಕಾರು ದಿವಸ ಪರಸ್ಥ
ಕ್ಕಾದರು ಹೋಗಿ ಇರೋಣವೆಂದು ಆಲೋಚಿಸಿ, ಹೆಂಡತಿ
ನ್ನು ನೋಡಿ ನಾನು ಗ್ರಾಮಾಂತ್ರಕ್ಕೆ ಹೋಗಿ ಬರುತ್ತೇನೆ,
ಟು ದಿವಸದ ಅಕ್ಕಿ ಮನೆಯೆಲ್ಲಿ ಉಂಟು, ನೆಮ್ಮದಿಯಾಗಿ
ಂಡುಕೊಂಡು ಇರು, ಅಯಿದಾರು ದಿವಸದಲ್ಲಿ ಬರುತ್ತೇನೆಂದು
ಳಿದನು. ಆ ಮಾತನ್ನು ಕೇಳಿ, ಹೆಂಡತಿಯು ನೀನು ಆರು
ವಸದವರಿಗೂ ಬಾರದೆ ಯಿದ್ದರೆ ನನ್ನ ಕೈಯಿಂದ ಪೊರಿಕೆ
ಟ್ಟುಗಳು ತಿನ್ನುವವರ್ಯಾರು ? ಅದಕ್ಕೊಬ್ಬನನ್ನು ಗೊತ್ತು
ನೀನೆಲ್ಲಿಗಾದರು ಹೋಗೆಂದಳು. ಬ್ರಾಹ್ಮಣನು ಬಹು
ಂದರೆ ಬಂತಲ್ಲಾ ಏನು ಮಾಡಲೆಂದು ಯೋಚಿಸಿ, ತಾನು ಬೆಳಿ
ನ ಅರಳೀ ಮರವನ್ನು ನನಿಗೆ ಬದಲಾಗಿ ಪೊರಿಕೇಲಿ ಹೊ
ನುತ್ತಿರು ಎಂದು ಹೇಳಿಬಿಟ್ಟು ಹೊರಟು ಹೋದನು. ಆ

ಗಯ್ಯಾಳಿ ಹೆಂಗಸು ಆ ದಿವಸ ಯಥಾ ಪ್ರಕಾರ ಅಡಿಗೆ ಮ
ಹಿತ್ತಲಲ್ಲಿರುವ ಅರಳೀ ಮರದ ಮುಂದೆ ತನ್ನ ಗಂಡನಿಗೆ ಬಡಿ
ವ ಪ್ರಕಾರ ಯಲೇ ಹಾಕಿ ಬಡಿಸಿ, ಪೊರಿಕೆಯನ್ನು ಕೈಲಿ ತೆಕ್ಕೊ
ಡು ಇಗೋ ಮನುಷ್ಯನಿಗೆ ಒಂದು ಪೆಟ್ಟು, ಮರಕ್ಕೆ ಮೂರ
ಟ್ಟು, ಎಂದು ಹೊಡೆಯಲು, ಆ ಮರದಲ್ಲಿ ಬಹಳ ದಿವಸದಿ
ವಾಸವಾಗಿದ್ದ ಭೂತವು ಆ ಪೆಟ್ಟು ತಿನ್ನಲಾರದೆ ಬ್ರಾಹ್ಮಣನು
ದ್ದ ಬಳಿಗೆ ಓಡಿ ಹೋಗಿ ಯೆಲೈ ಬ್ರಾಹ್ಮಣನೇ, ನನ್ನನ್ನು ನಿ
ಹೆಂಡತಿಯ ಪೊರಿಕೇ ಪೆಟ್ಟಿಗೆ ಗುರಿ ಮಾಡಿ ಒರ ಬಹುದೇ?
ದು ದಿವಸದ ಪೆಟ್ಟಿಗೆ ನಾನು ತಾಳಲಾರದೆ ಹೋದೆನಲ್ಲಾ, ನೀ
ನಿತ್ಯವು ಇಂಥಾ ಪೆಟ್ಟುಗಳು ಹ್ಯಾಗೆ ತಿನ್ನುತ್ತೀ? ಅಯ್ಯೋ!
ಪವೇ! ಎಂದು ಪಶ್ಚಾತ್ತಾಪ ಪಟ್ಟು ಕನಿಕರಿಸಿ, ಇನ್ನು ಮೇ
ಈ ಪೆಟ್ಟು ನೀನು ತಿನ್ನದ ಹಾಗೆ ಒಂದು ಉಪಾಯವನ್ನು
ಳುತ್ತೇನೆ ಕೇಳು, ನಾನು ಈ ಸೋಳಾಪುರದ ಅರಸನ ಹೆಂ
ಯನ್ನು ಹಿಡಿದು ಬಹಳ ತೊಂದರೆ ಪಡಿಸುತ್ತೇನೆ, ಆಗ ಮಂ
ಗಾರರು ಬಹಳ ಮಂದಿ ಬಂದು ಮಂತ್ರಿಸಿದಾಗ್ಯೂ ಬಿಟ್ಟು ಹೋ
ಗದೆ, ಫಲಾನಾ ಊರಿನಲ್ಲಿ ಫಲಾನಾ ಬ್ರಾಹ್ಮಣನು ಇದ್ದಾನೆ,
ತನ ಹೆಸರು ಮಂತ್ರ ಮೂರ್ತಿ ಸುಬ್ಬಾವಧಾನಿ, ಆತನನ್ನು ಕ
ದರೆ ನಾನು ಬಿಟ್ಟು ಹೋಗುವೆನೆಂದು ಅರಸನಿಗೆ ಹೇಳುತ್ತೇ
ಅಷ್ಟುಮಾತ್ರದಿಂದಲೇ ನಿನ್ನನ್ನು ಕರಿಸಿ ನಿನ್ನ ಕಡೆಯಿಂದ
ಮ್ಮದಿ ಹೊಂದಿದ ಹೆಂಡತಿಯನ್ನು ನೋಡಿ ಸಂತೋಷಿಸಿ, ನಿ
ದರಿದ್ರವನ್ನು ಹೋಗಲಾಡಿಸುವೆನು, ಈ ದರಿದ್ರದೋಷದಿಂದ
ಹೆಂಡತಿಯ ಕೈಲಿ ಗಂಡನು ಅವಮಾನ ಪಡುವದು, ಆದರೆ ನಿನ
ಕೈಪೆಟ್ಟು ಬೀಳುತ್ತದೆ, ಕಡಿಮೆಯವರಿಗೆಲ್ಲಾ ಬಾಯಿಮಾತಿನಿಂ

ೀ ಈ ಪೆಟ್ಟಿಗೆ ಸಮಾನವಾದ ಅವಮಾನ ಉಂಟಾಗುತ್ತದೆ, ಎಂತ
ಿಡಿದು, ತಕ್ಷಣದಲ್ಲಿ ಹೋಗಿ ಅರಸನ ಹೆಂಡತಿಯನ್ನು ಹಿಡಿದು
ೂಂದರೆ ಪಡಿಸಿತು. ಅನೇಕ ಮಂತ್ರಗಾರರಿಗೆ ಅಸಾಧ್ಯವಾದ
ರುವಾಯ ಅರಸನು ಈ ಬ್ರಾಹ್ಮಣನನ್ನು ಆ ಭೂತದ ಮಾತಿ
ಪ್ರಕಾರ ಕರಿಸಿ ತನ್ನ ಹೆಂಡತಿಯ ವೃತ್ತಾಂತವನ್ನು ತಿಳಿಸಿದ
ು. ಬ್ರಾಹ್ಮಣನು ಅರಸ್ತಿಯ ಮುಂದೆ ನಿಂತ ಕೂಡ್ಲೇ ಆಕೆಯ
ನ್ನು ಭೂತವು ಬಿಟ್ಟು ಹೋಗುವಾಗ, ಅದು ಎಲೈ ಬ್ರಾಹ್ಮಣ
ೀ, ಈ ದಿನವೇ ಸರಿ, ಇನ್ನು ಮೇಲೆ ನಾನಿದ್ದಕಡೆ ನೀನು ಬಂ
ರೆ ಕೊಂದು ಹಾಕುವೆನು ಎಂದು ಹೇಳಿ ಹೋಯಿತು. ಸಂಗ
ಲೇ ಅರಸ್ತಿಗೆ ಆರೋಗ್ಯವಾದ್ದನ್ನು ನೋಡಿ ಅರಸನು ಸಂ
ೋಷ ಪಟ್ಟು, ಬ್ರಾಹ್ಮಣನಿಗೆ ಬಹುಮಾನ ಮಾಡಿದ್ದಲ್ಲದೆ,
ಂಗಳಿಗೆ ಹತ್ತು ವರಹಾ ಸಂಬಳ ಸಹ ಮಾಡಿ ಅವನನ್ನು ತನ್ನ
ೀ ಇಟ್ಟುಕೊಂಡನು. ಆಮೇಲೆ ಅವನಿಗೆ ಪೊರಿಕೇ ಪೆಟ್ಟು
ಪ್ಪಿತು. ಬಳಿಕ ಭೂತವು ಆ ಅರಸನ ಮಂತ್ರಿಯ ಹೆಂಡತಿ
ುನ್ನು ಬಾಧಿಸಲಾರಂಭಿಸಿತು. ಆ ವರ್ತಮಾನ ರಾಯನಿಗೆ
ಳಿದ ಕೂಡಲೇ, ರಾಯನು ಅಯ್ಯಾ ಮಂತ್ರಮೂರ್ತಿ ಸು
ಬ್ಬವಧಾನಿಗಳೇ, ನೀವು ನನ್ನ ಮಂತ್ರಿಯ ಮನೆಗೆ ಹೋಗಿ ಅ
ನ ಹೆಂಡತಿಗೆ ಉಂಟಾದ ಉಪದ್ರವನ್ನು ಪರಿಹರಿಸಿ ಬನ್ನಿರೆಂ
ು ಕಳುಹಿಸಿದನು. ಅದೇ ಪ್ರಕಾರ ಬಂದ ಬ್ರಾಹ್ಮಣನನ್ನು
ೋಡಿ ಭೂತವು ಇಲ್ಲಿಗೆ ಯಾತಕ್ಕೆ ಬಂದಿ? ಯೆಂದು ಕೋಪದಿಂ
ಗದರಿಸಲು, ಬ್ರಾಹ್ಮಣನು, ಅಯ್ಯಾ ಭೂತರಾಜನೇ, ನನ್ನ
ೆಂಡತಿಯು ಪೊರಿಕೇ ತೆಕ್ಕೊಂಡು ಬಂದು ಬೀದಿಯಲ್ಲಿ ನಿಂತಿ
ಳೆ, ಈ ವರ್ತಮಾನವನ್ನು ನಿನಗೆ ತಿಳಿಸುವದಕ್ಕೆ ಬಂದೆ

ನೆಂದು ಹೇಳಿದನು. ಆ ಮಾತು ಕೇಳಿದ ಮಾತ್ರದಲ್ಲೇ ಭೂತ
ಭಯ ಪಟ್ಟು ಓಡಿ ಹೋಯಿತು. ಮಂತ್ರಿಯ ಹೆಂಡತಿ
ಆರೋಗ್ಯವಾಯಿತು. ಹೀಗೆ ಮಂತ್ರ ವಿದ್ಯೆಗಳನ್ನು ಕಲಿ
ರಿಗೆ ತಂತ್ರ ವಿದ್ಯೆಯು ಸಹ ತಿಳಿದಿರಬೇಕು.

ನಾಲ್ವತ್ತೇಳನೇ ಕಥೆ.

ಕನ್ನಡಿಗನೂ ತೆಲುಗನೂ.

ದಕ್ಷಿಣ ದೇಶದಲ್ಲಿರುವ ಒಬ್ಬ ಕನ್ನಡಿಗನು ಆ ದೇಶದಲ್ಲಿ
ಗೆ ಜೀವನೋಪಾಯವೇನೂ ಶಿಕ್ಕದೆ ಬಹಳ ದಿವಸ ಪೇಚಾ
ಉತ್ತರ ದೇಶಕ್ಕಾದರು ಹೋಗಿ ಕೂಲಿ ನಾಲಿ ಮಾಡಿ ಹೊ
ಹೊರ ಕೊಳ್ಳ ಬೇಕೆಂದು ನೆನಸಿ ಹೊರಟನು. ಅವನು ಮ
ರ್ಗದಲ್ಲಿ ಬರುತ್ತಾ ಬರುತ್ತಾ ಗದ್ದವಾಲ ಸುರಪುರ ಪ್ರಾಂ
ಕ್ಕೆ ಬಂದು, ಛತ್ರದಲ್ಲಿ ಅಶನಕ್ಕೋಸ್ಕರ ನಿಂತನು. ಇ
ಪ್ರಕಾರ ಉತ್ತರ ದೇಶಸ್ಥನಾದ ಒಬ್ಬ ತೆಲುಗರವನು ತ
ದೇಶದಲ್ಲಿ ಕಾಲಕ್ಷೇಪ ನಡಿಯದೆ, ಅನ್ಯ ದೇಶಕ್ಕಾದರೂ ಹೊ
ಗಿ ಕೂಲಿನಾಲಿ ಮಾಡಿ ಕೊಂಡು ಜೀವಿಸ ಬೇಕೆಂದು ಕ
ರಟು ಬರುತ್ತಾ ಮಾರ್ಗದಲ್ಲಿ ಈ ಕನ್ನಡಿಗನು ಇಳಿದಿರ
ಛತ್ರಕ್ಕೆ ಅಶನಕ್ಕೋಸ್ಕರ ಬಂದು ನಿಂತನು. ಛತ್ರದಲ್ಲಿ ಮ
ರು ಝಾವಕ್ಕೋ ಸಾಯಂಕಾಲಕ್ಕೋ ಶಿಕ್ಕಿದ ಛತ್ರದ ಕು
ನ್ನು ತಿಂದು ಕೈಕಾಲು ತೆಳವಿನ ಆಯಾಸದಿಂದ ಆ ದಿವಸ ಮ
ದಕ್ಕೆ ನಡದು ಹೋಗಲಾರದೆ ಅವನು ಆ ರಾತ್ರಿ ಅಲ್ಲೇ ಮಲ
ದನು. ಬೆಳಗಾದ ಮೇಲೆ ಪ್ರಯಾಣ ಹೊರಡುವ ಸಮಯದಲ್ಲಿ

ನ್ನಡಿಗನು ತೆಲುಗನನ್ನು ನೋಡಿ ನೀನು ಎಲ್ಲಿಗೆ ಹೋಗುತ್ತೀ? ಎನು ಎರಡು ಮೂರು ಸಾರಿ ಕೇಳಿದನು. ಕನ್ನಡ ಮಾತು ತಿಯದೆ ತೆಲುಗನು ಸುಮ್ಮನಿದ್ದನು. ಕನ್ನಡಿಗನು ಯಾಕೆ ಸುಮ್ಮಗಿದ್ದಿಯೆ? ಮಾತಾಡು ಅಂದನು. ಆಗ ತೆಲುಗನು ಅಡ್ಡದ ಕಸು ಕೊಟ್ಟು ಅಡ್ಡಿಗೆ ಬೇಕಾದ ದೊಡ್ಡ ಹಗ್ಗವನ್ನು ತೆಗದು ಸುತ್ತಿಟ್ಟು ಕೊಂಡಿದ್ದನಾದ ಕಾರಣ ಅದನ್ನು ಕನ್ನಡಿಗನು ತನ್ನ ವೆಂತ ಹೇಳುತ್ತಾನೆಂದು ಅತಿ ಕೋಪದಿಂದ ಹಗ್ಗಾ ಕೈಗೆ ತೆ ಕೊಂಡನು. ಹಗ್ಗದಿಂದ ತನ್ನನ್ನು ಹೊಡಿಯುತ್ತಾನೆಂದು ನೆನಸಿ ನ್ನಡಿಗನು ಆ ಹಗ್ಗವನ್ನು ಭದ್ರವಾಗಿ ಹಿಡುಕೊಂಡು, ಮಾತಾ ಡು ಅಂದರೆ ಹೊಡಿಯುವದಕ್ಕೆ ಬರುತ್ತೀಯಾ? ಅಂದನು, ಕ ಹಗ್ಗವನ್ನು ಕಸುಕೊಳ್ಳುತ್ತಾನೆಂದು ತೆಲುಗರವನು ಹಿಂ ನ ಗುಂಜಿದನು. ಹೀಗೆ ಹಗ್ಗ ಹೋಗುತ್ತದೆ ಎಂಬ ದುಃಖ ತೆಲುಗರವನಿಗೂ ಹಗ್ಗದ ಪೆಟ್ಟು ಬೀಳುತ್ತದೆ ಎಂಬ ಭಯ ನ್ನಡಿಗನಿಗೂ ಉಂಟಾಗಿ ಹಗ್ಗವನ್ನು ಇಬ್ಬರೊಳಗೆ ಒಬ್ಬ ರೂ ಬಿಡದೆ ಹಿಗ್ಗಾ ಮುಗ್ಗಾ ಎಳದಾಡಿ ವ್ಯಾಜ್ಯವಾಡು ತ್ತಾ ಇದ್ದರು. ಆಗ ತೆಲುಗು ಕನ್ನಡ ಭಾಷೆಗಳನ್ನು ತಿಳಿದ ಬ ಮಾರ್ಗಸ್ಥನು ಈ ಸಂಗತಿಯನ್ನು ನೋಡಿ ತಿಳಿಯದೆ ನು ಕೆ ವ್ಯಾಜ್ಯ ಮಾಡುತ್ತೀರಿ? ಎಂದು ಸಮಾಧಾನ ಪಡಿಸಿದನು. ಳಿ ಸೀಲೆ ಇವರಿಬ್ಬರು ದೇಶಾಂತ್ರದ ಪ್ರಯಾಣವನ್ನು ಬಿಟ್ಟು ಸ್ವದೇಶಗಳಿಗೆ ತಿರಿಗಿದರು. ಪ್ರಯಾಣಸ್ಥರಿಗೆ ತಾವು ಸಂಚರಿ ಸು ದೇಶ ಭಾಷೆಗಳು ತಿಳಿಯದಿದ್ದರೆ ಹೀಂಗೆ ಅನರ್ಥ ಉಂ ಟಾಗುತ್ತದೆ.

ನಾಲ್ವತ್ತೆಂಟನೇ ಕಥೆ.

ರಾಯರೂ ಅಪ್ಪಾಜಿಯೂ.

ಮಂತ್ರಿ ಶ್ರೇಷ್ಠನಾದ ಅಪ್ಪಾಜಿಯೊಡನೆ ನರಪತಿ ಕೃಷ್ಣ
ರಾಯನು ರಾಜ್ಯವನ್ನಾಳುತ್ತಾ ಇರುವಾಗ ನೂರಾಳು ನೂ
ಕುದುರೆ ಹೊಸದಾಗಿ ಲಾವಣಿಕ್ಕೆ ಶೇರದೆ ಇರುವ ದಿವಸ
ಬಂದಾದರು ಇಲ್ಲದ ಹಾಗೆ ದಿನೇ ದಿನೇ ಸೈನ್ಯವನ್ನು ಹೆಚ್ಚಿಸ
ತ್ತಾ ದೊಡ್ಡ ದಂಡು ಶೇರಿಸಿ ಆ ದಳವನ್ನು ತನ್ನ ರಾಜ್ಯದಲ್ಲಿ ಸ್ಥಳ
ದುರ್ಗಗಳು ಅಂದರೆ ನೆಲಕೋಟೆಗಳು, ಜಲದುರ್ಗಗಳು ಅಂದ
ಸಮುದ್ರದ ಟೂಪುಗಳು, ಗಿರಿದುರ್ಗಗಳು ಅಂದರೆ ಬೆಟ್ಟದ ಕೋ
ಟೆಗಳು, ಮುಂತಾದ ಸ್ಥಳಗಳಲ್ಲಿ ಹಂಚಿಕೆ ಪ್ರಕಾರಕ್ಕೆ ನೆಲೆಯ
ಗಿರುವ ಹಾಂಗೆ ವಿಂಗಡಿಸಿದ್ದಲ್ಲದೆ, ರಾಯನ ಬಳೀಲಿ ಮೇಗಾ
ಲಿಗೆ ಸಹ ಬೇಕಾದಷ್ಟನ್ನು ಇಟ್ಟುಕೊಂಡಿದ್ದನು. ಈ ಸೈನ್ಯ
ಳ ಮೇಲೂ ಸೇನಾಧಿಪತಿಗಳ ಮೇಲೂ ಮಂತ್ರಿ ಶೇಖರನಾದ
ಪ್ಪಾಜಿಯ ವಿಚಾರಣೆಯು ಪರಿಪೂರ್ಣವಾಗಿರುವದು. ಹೀಗಿರ
ವಲ್ಲಿ ರಾಜ್ಯದ ಹುಟ್ಟುವಳಿಯ ಹಣವು ದಂಡಿನ ಸಂಬಳದ ಬಾ
ವಾಡಿಗೆ ಸರಿಯಾಗುವದಲ್ಲದೆ ದಾನಧರ್ಮ ಒಹುಮಾನ ಸನ್ಮಾ
ಮುಂತಾದವುಗಳ ಮೂಡತಕ್ಕ ಬಗ್ಯೆ ಸಾಲದೆ ಇರುವದನ್ನು
ರಾಯನು ತಿಳಿದು ಮಂತ್ರಿಯನ್ನು ನೋಡಿ ಇಂತೆಂದನು.
ಪ್ಪಾಜೀ, ಹೊಳೇ ದಾಟಿದ ಮೇಲೆ ಅಂಬಿಗರ ಸ್ನೇಹವಿರಬೆ
ಕೋ? ವಿದ್ಯವನ್ನು ಕಲಿತ ಮೇಲೆ ಉಪಾಧ್ಯನ ಮತಕ್ಕೆ
ನಿತ್ಯವೂ ಹೋಗಬೇಕೋ? ಜಾಡ್ಯವು ಹರಿದ ಮೇಲೆ ವೈ
ದ್ಯನು ಹತ್ರದಲ್ಲೇ ಕೂತಿರಬೇಕೋ? ಕೆಲಸವಿಲ್ಲವಷ್ಟೆ, ಹಿ

ಮೀ ಸಕಲ ರಾಜ್ಯಗಳೂ ಸ್ವಾಧೀನವಾಗಿ ಪರರಾಯರೆಲ್ಲರೂ
ಯುಗೆ ಪಾದಾಕ್ರಾಂತರಾಗಿ ಇರುವಲ್ಲಿ ಶೀಮೆಯ ಹಣವೆಲ್ಲಾ ಸಂಬ
ಕ್ಕೆ ಸರಿಹೋಗುವ ಈ ದೊಡ್ಡ ಸೈನ್ಯದಿಂದ ಪ್ರಯೋಜನವೇ
? ದಾನ ಧರ್ಮಾದಿಗಳನ್ನು ವಿಶೇಷವಾಗಿ ಮಾಡಿ ಪುಣ್ಯ
ರ್ತಿಗಳನ್ನು ಹೆಚ್ಚಾಗಿ ಸಂಪಾದಿಸುವದು ಒಳ್ಳೇದಲ್ಲವೋ? ಚ
ಚರಿಯೂ ಭರ್ತಿ ಮಾಡುವ ಸೈನ್ಯದ ಕೆಲಸವನ್ನು ನಿಲ್ಲಿಸಿ
ಸುವದಲ್ಲದೆ ನೆಲೆಯಾದ ಸೈನ್ಯದ ಹದಿನಾರು ಪಾಲಿನಲ್ಲಿ ಬಂ
ಪಾಲನ್ನು ನಿಲ್ಲಿಸಿ ಕೊಂಡು ಮಿಕ್ಕ ಹದಿನೈದು ಪಾಲು ಸೈ
ನ್ಯವನ್ನು ತೆಗದು ಹಾಕಿ ಅದಕ್ಕೆ ತಿಂಗಳಗಟ್ಲೆ ಸಲ್ಲ ತಕ್ಕ ಸಂ
ಬಳದ ಹಣವನ್ನು ಬೊಕ್ಕಸದಲ್ಲಿ ಶೇರಿಸಿ ಅದರಿಂದ ದಾನ ಧ
ರ್ಮ ಪರೋಪಕಾರಾದಿಗಳನ್ನು ಮಾಡ ಬಾರದೋ? ಎಂದು ಹೇ
ಳಿದನು. ಆ ಮಾತನ್ನು ಕೇಳಿ ಅಪ್ಪಾಜಿ ಸ್ವಲ್ಪ ನೊತ್ತು ಚಿಂ
ತಿಸಿ ರಾಯನನ್ನು ಕುರಿತು ಮಹಾ ಪ್ರಭುವೇ, ಅಜ್ಞಾಧಾರಕನ
ವಿನ್ನಹವನ್ನು ಚಿತ್ತಕ್ಕೆ ತರ ಬೇಕು, ಬಹುಕಾಲದಿಂದ ಇರು
ವ ಸೈನ್ಯವನ್ನು ದಿನದಿನಕ್ಕೂ ಹೆಚ್ಚಿಸ ಬೇಕಲ್ಲದೆ ತೆಗದು
ಹಾಕ ಕೂಡದು, ಸೈನ್ಯ ಸಮೃದ್ಧಿಯ ಭಯದಿಂದಲೇ ಅನೇಕ
ಪರರಾಯರು ಪಾದಾಕ್ರಾಂತರಾದದ್ದು, ಇಂಥಾ ಸೈನ್ಯವನ್ನು ತೆಗ
ದು ಹಾಕಿದ ತಕ್ಷಣದಲ್ಲೇ ಪರರಾಯರ ಸಮೂಹವು ಯುದ್ಧ
ಕ್ಕೆ ಸನ್ನದ್ಧವಾಗುವದು, ನಮ್ಮಲ್ಲಿ ಇದ್ದ ಸೈನ್ಯವೇ ಅವರಲ್ಲಿ ಶೇರಿ
ದವರು ಬೀಳುವದು, ಯುದ್ಧ ಸಮಯಕ್ಕೆ ಹೊಸದಾಗಿ ಸೈನ್ಯವ
ನ್ನು ಕೂಡಿಸ ಕೂಡದು, ದಿವ್ಯ ಚಿತ್ತಕ್ಕೆ ತಂದು ಸೈನ್ಯವನ್ನು
ಹೆಚ್ಚಿಸ ಬೇಕೇ ಹೊರ್ತು ತೆಗದು ಹಾಕಲಾಗದು, ಎಂದು
ಹೇಳಿದನು. ರಾಯನು ಅಂಥಾ ಯುದ್ಧ ಪ್ರಸಕ್ತಿ ಉಂಟಾದಾಗ

ಬೇಕಾದಷ್ಟು ಸೈನ್ಯ ಕೂಡಿಸ ಬಹುದು ಅಂದನು. ಅದ
ಅಪ್ಪಾಜಿಯು ಸಕ್ಕರೆಯ ರಾಶಿ ಇದ್ದಾಗ್ಯೂ ರಾತ್ರಿಯಲ್ಲಿ ಇ
ಣಗಳು ಮುಚ್ಚುವದಿಲ್ಲ, ಅದೇ ಮೇರಿಗೆ ಹೊಸ ಸೈನ್ಯಗಳ
ಮಯಕ್ಕೆ ಒದಗಲಾರದು ಅಂದನು. ರಾಯನು ಅಗಳುಗ
ಚಲ್ಲಿದರೆ ಕಾಗಿಗಳು ಕೂಡುವದಕ್ಕೆ ಅಡ್ಡಿ ಯೇನು? ಎಂದು
ಳಿದನು. ಅದಕ್ಕೆ ಬಾಯಿ ಮಾತಿನ ದೃಷ್ಟಾಂತ ಸಾಲದೇ
ತಿಳಿದು ಮಂತ್ರಿ ಸರ್ವಜ್ಞ ಚಿತ್ತವೆಂದು ಸುಮ್ಮನಾದನು.
ಮೇರಿಗೆ ಅಪ್ಪಾಜಿಯು ಒಡಂಬಡದೆ ಇದ್ದಾಗ್ಯೂ ಇನ್ನೂ
ವು ದಿವಸಗಳ ಮೇಲೆ ಒಡಂಬಡಿಸಿ, ಆಲೋಚಿಸಿದ ಕಾಯ
ನ್ನು ನೆರವೇರಿಸ ಬೇಕೆಂದು ರಾಯನಿದ್ದನು. ರಾಯನ ಇ
ತವನ್ನು ತಿಳಿದು ಇನ್ನೊಂದು ಸಾರಿ ತನ್ನ ಸಂಗಡ ರಾಯ
ಆಲೋಚಿಸುವದಕ್ಕೆ ಮುಂಚಿತವಾಗಿಯೇ ಈ ಕಾರ್ಯವ
ನಿಲ್ಲಿಸಿ ಬಿಡಬೇಕೆಂದು ನೆನಸಿದ ಅಪ್ಪಾಜಿಯು ಚಿತ್ರಾ ಪಾ
ಮಿಯೆ ಅವುತನಕ್ಕಾಗಿ ರಾಯನನ್ನು ತನ್ನ ಮನೆಗೆ ಕ
ಕೊಂಡು ಬಂದು, ಭೋಜನೋತ್ತರದಲ್ಲಿ ಸಾಯಂಕಾಲದ
ಗೂ ಮುಂತಾ ರಾಜೋಪಚಾರಗಳು ನಡಿಸಿ, ರಾತ್ರಿ ಝಾವು ಹೊ
ನ ತನಕ ತನ್ನ ಮನೆಯ ಬಿಸಲು ಮಹಡಿಯ ಮೇಲೆ ಸಂಗೀ
ಸಾಹಿತ್ಯ ನಾಟ್ಯ ಮೊದಲಾದ ವಿನೋದಗಳಿಂದ ಹೊತ್ತು ಹೆ
ಗಲಾಡಿಸಿ, ಆ ಪೂರ್ಣ ಚಂದ್ರನ ಬೆಳದಿಂಗಳಲ್ಲಿ ರಾಯನು
ತೋಷ ಭರಿತನಾಗಿ ಕುಳಿತಿರುವಾಗ, ಹತ್ತೆಂಟು ದೊಡ್ಡ ದೊ
ಬರಾತಗಳಲ್ಲಿ ಅನ್ನಗಳ ತುಂಬಿಸಿ ರಾಯನ ಮುಂದೆ ವರಶಂ
ಗಿಡಿಸಿದನು. ಇದೇನೆಂದು ರಾಯನು ಕೇಳಲು, ಅಪ್ಪಣೆ ಆ
ಅಗಳು ಚಲ್ಲಿಸುತ್ತೇನೆ, ಕಾಗಿಗಳ ಗುಂಪು ಕೂಡುವ ಪ್ರಕಾರ

ಸುಕುಂ ಆಗಬೇಕೆಂದು ಅಪ್ಪಾಜಿ ನುಡಿದನು. ಆ ಮಾತು
ೀಳಿ ಮಹಾರಾಯನು ಅಪ್ಪಾಜೀ, ಆರು ತಿಂಗಳಿಗೆ ಮುಂಚಿತವಾ
ನಾವು ಹೇಳಿದ ಮಾತಿಗೆ ಇದು ದೃಷ್ಟಾಂತವೋ? ಎಂದು ಸಂ
ೋಷ ಪಟ್ಟು, ಯಥಾಪ್ರಕಾರವಾಗಿ ಸೈನ್ಯವನ್ನು ಅಭಿವೃ
ಮಾಡೆಂದು ಆಜ್ಞಾಪಿಸಿದನು. ಇದೇ ಮಹಾ ಮಂತ್ರಿಗಳ
ಲೋಚನೆ.

ನಾಲ್ವತ್ತೊಂಭತ್ತನೇ ಕಥೆ.

ಬಣಜಿಗನೂ ಆಳೂ.

ಮೈಲಾರ ಶೆಟ್ಟಿ ಎಂಬ ಬಣಜಿಗನು ವ್ಯಾಪಾರ ಸಾಪಾರ
ಮಾಡಿ ಹಣ ಸಂಪಾದಿಸ ಬೇಕೆಂದು ದೇಶಾಂತರಕ್ಕೆ ಹೋದನು.
ಲ್ಲಿ ಅತಳೆ ಚಕ್ಕಿನ ವ್ಯಾಪಾರದಿಂದ ಸಾವಿರಾರು ವರಹಾಗಳು
ಸಂಪಾದಿಸಿ, ಅದಕ್ಕಾದ ರೂಪಾಯಿಗಳನ್ನು ಭದ್ರ ಪಡಿಸುವದು
ಕ್ಷವೆಂದು "ಹತ್ತು ಕಟ್ಟುವ ಕಡೆ ಬಂದು ಮುತ್ತು ಕಟ್ಟು"
ಬ ಸಾಮತಿಯನ್ನು ನೆನಸಿ, ಕೈಲಿದ್ದ ಮೂರು ನಾಲ್ಕು ಸಾವಿ
ರೂಪಾಯಿಗಳನ್ನು ಕೊಟ್ಟು, ದ್ವೀಪಾಂತರದ ಸಾದಾಗಾರರಿಂದ
ಷ್ಮರಾಗವೆಂಬ ಶ್ರೇಷ್ಠವಾದ ರತ್ನವನ್ನು ಕೊಂಡುಕೊಂಡನು.
ದು ಉದಯ ಕಾಲದ ಬಾಲ ಸೂರ್ಯನ ಬಿಂಬದ ಹಾಗೆ ಪ್ರ
ಕಾಶಿಸುತ್ತಿರುವದು. ಅದನ್ನು ತನ್ನ ಪ್ರಿಯಳಾದ ಹೆಂಡತಿಯ
ಬೆಳಿಗೆ ಕಳುಹಿಸಿ ಕೊಟ್ಟರೆ ಅವಳು ನೋಡಿ ಸಂತೋಷ
ಪಡುವದಲ್ಲದೆ ತನ್ನ ಸಾಮರ್ಥ್ಯಕ್ಕೂ ಸಂಪಾದ್ಯಕ್ಕೂ ಹಿಗ್ಗಿ
ಹೆಚ್ಚಿ ಕೊಂಡಾಡುವಳೆಂದು, ಈ ಬಣಜಿಗನು ತನ್ನ ಹತ್ತರ
ಇರುವ ಬ್ಯಾಡರ ಪೋಲೇರಿಗನೆಂಬ ಆಳಿನ ಕೈಗೆ ರತ್ನ

ವನ್ನು ಕೊಟ್ಟು ಕಳುಹಿಸಿದನು. "ಬೇಡನ ಸಂಗ ಬೇಡ
ಎಂಬ ಸಾಮತಿಯಂತೆ ಆ ಪೋಲೇರಿಗನು ತನ್ನ ಊರಿ
ಬಂದು ಶೆಟ್ಟಿಯ ಹೆಂಡತಿಗೆ ಕ್ಷೇಮ ಸಮಾಚಾರ ಮಾತ್ರ ಕ
ಯಿ ಮಾತಿನಿಂದ ಹೇಳಿ, ಅವನ ಕಾಗದವನ್ನೂ ರತ್ನವನ್ನೂ
ಸಹ ಕೊಡದೆ ಛಪಾಯಿಸಿ ಬಿಟ್ಟನು. ಆಳು ಹೇಳಿದ ಪ್ರಕಾರ ಎ
ಗಳೊಳಗಾಗಿ ಶೆಟ್ಟಿ ಬಾರದೆ ಸಾವಕಾಶವಾದ್ದರಿಂದ ಹೆಂಡತಿ ಗ
ಡನಿಗೆ ಬರದ ಕಾಗದವೇನೆಂದರೆ—ಎಲೈ ಅತ್ಯಂತ ಪ್ರಿಯನೆ
ನಿನ್ನನ್ನು ನಂಬಿ ಕೈ ಹಿಡಿದವಳಾದ ನನ್ನ ಬಿನಹವನ್ನು ವ
ಸ್ಸಿಗೆ ತಂದು ಈ ಕಾಗದ ಕಂಡ ಕ್ಷಣವೇ ನೀನು ಜಾಗ್ರತೆಯಾ
ಬಂದು ಊರು ಶೇರಬೇಕು, ನನಗೆ ಊಟಕ್ಕೆ ತೋಟದ ಸೊ
ಪ್ಪೇ ಆಧಾರ, ಉಡುವದಕ್ಕಂತು ನೀನು ಕೊಟ್ಟ ಕೌದಿಯೇ, ಸ
ನು ಹೊದ್ದಿದ್ದ ಹಚ್ಚಡವು ದುಪ್ಪಟಿ ಆಯಿತು, ಆ ದುಪ್ಪಟಿಯ
ಕೆಲವು ದಿವಸಗಳ ಮೇಲೆ ತುಂಡಾಗಿ "ತುಂಡೇ ಬಂಡವಾಳ" ಎಂ
ಬ ಸಾಮತಿಯು ಹಾಗೆ ಇದ್ದೆನು, ಈಗ ಆ ತುಂಡೂ ಇಲ್ಲದೆ
ಲು ಬಂಡಾಟವಾಗಿ ಕಷ್ಟಪಡುತ್ತಾ ಯಿದ್ದೇನೆ, ಕಾಸೇ ಕೈಲಾಸ
ಗಿದೆ, ದುಡ್ಡು ದೊರಕುವದೇ ಯಿಲ್ಲ, ದುಡ್ಡಿಲ್ಲದ ಮೇಲೆ ದೊ
ಸ್ತಿಕೆ ಹ್ಯಾಗೆ ಬಂದೀತು, "ದಡ್ಡನ ಕೈ ಹಿಡಿದವಳೇ ಹೆಡ್ಡಳು" ಎಂ
ಬ ಸಾಮತಿ ನನ್ನ ಪಾಲಿಗೆ ಬಂತು, ಇಂತೆ ಬಿನಹ. ಹೀಗೆ ಬ
ದ ಕಾಗದವನ್ನು ಅವಲಕ್ಕಿ ಕುಟ್ಟಿ ಸಂಪಾದಿಸಿದ ಆರುಕಾಸು ರ
ಸಲು ಕೊಟ್ಟು ಬೆಂಗಳೂರಿಂದ ಬಳ್ಳಾರಿಗೆ ಟೂಕೋ ಟೂಕು ತಲ
ಸಬೇಕೆಂದು ವಿಲಾಸ ಬರೆದು ಟಪಾಲು ಮೇಲೆ ಹಾಕಿಬಿಟ್ಟಳು.
ಕಾಗದ ಮೈಲಾರಿ ಶೆಟ್ಟಿಗೆ ತಲಪಿ, ನೋಡಿಕೊಂಡ ತಕ್ಷಣದಲ್ಲೆ
ಪೋಲೇರಿಗನು ಮೋಸ ಮಾಡಿದನೆಂದು ತಿಳಿದು, ತಾನಿದ್ದ ಕ

ಯಿಂದ ಏಕಾಏಕಿ ಹೊರಟು, ಬೀಳೋದು ಏಳೋದು ತಿಳಿಯದೆ, ಬಂದು ಊರು ಶೇರಿ, ಹೆಂಡತಿಯ ಅವಸ್ಥೆಯನ್ನು ನೋಡಿ ವ್ಯಸನಪಟ್ಟು, ವಸ್ತ್ರ ಭೋಜನಾದಿಗಳಿಂದ ಸಮಾಧಾನ ಪಡಿಸಿ, ತಾನು ಕಳುಹಿಸಿದ ಪದ್ಮರಾಗ ರತ್ನವು ಪೋಲೇರಿಗನ ಪಾಲಾದ್ದರಿಂದ ತನ್ನ ಆಸ್ತಿಯೆಲ್ಲಾ ಪೋಲಾಯಿತೆಂದು ಪೋಲೀಸು ಕಚೇರಿಗೆ ಹೋಗಿ, ನ್ಯಾಯಾಧಿಪತಿಯ ಬಳಿಯಲ್ಲಿ ಗೋಳಾಡಿದನು, ಆ ಫಿರ್ಯಾದನ್ನು ಕೇಳಿ ನ್ಯಾಯಾಧಿಕಾರಿ ತಕ್ಷಣದಲ್ಲೇ ಆ ಆಳನ್ನು ಕರಿಸಿ ನಿಜವಾಗಿ ಹೇಳೆಂದು ವಿಚಾರಣೆ ಮಾಡಲು, ಪೋಲೇರಿಗನು ನನ್ನ ಕೈಲಿ ಮೈಲಾರಶೆಟ್ಟಿ ಕೊಟ್ಟ ಮೇಲು ರತ್ನವನ್ನು ಆತನ ಹೆಂಡತಿಯ ಕೈಲಿ ಇಬ್ಬರು ಸಾಕ್ಷಿಗಳ ಮುಂದೆ ಕೊಟ್ಟಿದ್ದೀನೆಂದು ಹೇಳಿದನು. ಅದಕ್ಕೆ ನ್ಯಾಯಾಧಿಕಾರಿಯು, ಎಲಾ ಕಳ್ಳ ಶೇವಕನೇ, ನಂಬಿಕೆಯಾಗಿ ನಿನ್ನ ಕೈಲಿ ರತ್ನವನ್ನು ಕೊಟ್ಟು ತನ್ನ ಹೆಂಡತಿಗೆ ತಲಪಿಸೆಂದು ರಹಸ್ಯವಾಗಿ ಕಳುಹಿಸಿದಲಾಗಿ, ಅದನ್ನು ನೀನು ನಿನ್ನ ಯಜಮಾನೀ ಕೈಲಿ ಹಾಂಗೆ ಕೊಡದೆ, ಸಾಕ್ಷಿಗಳ ಮುಂದಿಟ್ಟುಕೊಂಡು ಕೊಡುವದಕ್ಕೆ ಕಾರಣವೇನು? ಇದಕ್ಕೆ ಬಳಗಡೆ ಎಂದಾದರೂ ನಿನ್ನ ಯಜಮಾನನಾದ ಈ ಶೆಟ್ಟಯು ನಿನ್ನ ಮೇಲೆ ಲಿಗಾಡು ಹಾಕಿ ತೆಗದುಕೊಂಡನೋ? ಅದಿಲ್ಲದ ಮೇಲೆ, ನಿನ್ನಲ್ಲಿ ನಿನ್ನ ಯಜಮಾನನಿಗೆ ನಂಬಿಕೆ ಯಿದ್ದಹಾಗೆ ಅವನಲ್ಲಿ ನಿನಗೆ ನಂಬಿಕೆ ಇಲ್ಲದೆ ಸಾಕ್ಷಿಗಳ ಮುಂದಿಟ್ಟುಕೋಬೇಕಾದ ಅಗತ್ಯವೇನು? ಆದಾಗ್ಯೂ ಚಿಂತೆಯಿಲ್ಲ, ನಿನ್ನ ಕೈಗೆ ಈ ಶೆಟ್ಟಿ ಕೊಟ್ಟ ರತ್ನವು ಎಷ್ಟು ಘಾತ್ರ ನಿತ್ತು ಹೇಳು ಅನ್ನಲು, ಚಪ್ಪರ ದ್ರಾಕ್ಷಿ ಹಂಣಿನ ಗಾತ್ರವಿತ್ತೆಂದು ಹೇಳಿದನು. ಯಾವ ಬಣ್ಣವಾಗಿತ್ತೆಂದು ಕೇಳಿದ್ದಕ್ಕೆ, ಕಳಿ

ಮಾಗಿದ ಶೀ ತೊಂಡೆ ಹಂಣಿನ ಹಾಗೆ ಕೆಂಪಾಗಿತ್ತೆಂದನು. ನಾ
ಯಾಧಿಪತಿಯು ಆ ರತ್ನವು ತೊಂಡೆ ಹಣ್ಣಿನ ಬಂಣವಾಗಿಯ
ದ್ರಾಕ್ಷಿ ಹಣ್ಣಿನ ಗಾತ್ರವಾಗಿಯೂ ಇತ್ತೆಂಬ ಮಾತನ್ನು ಮೂ
ಬಾರಿಗೂ ಸ್ಥಿರಪಡಿಸಿ, ಮೈಲಾರ ಶೆಟ್ಟಿಯ ಕಡೆಗೆ ತಿರಿಗಿ ಇವನ
ಹೇಳುವ ಮಾತು ನಿಜವೋ? ಎಂದು ಕೇಳಿದ್ದಕ್ಕೆ, ಶೆಟ್ಟಿ ಹೌ
ಯ್ಯಾ, ನಿಜವೇ ಸರಿ, ಎಂದು ಹೇಳಿದನು. ಆ ಮಾತನ್ನು ಗ
ಹಿಸಿ ನ್ಯಾಯಾಧಿಪತಿ ಈ ಶೆಟ್ಟಿಯನ್ನೂ ಶೇವಕನನ್ನೂ ಬೇ
ಬೇರೆ ಕೊಠಡಿಗಳಿಗೆ ಹೋಗಿರೆಂದಾಜ್ಞಾಪಿಸಿ, ಆ ಆಳು ಹೇಳಿ
ಸಾಕ್ಷಿಗಳನ್ನು ಕರಿಸಿ ಈ ಸಂಗತಿ ನಿಮಗೆ ತಿಳಿಯುವದೇ? ಎಂದ
ಕೇಳಲು, ಅವರು ತಿಳಿಯುವದು, ಜಂಬು ನೇರಳೆ ಹಂಣಿನ ಹಾ
ಗೆ ಕಪ್ಪಾಗಿ ಗಾತ್ರವಾಗಿ ಇದ್ದ ಬಂದು ಕಲ್ಲನ್ನು ನಮಗೆ ತೋ
ಸಿ, ಇದ ಶೆಟ್ಟಿಯ ಹೆಂಡತಿಗೆ ಕೊಟ್ಟು ಬಿಟ್ಟು ಬರುತ್ತೇನೆಂದ
ನಮ್ಮ ಸಂಗಡ ಹೇಳಿ ಹೋಗಿ, ಕೊಟ್ಟು ಬಂದೆನೆಂದು ಸಹ ಆ
ಶೆಟ್ಟೀಮನೆಯ ತಲಬಾಗಲ ಜಗಲೀ ಮೇಲೆ ಕುಳಿತಿದ್ದ ನಮ್ಮ
ಸಂಗಡ ಈ ಪ್ರೋಲೇರಿಗನು ಹೇಳಿದ್ದುಂಟೆಂದು ಸಾಕ್ಷಿ ನುಡಿ
ದರು. ಆಗ ನ್ಯಾಯಾಧಿಪತಿಯು ಈ ಶೇವಕನನ್ನು ನೋಡಿ
ಎಲಾ ವಂಚಕನೇ, ಯಜಮಾನನು ಕೊಟ್ಟ ತೊಂಡೆ ಹಣ್ಣ
ನ್ನು ಅಥವಾ ದ್ರಾಕ್ಷಿ ಹಣ್ಣನ್ನು ತಂದು ನಿನ್ನ ಯಜಮಾನಿಯ
ಕೈಗೆ ಕೊಡ ಬೇಕಲ್ಲದೆ, ಆ ಹಣ್ಣುಗಳನ್ನು ನೀನೇ ತಿ
ದು ನೇರಳೇ ಹಣ್ಣನ್ನು ಕೊಡ ಬಹುದೋ? ಇದು ನಿನಗೆ
ಉಚಿತವೋ? ಹೀಗೆಯೇ ಕಾಸಿಗೆ ತರವಲ್ಲದ ಕರೀಕಲ್ಲನ್ನು
ಅರಿಯದ ಹೆಂಗಸಿನ ಕೈಲಿ ಕೊಟ್ಟೆನೆಂದು ಸಾಕ್ಷಿ ನುಡಿಸಿ, ನಾ
ಲ್ಕಾರು ಸಾವಿರ ರೂಪಾಯಿ ಬೆಲೆಯುವ ಪದ್ಮರಾಗ ಮಣಿಯನ್ನು

ದಕ್ಕಿಸಿ ಕೊಳ್ಳುತ್ತೀಯಾ? ಕೂಡದು, ಬೇಗ ತಂದು ಕೊಡು ಎಂದು, ಕಣ್ಣು ಕೆಂಪಗೆ ಮಾಡಿದನು. ಮಹಾ ಕೋಪರಸವುಳ್ಳ ನ್ಯಾಯಾಧಿಪತಿಯ ಮುಖವನ್ನು ನೋಡಿದ ಮಾತ್ರದಿಂದಲೇ, ಪೋಲೇರಿಗನಿಗೆ ಮೈಯೆಲ್ಲಾ ನಡುಗೆತ್ತಿ, ಅವನು ಸ್ವಾಮಿ, ಬುದ್ಧಿ, ಕದ್ದೆನು, ಕ್ಷಯಕ್ಕೆ ತೆಕ್ಕೊಳ್ಳುವರೊಬ್ಬರೂ ಇಲ್ಲ, ಈ ರತ್ನವು ನನಗೆ ದಕ್ಕಲಾರದೆಂದು ರುಮಾಲಿನ ಕೊನೆಯಲ್ಲಿ ಕಟ್ಟಿ ತಲೆಯಲ್ಲಿ ಶಿಕ್ಕಿಸಿ ಕೊಂಡಿದ್ದ ಮಣಿಯನ್ನು ಧರ್ಮಾಸನದ ಮುಂದೆ ಇಟ್ಟನು. ಅದನ್ನು ಆ ಸೊಂತಗಾರನಿಗೆ ಕೊಡಿಸಿ ವಂಚಕನಿಗೆ ದಂಡನೆ ವಿಧಿಸಿ, ಆ ದಿವಸದ ನ್ಯಾಯತೀರ್ಮಿಕೆಯನ್ನು ದಿನ ವಹಿಗೆ ಬರಿಸಿ, ನ್ಯಾಯಾಧಿಕಾರಿಯು ಕೋರ್ಟು ಬರಖಾಸ್ತೆಂದು ಹುಕುಂ ಮಾಡಿ ಎದ್ದು ಮನೆಗೆ ಬಂದನು. ಹೀಗೆ ಶ್ರೇಷ್ಠರಾದ ನ್ಯಾಯಾಧಿಪತಿಗಳು ನ್ಯಾಯಗಳನ್ನು ಚನ್ನಾಗಿ ವಿಚಾರಣೆ ಮಾಡುವರು.

ಐವತ್ತನೇ ಕಥೆ.

ಬೇಡರವನೂ ಕಪಿಯೂ.

ಒಬ್ಬ ಬೇಡರ ಜಾತಿಯವನಾದ ಬೇಟೆಗಾರನು ಅಡವಿಯಲ್ಲಿ ಮೃಗಗಳನ್ನು ಹೊಡೆಯುತ್ತಾ ಇರಲಾಗಿ, ತನ್ನನ್ನು ಮುಗಿಸಿ ಕೊಳ್ಳ ಬೇಕೆಂದು ಹದಿನಾರು ಹೆಜ್ಜೆಯ ಪಟಾವಳಿ ಹುಲಿ ಘುರಕಾಯಿಸಿ ಕೊಂಡು ಬರುವದನ್ನು ದೂರದಿಂದ ಕಂಡು, ಓಹೋ ಮೋಸ ಬಂತೆಂದು ದೊಡ್ಡ ಮರದ ಮೇಲೆ ಹತ್ತಿ ಕೂತು ಕೊಂಡನು. ಆಗ ಆ ಹುಲಿಯು ಆ ಮರದ ಬುಡದಲ್ಲಿ ಬಂದು ಕೂತು ಕೊಂಡು ಬಾಲವನ್ನು ನೆಲಕ್ಕೆ ಅಪ್ಪಳಿಸುತ್ತಾ ಆ ಮ

ರದ ಮೇಲೆ ವಾಸವಾಗಿರುವ ಕೋತಿಯನ್ನು ನೋಡಿ, ಎಲೆ ಕೋತಿಯೇ, ನಿನಗೂ ನನಗೂ ಹಗೆಯವನಾದ ಈ ಬೇಡನ್ನು ನಂಬ ಬೇಡ, ಇವನನ್ನು ಕೆಳಕ್ಕೆ ದೊಬ್ಬಿ ಬಿಡೆಂದು ಹೇಳಾಗಿ ಕೋತಿಯು ನನ್ನ ಮರೆ ಬಿದ್ದ ಮನುಷ್ಯನನ್ನು ನಿನ್ನ ಬಾಯಿಗೆ ದೊಬ್ಬಲಾರೆನು, ಹೋಗೆಂದು ಹೇಳಿತು. ಅದನ್ನು ಹುಲಿ ಕೇಳಿ, ಅಲ್ಲೇ ಕೂತು ಕೊಂಡಿತು. ಕೋತಿಯು ಹಸಿರುವ ಬೇಡನಿಗೆ ಹಣ್ಣಾದರು ತಂದು ಕೊಡ ಬೇಕೆಂದು ಎರಡನೆ ಮರಕ್ಕೆ ಹಾರಿ ಹೋಗಲು, ಹುಲಿಯು ಬೇಡನನ್ನು ನೋಡಿ ನೀನು ಆ ಕೋತಿಯ ಮರಿಯನ್ನು ಕೆಳಕ್ಕೆ ದೊಬ್ಬಿ ಬಿಡು ನಿನ್ನ ಬಿಟ್ಟು ಅದನ್ನು ಎತ್ತಿ ಕೊಂಡು ಹೋಗುತ್ತೇನೆ, ಅಂತ ಮಾತ್ರದಲ್ಲೇ, ಬೇಡನು ಮರಿಯನ್ನು ದೊಬ್ಬಿ ಬಿಟ್ಟನು. ಸಂಗಡಲೇ ತಾಯಿ ಕೋತಿ ಬರಲು, ಹುಲಿಯು ಕೋತಿಯೇ, ನಿನ್ನಿಂದ ಉಪಕಾರವನ್ನು ಹೊಂದಿದ ಬೇಡನು ಮಾಡಿದ ಕೆಲಸವನ್ನು ನೋಡಿದಿಯಾ? ಆದಾಗ್ಯೂ ನಿನ್ನ ಮರಿಯನ್ನು ನಾನು ಕೊಲ್ಲಾರೆ, ಬೇಡನ ನೇಸ್ತ ಬೆಂಕಿಯ ನೇಸ್ತ ಎರಡೂ ಒಂದೇ, ಬೇಡನು ಕೈಗೆ ಶಿಕ್ಕಿದ್ದನ್ನೆಲ್ಲಾ ಕೊಲ್ಲುವನು, ಬೆಂಕಿಯು ಉರಿಗೆ ಶಿಕ್ಕಿದ್ದನ್ನು ಸುಡುವದು, "ಬೇಡನ ಸಂಗ ಬೇಡ" ಎಂಬ ಸಾಮತಿಯನ್ನು ನೆನೆಸಿ ಕೊಂಡು, ಈಗಲಾದರೂ ಅವನ್ನ ಕೆಳಕ್ಕೆ ದೊಬ್ಬು, ಕೊಂದು ತಿಂದು ಹೋಗುತ್ತೇನೆ, ಎಂದು ಘರ್ಜಿಸಲು, ಕೋತಿಯು ಬೇಡನನ್ನು ನೋಡಿ, ನನ್ನ ಮರಿಯನ್ನು ಹುಲಿಯ ಬಾಯಿಗೆ ತಳ್ಳಿದಿಯಾ? ಎಂದು ಕೇಳಿದ್ದಕ್ಕೆ, ನಾನು ತಳ್ಳಲಿಲ್ಲ, ಅದೇ ಬಿತ್ತೆಂದು ಬೊಂಕಿದನು. ಆ ಮಾತಿನ ಮೇಲೆ ಕೋತಿಯು ಹುಲಿಗೆ ಪ್ರತ್ಯುತ್ತರವಾಗಿ ನಾನು ಈ ಮನುಷ್ಯನನ್ನು ನಿ

ಗೆ ಕೊಡುವದಿಲ್ಲ, ನಿರಾಶೆ ಮಾಡಿ ಕೊಂಡು ಹೋಗೆನ್ನಲು,
ಳ್ಳೇದೆಂದು ಹುಲಿಯು ಅಲ್ಲಿಂದ ಹೊರಟು, ಬೇಡನು ಬ
ವ ದಾರಿಯ ಹೊದರಿನಲ್ಲಿ ಅಡಗಿ ಹೊಂಚಿ ಕೊಂಡಿತ್ತು.
ರದ ಮೇಲಿರುವ ಕೋತಿಯು ಬೇಡನಿಗೆ ತಿನ್ನೆಂದು ಹಣ್ಣು
ನ್ನು ಕೊಟ್ಟು ಬದಿಕಿದ ಮರಿಯನ್ನು ತಬ್ಬಿಕೊಂಡು, ಒಂದು
ಕೊಂಬಿನ ಮೇಲೆ ನಿದ್ದೆ ಹೋಗುವ ಹಾಗೆ ಕಣ್ಣು ಮುಚ್ಚಿ
ಕೊಂಡು ಜಾಗ್ರತೆಯಾಗಿತ್ತು. ಆಗ ಬೇಡನು ಈ ಕೋತಿಯ
ನ್ನಾದರೂ ಕೊಂದು ಮನೆಗೆ ತೆಕ್ಕೊಂಡು ಹೋಗ ಬೇಕೆಂದು
ತಲಿದ್ದ ದೊಣ್ಣೆಯನ್ನು ಮೇಲಕ್ಕೆ ಎತ್ತಿದನು. ಆ ಸೈಗೆಯ
ನ್ನು ತಿಳಿದ ಕೋತಿಯು ಮರಿ ಸಹಾ ಎರಡನೇ ಮರಕ್ಕೆ ಜಂಗ
ನೆಹಾರಿತು. ಈ ಪ್ರಕಾರ ಬೇಡನ ದೊಣ್ಣೆಯ ಪೆಟ್ಟನ್ನು ತ
ಪ್ಪಿಸಿ ಕೊಂಡು, ಕೋತಿ, ಎಲಾ ಕಿರಾತಕನೇ, ಘಾತಕನೇ, ಉ
ಪಕಾರಿಗೆ ಅಪಕಾರಿ ನೀನೇ ಸರಿ, ಮರವನ್ನು ಇಳಿದು ಬೇಗ
ಇ ಹೋಗು, ಹೋಗದಿದ್ದರೆ ಕೋ ಎಂದು ಕೂಗಿ, ಕೋಟಿ
ಕೋತಿಗಳನ್ನು ಗುಂಪು ಕೂಡಿಸಿ, ನಿನ್ನ ಹೆಸರು ಅಣಗಿಸಿ ಬಿ
ಡತ್ತೀನಿ, ನೋಡಿಕೋ, ಎಂದು ಸ್ವಜಾತಿಯನ್ನು ಕರಿಯುವ
ರೀತಿಯಿಂದ ಕೂಗಲು, ಸುತ್ತು ಮರಗಳಲ್ಲಿದ್ದ ಕೋತಿಗಳೆಲ್ಲಾ
ಇ ಬರುವದನ್ನು ಕಂಡು, ಈ ಪಾಪಿಷ್ಠನಾದ ಬೇಡನು ತತ್ತ
ರಪಟ್ಟು ಮರದಿಂದ ದುಮುಕಿ, ಊರಿಗೆ ಓಡಿ ಹೋಗುತ್ತಾ
ಮಾರ್ಗದಲ್ಲಿ ಇರುವ ಅದೇ ಹುಲಿಯ ಬಾಯಿಗೆ ತುತ್ತಾದನು. ಆ
ದಾರಣ ದುರ್ಮಾರ್ಗರಿಗೆ ಉಪಕಾರವನ್ನು ಮಾಡ ಬಾರದು,
ಉಪಕಾರಿಗೆ ಅಪಕಾರವನ್ನು ಎಣಿಸುವವನಿಗೆ ಕೇಡು ತಪ್ಪದು.

ಐವತ್ತೊಂದನೇ ಕಥೆ.

ಹುಲಿಯೂ ಬ್ರಾಹ್ಮಣನೂ.

ಅಡವಿಯಲ್ಲಿ ಬಂದು ಹುಲಿಯು ಬೋನಿನಲ್ಲಿ ಶಿಕ್ಕಿ ಬಿ
ವಾಗಿ ತೊಂದರೆ ಪಡುತ್ತಾ ಇತ್ತು. ಆಗ ಆ ಮಾರ್ಗದಲ್ಲಿ ಒ
ಹ್ರಾಹ್ಮಣನು ಬರುತ್ತಾ ಇದ್ದನು. ಅವನನ್ನು ನೋಡಿ ಹ
ಯು ಅಯ್ಯಾ ಬ್ರಾಹ್ಮಣೋತ್ತಮನೇ, ನಾನು ನಾಲ್ಕು ದಿ
ದಿಂದ ಈ ಬೋನಿನಲ್ಲಿ ಶಿಕ್ಕಿ, ತಿಂಡಿ ಇಲ್ಲದೆ ಸಾಯುವ ಹಾ
ಇದ್ದೇನೆ, ನನ್ನಲ್ಲಿ ದಯವಿಟ್ಟು ಬೋನಿನ ಬಾಗಲು ತೆ
ರಕ್ಷಿಸಿದರೆ, ನಿನಗೆ ಬಹಳವಾಗಿ ಇಹದಲ್ಲಿ ಕೀರ್ತಿಯೂ
ದಲ್ಲಿ ಪುಣ್ಯವೂ ಉಂಟಾಗುತ್ತದೆ, ಸಕಲವಾದ ದಾನ ಧ
ಪರೋಪಕಾರ ರೀತಿಗಳ ತಿಳಿದು ಇದ್ದೀ, ಪ್ರಾಣದಾನಕ್ಕಿಂತ
ಶ್ರೇಷ್ಠವಾದ ದಾನ ವಿಲ್ಲವಷ್ಟೆ, ನನ್ನ ಶರೆಯನ್ನು ಬಿಡಿಸಿ ಪ್ರಾ
ದಾನ ಮಾಡಿ ಹೆಚ್ಚಾದ ಮಾತಿನ ವಾಸಿಯನ್ನು ಪಡೆಯುವದು
ನಗೆ ಧರ್ಮವೆಂದು ಬಹುತರವಾಗಿ ಬೇಡಿ ಕೊಂಡಿತು. ಅದ
ಬ್ರಾಹ್ಮಣನು ಎಲೈ ವ್ಯಾಘ್ರುವೇ, ನೀನು ಸ್ವಭಾವದಿಂದ
ಷ್ಟ ಮೃಗವು, ಇದರ ಮೇಲೆ ನಾಲ್ಕು ದಿವಸಗಳಿಂದ ಆ
ರವಿಲ್ಲದೆ ಇದ್ದೀ, ನೀನು ಬಿದ್ದಿರುವ ಬೋನಿನ ಬಾಗಲನ್ನು
ನು ತೆರದ ಕ್ಷಣದಲ್ಲೇ ನನ್ನನ್ನು ಕೊಂದು ತಿನ್ನುವಿ, ನಿನ್ನ
ರೂಪವನ್ನು ನಾನು ಬಲ್ಲೆನು, ನಿನ್ನನ್ನು ಬೋನೊಳಗೆ ಕೆಡ
ಬೇಟೆಗಾರರು ಈ ಹೊತ್ತೋ ನಾಳೆಯೋ ಬಂದು ನೆಲಬೊ
ನಿಂದ ಭೆಂಡೀ ಬೋನಿಗೆ ನಿನ್ನ ಅಟ್ಟಿ ಬಿಟ್ಟು, ಅದೇ ಭಂಡಿ
ಮೇಲೆ ಸಾಗಿಸಿಕೊಂಡು ಅರಸುಗಳ ಒಳಿಗೆ ಹೋಗಿ, ಬದು

ಲಿಯನ್ನು ಹಿಡುಕೊಂಡು ಬಂದೆವೆಂದು ಇನಾಮುಗಳು ಹೊಂ
ದದಲ್ಲದೆ, ನೀನು ಅರಮನೇ ಬೋನಿನಲ್ಲಿ ಶೇರಿ ನಿತ್ಯವು ಎರ
ಡು ಕುರಿಗಳನ್ನು ತಿಂದು ಬದುಕುವಿ, ನಿನಗೆ ಅದೇ ಬಿಡು
ಅಲ್ಲದೆ ನಾನು ಬಿಡುವದಿಲ್ಲವೆಂದು ಒಡಂಬಡಿಸಿದನು. ಹುಲಿ
ಅಯ್ಯಾ ಬ್ರಾಹ್ಮಣನೇ, ದುರಾಲೋಚನೆ ಮಾಡ ಬೇಡ,
ನ್ನು ನಾನು ಕೊಲ್ಲುವದಿಲ್ಲ, ನಾನು ದುಷ್ಟ ಮೃಗವೇ
ಆದರೂ ಉಪಕಾರಿಗೆ ಅಪಕಾರ ಮಾಡುವದಕ್ಕೆ ನಾನೇನು
ಣ್ಣು ತಿನ್ನುತ್ತೇನೆಯೇ, ತಿನ್ನುವದೇ ಇಲ್ಲ, ಧರ್ಮದ ಮೇಲೆ
ಟ ಇಟ್ಟು ನನ್ನ ಶರೆಯನ್ನು ಬಿಡಿಸಿ ಪ್ರಾಣದಾನ ಮಾಡು
ದು ಪುನಃ ಬೇಡಿ ಕೊಂಡಿತು. ಅದನ್ನು ಕೇಳಿ ಬ್ರಾಹ್ಮ
ಣ "ವಿಷ ಪರಿಕ್ಷೆ ಮಾಡ ಬಾರದು" ಎಂಬ ವಾಕ್ಯವು ನಿಶ್ಚಯ
ವಿರಿಯದೆ, " ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡ ಬೇ
ಕು" ಎಂಬ ಸಾಮಾನ್ಯ ವಾಕ್ಯವನ್ನು ಅಂಗೀಕರಿಸಿ, ಹುಲಿಯು
ಟ್ಟ ಮೃಗವೆಂದು ತಿಳಿದಿದ್ದರೂ, ಇದರ ಮಾತಿನ ಯಥಾರ್ಥ
ವನ್ನು ತಿಳಿಯ ಬೇಕೆಂಬ ಜ್ಞಾನಸದಿಂದ, ಆ ಹುಲಿಯ ಬೋ
ನಿಗೆ ಬಿದ್ದಿರುವ ಬಾಗಲ ಹಲಿಗೆಯನ್ನು ಮೇಲಕ್ಕೆ ಎತ್ತಿದನು.
ಅಷ್ಟೀ ಆ ಹುಲಿಯು ಹುತ್ತಿನಿಂದ ಹೊರಟ ಘಟ ಸರ್ಪ
ದಂತೆ ಉರಿಯುವ ಕಣ್ಣಿಳಿಂದಲೂ ಹಸಿವಿನಿಂದ ಹುಟ್ಟಿದ
ಕೋಪದಿಂದಲೂ ಬೋನಿನಿಂದೀಚಿಗೆ ಬಂದು, ತಾನು ಹೊರಟ
ಮೇಲಿಗೆ ಭಯಪಟ್ಟುಕಾಲ್ಕಿಟ್ಟು ತೊಂದರೆಗೊಂಡು ತಪ್ಪು ಹೆಜ್ಜೆ
ಗಳ ಹಾಕುತ್ತಾ ಓಡುತ್ತಿರುವ ಬ್ರಾಹ್ಮಣನನ್ನು ನಿಲ್ಲು ನಿಲ್ಲು
ಎಂದು ಗದ್ದಿಸಿ ನಿಲ್ಲಿಸಿ, ಹಾರಿ ಬಂದು ಭುಜವನ್ನು ಹಿಡುಕೊಂಡಿ
ತು. ಆಗ ಆ ಬ್ರಾಹ್ಮಣನು ಹುಲಿಯನ್ನು ನೋಡಿ, ಎಲೈ

ವ್ಯಾಘ್ರವೇ, ಧರ್ಮಕ್ಕೆ ಕಟ್ಟುಬಿದ್ದು, ನಿನ್ನನ್ನು ಬೋನಿನಿಂ
ಬಿಡಿಸಿದೆನಲ್ಲಾ, ನೀನು ಆ ಉಪಕಾರವನ್ನು ನೆನಸದೆ ಅಧಮ
ಕ್ಕೆ ಬಿದ್ದು ನನ್ನನ್ನು ಕೊಲ್ಲುವದು ನ್ಯಾಯವೋ? ಅಲ್ಲವೆಂದನ
ಅದಕ್ಕಾ ಹುಲಿಯು ಹುಲಿಯಾದ ನಾನು ಮನುಷ್ಯನಾದ ನಿನ್ನನ
ಕೊಂದು ತಿನ್ನುವದು ನ್ಯಾಯವೇ ಹೊರ್ತು ಅನ್ಯಾಯವ
ಆದರೆ ನಾನು ನಿನ್ನನ್ನು ಜೀಡಿಕೊಂಡ ಎರಡು ಮಾತುಗಳಲ್ಲಿ
ನ್ನ ಶರೆಯನ್ನು ಬಿಡಿಸುವದು ಮೊದಲನೇ ಮಾತು, ಪ್ರಾಣದಾ
ಮಾಡುವದು ಎರಡನೇ ಮಾತು, ಇವುಗಳಲ್ಲಿ ನನ್ನ ಶರೆಯನ
ಮಾತ್ರ ಬಿಡಿಸಿ, ಪ್ರಾಣದಾನ ಮಾಡದೆ ಓಡಿ ಹೋಗವದು ನಿನ
ನ್ಯಾಯವೋ? ಆದ್ದರಿಂದ ನಿನ್ನ ಮಾತು ಸುಳ್ಳಾಗಬಾರದೆಂದು
ನ್ನ ಪ್ರಾಣವನ್ನು ದಾನವಾಗಿ ತೆಗದುಕೊಂಡು, ನಿನ್ನ ಶರೀರವನ
ಭಕ್ಷಿಸುವದಕ್ಕೆ ಸಿದ್ಧವಾಗಿದ್ದೇನೆ, ಇದೇ ನೀನು ಮಾಡಿದ ಉ
ಕಾರಕ್ಕೆ ಪ್ರತ್ಯುಪಕಾರವು, ಎಂದು ಹೇಳಲು, ಬ್ರಾಹ್ಮಣನು
ಶ್ಚರ್ಯಪಟ್ಟು ದಿಗಲು ಬಿದ್ದು ಕತೆಗೆ ಧೈರ್ಯ ಹೊಂದಿ, ಎಲೇ ಹು
ಯೇ, ನಿನ್ನ ನನ್ನ ನ್ಯಾಯಾ ನ್ಯಾಯಗಳು ಎರಡನೆಯವರಿಂ
ಫೈಸಲು ಹೊಂದುವ ವರಿಗೂ ನನ್ನ ಕೊಲ್ಲದೆ ಯಿರುವಿಯಾ
ಎಂದು ಕೇಳಿದನು. ಆ ಮಾತಿಗೆ ಹುಲಿ ಒಡಂಬಡಲು, ಹುಲಿಂ
ನ್ನು ಕರಕೊಂಡು, ಬ್ರಾಹ್ಮಣನು ಹೋಗುತ್ತಿರುವಾಗ, ಬಂ
ನರಿಯು ಉದ್ದವಾದ ಕೋಡುಗಲ್ಲಿನ ಮೇಲೆ ಕೂತಿದ್ದು, ಇವ
ವಾಂಗ್ಮೂಲವನ್ನು ಕೇಳಿ ಮುಂದಟ್ಟು ಮಾಡಿಕೊಂಡು, ಬ್ರಾಹ್ಮ
ನ ಆಪತ್ತನ್ನೂ ಹುಲಿಯ ಸಂಪತ್ತನ್ನೂ ಪರಿಹರಿಸಬೇಕೆಂ
ಲೋಚಿಸಿ, ಓ ಬ್ರಾಹ್ಮಣನೇ, ಓ ಹುಲಿಯೇ, ನಿಮ್ಮ ವ್ಯಾಜ್ಯ
ಸಂಗತಿ ನನಗೆ ಮುಂದಟ್ಟು ಆಗಿ ಆಗದೆ ಇರುವದರಿಂದ ತೀಪು

ನೂಡಲಿಕ್ಕಿಲ್ಲದೆ ಯಿದೆ, ಆದ್ದರಿಂದ ಓ ಹುಲಿಯೇ, ನೀನಾ ಬೋ
ನಿನಲ್ಲಿ ಇದ್ದದ್ದು ಹ್ಯಾಗೆ? ಈ ಬ್ರಾಹ್ಮಣನು ನಿನ್ನನ್ನು ಬಿಡಿಸಿ
ದ್ದು ಹ್ಯಾಗೆ? ಈ ಎರಡು ಮಾತನ್ನು ಪ್ರತ್ಯಕ್ಷವಾಗಿ ನನಗೆ
ತೋರಿಸಿದರೆ, ಈ ವ್ಯಾಜ್ಯವನ್ನು ತೀರಿಸುತ್ತೇನೆಂದು ಹೇಳಿತು.
ಈ ಮಾತಿಗೆ ಹುಲಿ ಭ್ರಮಿಸಿ ಬೋನಿನಲ್ಲಿ ನಾನು ಹೀಗೆ ಬಿದ್ದು ಯಿ
ದ್ದೆನೆಂದು ಯಥಾಪ್ರಕಾರ ಬೋನಿನೊಳಗೆ ತೂರಿಕೊಂಡಿತು.
ಆಗ ಬ್ರಾಹ್ಮಣನ ಕೈಯಿಂದ ಬೋನಿನ ಬಾಗಲನ್ನು ಯಥಾಪ್ರ
ಕಾರ ಭದ್ರಪಡಿಸಿ, ನರಿಯು ಬೋನಿನ ಹತ್ರಕ್ಕೆ ಬಂದು, ಹುಲಿ
ಯನ್ನು ಕುರಿತು ನೀನಂತೂ ಬೋನಿನಲ್ಲಿ ಹೀಗೆ ಯಿದ್ದೀಯಲ್ಲ,
ಬ್ರಾಹ್ಮಣನು ಯಾವ ದಾರಿಯಲ್ಲಿ ಹೋಗುತ್ತಾ ಯಿದ್ದನು, ಹೇ
ಳಿಂದು ಕೇಳಿದ್ದಕ್ಕೆ ಅದೇ ದಾರೀಲಿ ಹೋಗುತ್ತಾ ಇದ್ದನೆಂದು
ಹುಲಿ ಹೇಳಿತು. ನರಿಯು ಸರಿ ಸರಿ, ವ್ಯಾಜ್ಯ ತೀರಿತು, ನೀನು
ಹೀಗೇ ಯಿರು, ಅವನು ಹಾಂಗೇ ಹೋಗಲಿ, ಎಂದು ಕೂಗಿ
ಬ್ರಾಹ್ಮಣನನ್ನು ಓಡಿಸಿ ಬಿಟ್ಟಿತು. ಹೀಗೆ ದುಷ್ಟರಿಗೆ ಉಪಕಾ
ರ ಮಾಡಿದರೆ ಅಪಾಯ ಸಂಭವಿಸುವದು, ಆ ಅಪಾಯವನ್ನು
ಉಪಾಯದಿಂದ ಪರಿಹರಿಸಿಕೊಳ್ಳಬೇಕು.

ಐವತ್ತೆರಡನೇ ಕಥೆ.

ಹಂಸವೂ ಬಕವೂ.

ಒಂದು ಕೆರೇ ಕಟ್ಟೆಯ ಮೇಲೆ ಒಂದು ಕೊಕ್ಕರೆ ಕೂತು
ಕೊಂಡಿತ್ತು. ಆಗ ಶರತ್ಕಾಲವಾದ್ದರಿಂದ ಹಂಸ ಪಕ್ಷಿಗಳ
ಸಂಚಾರ ಬಹಳವಾಗಿತ್ತು. ಅವುಗಳಲ್ಲಿ ಒಂದು ಹಂಸವು ಆ

ಕೆರೆಗೆ ಆಹಾರಾರ್ಥವಾಗಿ ಬಂದ ವೇಳೆಯಲ್ಲಿ ಬಕವು ಅದನ
ನೋಡಿ ಎಲೈ ಪಕ್ಷಿಯೇ, ನೀನ್ಯಾರು? ಎಲ್ಲಿಂದ ಬಂದಿ? ನೀ
ಬಣ್ಣವೂ ನನ್ನ ಬಣ್ಣವೂ ಮಾತ್ರ ಒಂದಾಗಿರುವದು, ಆ
ಜಾತಿ ಒಂದೇ ಅಲ್ಲ, ನಿನ್ನ ಕಾಲುಗಳೂ ಮೂಗೂ ಕೆಂಪಾಗಿ
ನೀನು ನಮ್ಮ ಹಾಗೆ ನಡಿಯ ಬೇಕೆಂದು ಆಲೋಚಿಸುತ್ತೀ, ನ
ಜನ್ಮದಲ್ಲಿ ಕಲಿಯಲಾರಿ, ಅದು ಹಾಗಿರಲಿ, ನಿನ್ನ ವರ್ತಮಾ
ವನ್ನು ಹೇಳು, ಎಂದು ಗರ್ವದಿಂದ ಮಾತನಾಡಿತು. ಹಂಸ
ಬಕಪಕ್ಷಿಯನ್ನು ನೋಡಿ, ಎಲೈ ಜಲಚರವೇ? ನನ್ನನ್ನು ಪ
ಎಂದು ನೀನು ಕರದಿ, ನೀನು ಪಕ್ಷಿಯೋ? ಎನಲು, ಬಕ
ಕೋಪ ಹುಟ್ಟಿ ಅದು ಹಂಸವನ್ನು ನೋಡಿ, ನಾನು ನೀ
ರಿನಲ್ಲಿ ಸಂಚಾರ ಮಾಡುವದರಿಂದ ಜಲಚರವೇ ಸರಿ, ನೀ
ನೀರಿಗೆ ಬಂದಿದ್ದೀಯಲ್ಲಾ, ನಿನ್ನನ್ನು ಜಲಚರವೆಂದು ಕರಿಯು
ದಕ್ಕೆ ಏನು ಅಡ್ಡಿ, ನಿನಗೆ ಮಾತ್ರ ಖೇಚರತ್ವ ಉಂಟೆಂದೂ
ನಗೆ ಮಾತ್ರ ಇಲ್ಲವೆಂದೂ ನೆನಸಿದಿಯೋ? ಚಿಂತೆ ಇಲ್ಲ, ನೀ
ಎಲ್ಲಿಂದ ಬಂದಿ? ನಿನ್ನ ಹೆಸರು ಏನು? ಎಂದು ಪುನಃ ಕೇಳಿತ
ಹಂಸವು ಎಲೈ ಪಕ್ಷಿಯೇ, ಕೋಪಿಸಿ ಕೊಳ್ಳಬೇಡ, ಬಕ ಪ
ಯಾದ ನಿನ್ನ ವೃತ್ತಾಂತವನ್ನು ನಾನು ಬಲ್ಲೆನು, ನಾನು ಹಂ
ಪಕ್ಷಿಯು, ನನ್ನ ವಾಸಸ್ಥಾನವು ಮಹೋನ್ನತವಾದ ಸತ್ಯಲೋ
ದಲ್ಲಿ ಸೂರ್ಯ ಚಂದ್ರಕಾಂತ ಶಿಲೆಗಳಿಂದ ಅಲಂಕರಿಸಲ್ಪಟ್ಟು ರ
ಮಯವಾಗಿ ಹಾಲಿನಂಥಾ ಶೀನೀರುಳ್ಳ ಮಾನಸ ಸರೋವರ
ಸಂಚಾರಕ್ಕಾಗಿ ಭೂಲೋಕಕ್ಕೆ ಬಂದು ಇದ್ದೇನೆ, ಈ ಕೆರೆ
ಬಳಿಯ ಕೂತಿರುವ ನಿನ್ನನ್ನು ಕಂಡೆನು, ಸಂತೋಷವಾಯಿತ
ಪಕ್ಷಿಯಾದ ನಿನಗೆ ಲೋಕಾಂತ್ರ ಸಂಚಾರ ಮಾಡುವ ಖೇಚ

ಉಂಟಾಗಿರ ಬಹುದು, ಸತ್ಯಲೋಕವನ್ನು ನೋಡುವ ಮು
ಸು ಉಂಟಾದರೆ ನನ್ನ ಸಂಗಡ ಬಾ, ಕರಕೊಂಡು ಹೋ
ತ್ತೇನೆ, ಎಂದು ಹೇಳಿತು. ಬಕ ಪಕ್ಷಿಯು ನೀನು ಹಂಸ
ನೋ? ಸತ್ಯಲೋಕದಲ್ಲಿರುವ ಮಾನಸ ಸರೋವರದಲ್ಲಿ ವಾಸ
ಮಾಗಿದ್ದೀಯೋ? ಲಕ್ಷಾಂತರ ಯೋಜನಗಳ ಉನ್ನತವನ್ನು ದಾ
ಟಿ ಕಷ್ಟಪಟ್ಟು ನಿನ್ನ ವಾಸಸ್ಥಳಕ್ಕೆ ಬಂದರೆ, ಆ ಸರೋವರವು
ಪದ್ಮ, ವೈಡೂರ್ಯ, ಗೋಮೇಧಿಕ, ಪುಷ್ಯರಾಗ, ಪಚ್ಚೆ, ಪದ್ಮ
ರಾಗ, ನೀಲ, ಈ ರತ್ನಗಳ ಶಿಲೆಗಳಿಂದ ಕಟ್ಟಲ್ಪಟ್ಟ ಸೋಪಾನ
ಗಳುಳ್ಳದ್ದಾಗಿ, ಮುತ್ತು ಹವಳಗಳಿಗೆ ಬದಲಾಗಿ, ಸೂರ್ಯಕಾಂ
ತ ಚಂದ್ರಕಾಂತ ಶಿಲೆಗಳಿಂದ ಅಲಂಕರಿಸಲ್ಪಟ್ಟಿರುವದನ್ನು
ನೋಡಿ ಸಂತೋಷಿಸ ಬಹುದೆಂದು ಹೇಳುತ್ತೀ, ಇಂಥಾ ರತ್ನಗ
ಳು ಸರ್ವ ಸಾಧಾರಣವಾಗಿ ಭೂಲೋಕದಲ್ಲಿ ಇರುತ್ತವೆ. ಆ
ಸರೋವರದ ನೀರು ನೀನು ಹೇಳುವಂತೆ ಹಾಲಿನ ಹಾಗೆ ಇದ್ದ
ರೆ ಅದರಲ್ಲಿ ಸ್ನಾನ ಪಾನಗಳು ಮಾಡಿದವರಿಗೆ ಮೈ ಎಲ್ಲಾ ಜಿ
ಡ್ಡು ಜಿಡ್ಡಾಗುವದಲ್ಲದೆ, ಹೊಟ್ಟೆಯಲ್ಲಿ ಮಂದಾಗ್ನಿಯೂ ಉಂಟಾ
ಗತ್ತದೆ, ಭಂಗಾರದ ಕಮಲಗಳ ನಾಳಗಳನ್ನು ತಿನ್ನುವದು
ಹ್ಯಾಗೆ? ಅದಕ್ಕೆ ಬದಲಾಗಿ ಕಲ್ಲುಗಳನ್ನೂ ಮಣ್ಣುಗಳನ್ನೂ
ಯಾತಕ್ಕೆ ತಿನ್ನ ಬಾರದು? ಹಾಗೆಯೇ ಭಂಗಾರವು ನೋಟಕ್ಕೆ
ಮಾತ್ರ ಅಲ್ಲದೆ ಊಟಕ್ಕೆ ತಕ್ಕದ್ದಲ್ಲ, ಇದೆಲ್ಲಾ ಹ್ಯಾಗಾದರೂ
ಆಗಲಿ, ಆ ಮಾನಸ ಸರೋವರದಲ್ಲಿ ಸಣ್ಣ ಸಣ್ಣ ಕಪ್ಪೆಗಳು ಏ
ಡಿಗಳು ಮೀನುಗಳು ಉಂಟೋ? ಹೇಳೆಂದು ಕೇಳಿತು. ಅದ
ಕ್ಕೆ ಹಂಸವು ಎಲೈ ಬಕವೇ, ದೇವತಾ ಯೋಗ್ಯವಾದ ವಸ್ತುಗ
ಳಿಂ ಇರುವ ನಮ್ಮ ಮಾನಸ ಸರೋವರದಲ್ಲಿ ಈ ಯೇಡಿಗಳೂ

ಕಪ್ಪೆಗಳು ಇಲ್ಲವೆಂದು ಹೇಳಿತು. ಆ ಮಾತಿಗೆ ಬಕವು ಕ
ಇಲ್ಲದಿದ್ದರೆ ಅಂಥಾ ನಿಷ್ಪ್ರಯೋಜನವಾದ ಲೋಕದಿಂದ ನ
ಗೆ ಆಗತಕ್ಕ ಕೆಲಸವೇನೂ ಇಲ್ಲವೆಂದು ಹೇಳಲು, ರಾಜ ಹ
ವು ನಗುತ್ತಾ ಸ್ವೇಚ್ಛೆಯಾಗಿ ಹಾರಿ ಹೋಯಿತು. ಈ ಪ್ರ
ರ ಹೀನರು ಒಳ್ಳೇ ವಸ್ತುಗಳಲ್ಲಿ ದೋಷವನ್ನೂ ನೀಚ ವ
ಗಳಲ್ಲಿ ಗುಣವನ್ನೂ ಎಣಿಸುವರು.

ಐವತ್ನೂರನೇ ಕಥೆ.

ಹುಡುಗರೂ ಒಂಟಿಯೂ.

ಬಂದೂರಿನವರಾದ ಇಬ್ಬರು ಹುಡುಗರು ಜೊತೆಯಾಗಿ ಬೆ
ದೇಶಕ್ಕೆ ಹೋಗಿ ಬರೋಣ ಎಂದು ಹೊರಟರು. ಅವ
ಬ್ಬನ ಕಿವಿಯಲ್ಲಿ ಒಂಟಿ ಇತ್ತು, ಮತ್ತೊಬ್ಬನ ಕಿವಿಯಲ್ಲಿ
ಣ್ಣು ಹತ್ತು ಕಡಕ ಇತ್ತು. ಅವರಿಬ್ಬರೂ ನಾಲ್ಕಾರು ಗಾ
ಹೋದ ತರುವಾಯ ಹತ್ತುಕಡಕದವನು ಈ ಒಂಟಿಯವನ
ನೋಡಿ, ಎಲಾ ಅಣ್ಣಾ, ನನಗೆ ಆಶೆಯಾಗುತ್ತದೆ, ನನ್ನ ಹತ್ತು
ಕವನ್ನು ನೀನು ತೆಕ್ಕೊಂಡು ನಿನ್ನ ಒಂಟಿಯನ್ನು ನನಗೆ ಕ
ಡು, ಎಂಟು ದಿವಸದ ಮೇಲೆ ತಿರಿಗಿ ನಿನಗೆ ಕೊಡುತ್ತೇನೆ,
ದನು. ಅದಕ್ಕೆ ಒಂಟಿಯವನು ಒಡಂಬಟ್ಟು, ಒಂಟಿಯನ್ನು ಕ
ಟ್ಟು ಹತ್ತುಕಡಕನ್ನು ತೆಕ್ಕೊಂಡನು. ಈ ಮೇರಿಗೆ ಬದಲಾ
ಸಿ ಕೊಂಡು ಹದಿನೈದು ದಿವಸವಾದ ಮೇಲೆ ನನ್ನದು ನನಗೆ ಕ
ಟ್ಟು, ನಿನ್ನದು ನೀನು ತೆಕ್ಕೊಳ್ಳೆಂದು ಒಂಟಿಯವನು ಕೇಳಲಾ
ಹತ್ತುಕಡಕದ ಹುಡುಗನು ತನ್ನ ಬಂದು ವರಹಾದ ಕ್ರ

ಳ್ಳ ಹತ್ತೆಪಡಕಕ್ಕೆ ಬದಲಾಗಿ ಹತ್ತು ವರಹಾದ ಕ್ರಯವುಳ್ಳ
ಂಟಿಯನ್ನು ಅಪಹರಿಸ ಬೇಕೆಂಬ ದುರಾಶೆಯಿಂದ, ಆ ಜೊತೆ
ರನಿಗೆ ನಿನ್ನದು ನಿನ್ನ ಕಿವಿಯಲ್ಲೇ ಇದೆ, ನನ್ನದು ನನ್ನ
ಯಲ್ಲೇ ಇದೆ, ಹೀಗಿರುವಲ್ಲಿ ಕೊಡುವವೇನು ತೆಕ್ಕೊ
ನದೇನು? ಹೋಗೆಂದು ಉಡಾಯಿಸಿದನು. ಹೀಗೆ ಒಂಟಿ
ನ್ನದು ತನ್ನದು ಎಂತ ಇಬ್ಬರಿಗೂ ಬಹಳ ವ್ಯಾಜ್ಯ ಉಂಟಾ
ತು. ಈ ವ್ಯಾಜ್ಯವನ್ನು ಹರಿಸುವ ಮಧ್ಯಸ್ಥಗಾರರು ಒ
ರೂ ಇಲ್ಲದ್ದರಿಂದ, ಈ ಹುಡುಗರು ನ್ಯಾಯಾಧಿಪತಿಯ ಬಳಿ
ಹೋಗಿ, ತಮ್ಮ ತಮ್ಮ ವಾಗ್ಮೂಲಗಳನ್ನು ಹೇಳಿ ಕೊಂ
ಡು. ಆಗ ಆ ಅಧಿಕಾರಿಯು ಈ ಇಬ್ಬರ ಮುಖ ಭಾವವ
ನ್ನು ನೋಡಿ, ಒಡವೆ ಕಳಕೊಂಡವನು ಇವನು, ಒಡವೆಯನ್ನು
ಅಪಹರಿಸಿದವನು ಇವನು, ಎಂದು ತಿಳುಕೊಂಡು, ಮೋಸಗಾರ
ಹುಡುಗನನ್ನು ಕುರಿತು ಎಲಾ ಹುಡುಗಾ ನೀನು ಎಷ್ಟು ದಿವಸ
ದಿದ ಈ ಒಂಟಿಯನ್ನು ಕಿವಿಯಲ್ಲಿ ಹಾಕಿ ಕೊಂಡಿದ್ದೀಯೆ? ಎಂ
ದು ಕೇಳಿದನು. ಅವನು ಅಯ್ಯಾ, ನನ್ನ ಐದನೇ ಪ್ರಾಯ ಮೊ
ದಲು ಹಾಕಿ ಕೊಂಡಿದ್ದೇನೆ, ನನಗೆ ಈಗ ಹದಿನಾರು ವರುಷ
ವಾದನು. ಸಂಗಡಲೇ ಅಧಿಕಾರಸ್ಥನು ನಿಜಸ್ಥನಾದ ಹುಡುಗ
ನನ್ನು ಕುರಿತು, ಎಲಾ ಹುಡುಗಾ, ನೀನು ಎಷ್ಟು ವರುಷದಿಂದ
ಈ ಒಂಟಿಯನ್ನು ಕಿವಿಯಲ್ಲಿ ಹಾಕಿ ಕೊಂಡಿದ್ದಿಯೆ? ಎಂದು ಕೇ
ಳಲು. ಅವನು ಅಯ್ಯಾ, ನನಗೆ ಏಳನೇ ವರುಷದಲ್ಲಿ ಮುಂಜಿ
ಯಾಯಿತು, ಆಗ ನಮ್ಮಪ್ಪನು ಹತ್ತು ವರಹಾಕ್ಕೆ ಈ ಒಂಟಿ
ಮಾಡಿಸಿ ನನ್ನ ಕಿವಿಯಲ್ಲಿ ಇಟ್ಟನು, ನಾನು ಅದನ್ನು ಹದಿನೈದು
ದಿವಸದಿಂದ ಇವನ ಕಿವಿಯಲ್ಲಿ ಇಟ್ಟು ಪೇಚಾಡುತ್ತೇನೆ, ನನ

ಗೀಗ ಬಂದು ಕಡಿವೆ ಹದಿನಾರು ವರುಷವಾಗಿದೆ, ಅಂ
ಆಗ ನ್ಯಾಯಾಧಿಪತಿಯು ಪಂಚಾಯಿತರನ್ನು ನೋಡಿ, ಎ
ವರುಷ ಬಂಟಿ ಇಕ್ಕಿದವನ ಕಿವಿಗೂ ಹನ್ನೊಂದು ವರುಷ
ಟಿ ಇಕ್ಕಿದವನ ಕಿವಿಗೂ ಏನು ಹೆಚ್ಚು ಕಡಿವೆ ಹೇಳಿರೆಂ
ಅವರು ಎಡೆ ಬಿಡದೆ ಎಂಟು ವರುಷ ಬಂಟಿ ಇಕ್ಕಿದ ಕಿ
ಎರಡು ಬಂಟಿಗಳನ್ನೂ ಹನ್ನೊಂದು ವರುಷ ಬಂಟಿ ಇ
ಕಿವಿಗೆ ಮೂರು ಬಂಟಿಗಳನ್ನು ತಗಲಿಸುವಷ್ಟು ರಂಧ್ರಗಳು
ದಿರ ಬಹುದೆಂದರು. ಅದ ಕೇಳಿ ನ್ಯಾಯಾಧಿಪತಿಯು ಪಾ
ಣಿಕನಾದ ಹುಡುಗನ ಕಿವಿಗೆ ಹಂಚೀಕಡ್ಡಿ ಮೂರು ತುಂಡ
ನ್ನು ಇಡಿಸಲು, ಅದು ಸರಿಯಾಗಿ ಹಿಡೀತು. ಮೋಸ
ಹುಡುಗನ ಕಿವಿಗೆ ಬಂಟೀ ಮೇಲೆ ಬಂದು ಕಡ್ಡಿಯ ತುಂಡ
ಇಡಿಸುವಾಗಲೀ, ಅವನು ಅಯ್ಯೋ ! ಅಪ್ಪಾ ! ನೋಯುತ್ತ
ಅಂದನು. ನ್ಯಾಯಾಧಿಪತಿಯು ಬಂದು ತುಂಡಿಗೆ ನೋ
ಇನ್ನೂ ಮೂರು ತುಂಡುಗಳ ನೋವಿಗೆ ತಡಿಯಲಾರಿ, ಆ
ಬಂಟಿಯನ್ನು ಅವನಿಗೆ ಕೊಟ್ಟು ಬಿಟ್ಟು, ನಿನ್ನ ಹತ್ತಕಡಕ
ನೀನು ತೆಕ್ಕೊ, ಎಂದು ತೀರ್ಪು ಮಾಡಲು, ಅವರು ಅದೇ
ಕಾರ ನಡಕೊಂಡರು. ಹೀಂಗೆ ಧರ್ಮ ಪ್ರಭುಗಳು ನ್ಯಾ
ವನ್ನು ಬಿಡದೆ ನಡಿಸುವರು.

ಐವತ್ತಾನ್ನಲ್ಕನೇ ಕಥೆ.

ಕುದುರೆಯೂ ಕಾಸ್ತಾರನೂ.

ಒಬ್ಬ ಅರಸನ ಬಳೀಲಿ ಒಂದು ಕುದುರೆ ಉಂಟು. ಪಟ್ಟದ ಕುದುರೆಯಾಗಿ ಉತ್ತಮವಾಳ್ವ ವೆನಿಸಿಕೊಂಡಿತ್ತು.

ು ಕೆಲವು ಕಾಲಕ್ಕೆ ಅದು ಮುದಿಯಾಗಿ ಸತ್ತು ಹೋದ್ದ
ಅದಕ್ಕೆ ಬದಲಾಗಿ ಲಕ್ಷಣವಾದ ಕುದುರೆಯನ್ನು ತೆಗದು
ಂಡು ಬರುವ ಬಗ್ಯೆ ಅರಸನು ತನ್ನ ಬಳಿಯ ಇರುವವರಲ್ಲಿ
ಪರಿಕ್ಷೆ ಚನ್ನಾಗಿ ತಿಳಿದ ಒಬ್ಬ ಸಾಮಾಜಿಕನನ್ನು ಅರ
ದೇಶಕ್ಕೆ ಕಳುಹಿಸಿದನು. ಆ ಸಾಮಾಜಿಕನು ಒಬ್ಬ ಆ
ಕರಕೊಂಡು ಅರಬಸ್ತಾನ್‌ದಲ್ಲಿ ಪ್ರವೇಶಿಸಿ, ಅಲ್ಲಿ ಬಾರಾ
ರಿ, ತೇರಾ ಹಜಾರಿ, ಅಂದರೆ ಹನ್ನೆರಡು ಸಾವಿರ ಹದಿಮೂ
ಸಾವಿರ ವರಹಾಗಳ ಬೆಲೆಯುಳ್ಳ ಉತ್ತಮಾಶ್ವಗಳಲ್ಲಿ ಆರಿಸಿ,
ಮಣಿ ಕಂಠಾಭರಣ ಮೊದಲಾದ ಒಳ್ಳೇ ಸುಳಿಗಳಿಂದ
ಪಟ್ಟಕ್ಕೆ ಯೋಗ್ಯವಾದ ಕುದುರೆಯನ್ನು ಹದಿನಾಲ್ಕು
ರ ವರಹಾ ಕ್ರಯ ಕೊಟ್ಟು ಕೊಂಡು ಕೊಂಡನು. ಆ
ರೆಯನ್ನು ತೆಗದು ಕೊಂಡು ಬರುವಾಗ ಅದಕ್ಕೆ ತಕ್ಕ
ಲು ಕಟ್ಟು ಮುಂತಾದ ಬಂದೋಬಸ್ತಿನಿಂದ ಬರುವದಕ್ಕೆ
ಕಾಶವಿಲ್ಲದೆ, ಜಾಗ್ರತೆಯಾಗಿ ತನ್ನ ಪಟ್ಣವನ್ನು ಶೇರಬೇ
ಅಭಿಲಾಷೆಯಿಂದ, ತಾನೂ ಕುದುರೇ ಆಳೂ ಮಾತ್ರ ಏ
ಕಿ ಹೊರಟು ಮಾರ್ಗದಲ್ಲಿ ಬರುತ್ತಿರುವಾಗ, ಅಡವಿಯಲ್ಲಿ
ದಲ್ಲಿ ಒಂದು ರಾತ್ರಿ ಟಂಕಿ ಮಾಡ ಬೇಕಾಯಿತು. ಆಗ
ಾಜಿಕನು ಕುದುರೇ ಆಳನ್ನು ನೋಡಿ, ಎಲಾ, ಇದು ಉ
ಶ್ವವು, ನಾವು ಇಳಿದಿರುವ ಸ್ಥಳವು ಕಳ್ಳ ಕಾಕರಿಗೆ ಆಸ್ಪ
ರುವಂತೆ ತೋರುತ್ತದೆ, ಆದ್ದರಿಂದ ಮೈಮರತು ನಿದ್ದೆ
ಗ ಬೇಡ, ಏನಾದರು ಒಂದು ಒಳ್ಳೇ ಆಲೋಚನೆ ಮಾ
ಎಚ್ಚರವಾಗಿರೆಂದು ತಾನು ಒಳಗೆ ಮಲಗಿದನು. ಆಗ
ು ರಾತ್ರಿ ಆಗಿತ್ತು. ಅದೇ ಮೇರಿಗೆ ಕುದುರೆಯವನು

ಎಚ್ಚತ್ತಿರುವಾಗ ಸಾಮಾಜಿಕನು ಅರ್ಧರಾತ್ರಿಯಲ್ಲಿ ಆಳನ
ಕುರಿತು, ಕುದರೆಯವನೇ, ಎಚ್ಚರ ಉಂಟೋ? ಏನು ಆಲೋ
ಚನೆ ಮಾಡುತ್ತೀ? ಎಂದು ಮಾತನಾಡಿಸಿದ್ದಕ್ಕೆ, ಅವನು
ಯ್ಯಾ, ಎಚ್ಚರವಾಗಿದ್ದೇನೆ, ಈ ಆಕಾಶಕ್ಕೆ ಮೊದಲ್ಯಾವದು
ತುದಿ ಯಾವದು? ಇದು ಕಂಬಗಳಿಲ್ಲದೆ ಹ್ಯಾಗೆ ನಿಂತಿದೆ? ಆ
ಕ್ಕೆ ಚಂದ್ರ ನಕ್ಷತ್ರಗಳು ಹ್ಯಾಗೆ ಅಂಟಿಕೊಂಡವೆ? ಎಂದು
ಲೋಚನೆ ಮಾಡುತ್ತೇನೆ, ಅಂದನು. ಸಾಮಾಜಿಕನು ಸರಿ ನ
ಹಾಗೆ ಇರು, ಎಂದು ಹೇಳಿದನು. ಮೂರು ಝಾಮ ವಾಗು
ದನ್ನು, ಸಾಮಾಜಿಕನು ಪುನಃ ಎಲಾ ಕುದುರೆಯವನೇ, ಈ
ಏನು ಆಲೋಚನೆ ಮಾಡುತ್ತೀ? ಎಂದು ಕೇಳಿದ್ದಕ್ಕೆ, ಅ
ಬುದ್ಧೀ, ಈ ಭೂಮಿ ಎಷ್ಟು ದೊಡ್ಡದು? ಈ ಭೂಮಿಯ ನ
ತ್ತ ಇರುವ ಸಮುದ್ರವು ಹ್ಯಾಗೆ ಹುಟ್ಟಿತು? ಇದನ್ನು ಅಗ
ವರ್‍ಯಾರು? ಅಗದ ಮಣ್ಣೆಲ್ಲಾ ಎಲ್ಲಿ ಹಾಕಿದರು? ಅದೇ ಬೆಟ್ಟ
ಳೋ? ಎಂದು ಆಲೋಚನೆ ಮಾಡುತ್ತೇನೆ ಎಂದನು. ಸಾ
ಮಾಜಿಕನು ಸರಿ ಸರಿ, ಹಾಗೆ ಎಚ್ಚರಿಕೆಯಾಗಿರೆಂದು ಹೇಳಿ ಸಾ
ನು ಬಳಕ್ಕೆ ಹೋದನು. ನಾಲ್ಕನೇ ಝಾಮು ಹುಟ್ಟುತ್ತಲೇ
ಅದುವರಿಗೆ ನಿದ್ದೆ ಕಾದಿದ್ದ ಕುದುರೆಯವನಿಗೆ ಕಣ್ಣು ಬಿಕ್ಕೊ
ಡು ತೂಗಡಿಸಿ ಜೋಲಿ ಬಿದ್ದು ನಿದ್ದೆ ಬಂತು. ಅದೇ ಸಮಯ
ದಲ್ಲಿ ಎರಡು ಮೂರು ಮಜಿಲಿಗಳಿಂದ ಬೆನ್ನು ಹತ್ತಿ ಬಂದಿ
ಕಳ್ಳರು ಕುದುರೆಯ ಅಗಾಡಿ ಪಿಛಾಡೀ ಹಗ್ಗಗಳನ್ನು ಕದ
ಮೆದಲದ ಹಾಗೆ ಬಿಚ್ಚಿ, ತಕ್ಕ ಲಗಾಮು ಬಾಯಿಗೆ ಕೊಟ್ಟ
ಕೆಂಕವೂ ಅನ್ನದೆ ಅದನ್ನು ಹೊಡಕೊಂಡು ಹೋದರು. ಸಾ
ಗೆಡಲೇ ಝಾಮು ಕಟ್ಟೋ ಪ್ರಕಾರಕ್ಕೆ ಸಾಮಾಜಿಕನೆದ್ದು ಕು

ಯುವನೇ, ಈಗ ಏನು ಆಲೋಚನೆ ಮಾಡುತ್ತೀ? ಎನ್ನಲು,
ನು ಅಯ್ಯಾ, ಈಗ ತಾನೆ ರವಷ್ಟು ತೂಕಡಿಸಿ ಬೆಬ್ಬರ ಬಿ
ದ್ದು ದಿಕ್ಕು ದಿಕ್ಕುಗಳು ನೋಡುತ್ತೀನೆ, ಕತ್ತಲೆ ಕಾವಳವೇ
ೂರ್ತು ಕಟ್ಟಿದ ಕುದುರೆ ಕಾಣಿಸಲಿಲ್ಲ, ಕಳ್ಳರೇ ಬಿಚ್ಚಿಕೊಂ
ು ಹೋಗಿರ ಬಹುದು, ಕುದುರೇ ಮಾತಂತು ಆಯಿತು, ಇದರ
ೋಗೀರು ತಂಗು ಮುಂತಾದ ಸಾವಾನುಗಳನ್ನು ನೀವು ಹೊರ
ೀಕೋ ನಾನು ಹೊರಬೇಕೋ? ಎಂಬ ದೊಡ್ಡ ಆಲೋಚನೆ
ನಗೆ ಹಿಡಿದದೆ ಅಂದನು.

ಅದಕ್ಕಾತನು, ಅಯ್ಯೋ! ಅಪ್ರಯೋಜಕನೇ, ಕೆಲಸಾ ಕೆ
ಸಿದಿಯಲ್ಲಾ, ಎಂದು ದುಃಖ ಪಡುತ್ತಿದ್ದನು. ಕಾಸ್ತೂರನು ಅ
ಯ್ಯಾ, ಯಾಕೆ ದುಃಖ ಪಡುತ್ತೀರಿ? ಅರಸುಗಳಿಗೆ ಹಣಕ್ಕೇನು
ಡಮೆ? ಒಂದು ಹೋದರೆ ಮತ್ತೊಂದು ಬರುತ್ತದೆ, ಸದ್ಯ
ುಗು ತಡಿಗಳು ಹೊರುವದಕ್ಕೆ ಕೂಲಿ ಆಳುಗಳು ಶಿಕ್ಕುತ್ತಾ
ೋ ಇಲ್ಲವೋ? ಅಂದನು. ಅಷ್ಟರಲ್ಲೇ ಬೆಳಗಾಯಿತು.
ುಗಡಲೇ ಸಾವಾಜಿಕನು ಈ ಸಂಗತಿಗೆ ಕಾಗದ ಬರದು ಅ
ರಸನ ಬಳಿಗೆ ಟಪಾಲು ಮೇಲೆ ಹಾಕಿದನು. ಅದು ಶೇರಿದ ದಿ
ವಸವೇ ಕಳ್ಳರು ಆ ಪಟ್ಣಕ್ಕೆ ಹೋಗಿ ಆ ಕುದುರೆಯನ್ನು ಮಾ
ರವದಕ್ಕೆ ಅದೇ ಅರಸನಿಗೆ ತೋರಿಸಿದರು. ಅರಸನು ಆ ಕು
ರೆಯನ್ನು ಪರಿಕ್ಷಿಸಿ ನೋಡುವಾಗ ಅದರ ಲಕ್ಷಣಗಳೂ ಅರ್ಜಿ
ುಲ್ಲಿ ಬರದಿರುವ ಚಹರೆಯೂ ಸರಾಸರಿಯಾಗಿ ಇದ್ದದ್ದರಿಂದ
ಕ್ಷಣದಲ್ಲೇ ಆ ಕಳ್ಳರನ್ನು ಕೈದಿನಲ್ಲಿಟ್ಟು ಸಾಮಾಜಿಕನನ್ನು
ರಿಸಿ ಸನ್ಮಾನಿಸಿ, ಕುದುರೆಯನ್ನು ತೋರಿಸಿ, ಅಪ್ರಯೋಜಕ
ುದ ಕುದುರೆಯವನ ಮಾತುಗಳನ್ನು ಕೇಳಿ ನಕ್ಕು, ಬಬ್ಬನೇ

ಕಾವಲಿವ್ದ ಮೈಮರತು ನಿದ್ದೆ ಹೋದ್ದರಿಂದ ತಪ್ಪೆಣಿಸದೆ ನ
ನನ್ನು ಮನ್ನಿಸಿ, ಕಳ್ಳರಿಗೆ ತಕ್ಕಷ್ಟು ದಂಡನೇ ವಿಧಿಸಿದ
ಆದ ಕಾರಣ ಬೆಸ್ಪು ಮನುಷ್ಯನನ್ನು ಜೊತೆಯಾಗಿ ಪರಸ್ಥಳ
ಕರಕೊಂಡು ಹೋಗ ಬಾರದು.

ಐವತ್ತೈದನೇ ಕಥೆ.

ನಾಯೂ ಕತ್ತೆಯೂ.

ಬಂದು ಊರಿನಲ್ಲಿ ಒಬ್ಬ ಅಗಸನಿದ್ದನು. ಅವನಿಗೆ ಮು
ಹೊರುವದಕ್ಕೆ ಬಂದು ಕತ್ತೆಯೂ ಮನೇ ಕಾವಲಿಗೆ ಬಂದು
ಯೂ ಇತ್ತು. ಬಂದು ದಿವಸ ರಾತ್ರಿ ಅಗಸನು ಮಲಗಿ ನಿ
ಹೋಗುತ್ತಿರುವಾಗ, ಅವನ ಮನೆಯಲ್ಲಿರುವ ಬಟ್ಟೆಗಳನ್ನೇ
ಕದ್ದುಕೊಂಡು ಹೋಗ ಬೇಕೆಂದು ಕಳ್ಳರು ಬಂದರು. ಆ
ಸುಳಿವನ್ನು ನಾಯಿ ತಿಳಿದೂ ತಿಳಿಯದ ಹಾಗೆ ಬಗಳದೆ ಸು
ನೆ ಇತ್ತು; ಯಾಕಂದರೆ, ಆ ರಾತ್ರಿ ತನಗೆ ಹಿಟ್ಟು ಹಾಕಲಿಲ್ಲ
ಬ ಕೋಪದಿಂದಲೇ. ಆಗ ಕತ್ತೆ ಸುಮ್ಮನೆ ಇರದೆ ನಾಯನ
ನೋಡಿ, ಎಲಾ ಸೊಣಕನೇ, ಯಾಕೆ ಸುಮ್ಮಗಿದ್ದೀ, ಛಟ್ಟಿಯ
ಗಿ ಬಗಳಿ ಯಜಮಾನನ್ನು ಎಬ್ಬಿಸು, ಅಗೋ ನೋಡು, ಕಳ್ಳ
ಬಂದು ಬಟ್ಟೇ ಮೂಟೆಗಳನ್ನು ಕದ್ದು ಕೊಂಡು ಹೋಗುತ್ತಾ
ಎಂದು ಹೇಳಿತು. ನಾಯಿ ನಿನಗೇನು ಹೊತ್ತು ಹೋಗದೋ
ಸುಮ್ಮನೆ ಇರಲಾರೆಯೋ? ಬಟ್ಟೆಗಳಾದರು ಹೋಗಲಿ, ಅಗ
ನಾದರು ಹೋಗಲಿ, ನಿನಗೇನು, ನನಗೇನು? ಈ ಕೆಟ್ಟ ಅಗ
ಗಿತ್ತಿ ಈ ರಾತ್ರಿ ನನಗೆ ಹಿಟ್ಟೇ ಹಾಕಲಿಲ್ಲ, ಅಗಸನು ನಾಯ
ಗೆ ಹಿಟ್ಟು ಹಾಕಿದಿಯಾ ಎಂದು ಕೇಳಲೂ ಇಲ್ಲ, ತಾನಾದ

ದು ತುತ್ತು ಹಾಕಲೂ ಇಲ್ಲ, ನನಗೆ ಹಸಿವಿನಿಂದ ಪ್ರಾಣ
ೀಗುತ್ತದೆ, ಉಬ್ಬೆಯ ಬೂದಿಯಲ್ಲಿ ಛಳಿಗೆ ಮುದಿರಿ ಕೊಂಡಿ
ನೆ, ನನ್ನ ಮಾತಾಡಿಸ ಬೇಡ, ಬಂದು ರಾತ್ರಿ ತಿಂಡಿ ಹಾಕ
ಕ ನನಗಿಷ್ಟು ರೋಷವೂ ಛಲವೂ ಉಂಟಾಗಿದೆ, ನೀನು
ಟ್ಟದ ದಿವಸದಿಂದ ನಿನ್ನನ್ನು ಈ ಅಗಸನು ಇರಳೆಲ್ಲಾ ಹಾಳು
ೀಡೆಯಲ್ಲಿ ಕೂಡಿ ದಿನಾಲೂ ಉಪಾಸ ಕೊಲ್ಲುತ್ತಾನಲ್ಲಾ,
ಗೆ ರೋಷವೂ ಛಲವೂ ಉಂಟಾಗಿದ್ದರೆ ನನ್ನ ಹಾಗೆ ನೀನೂ
ಮ್ಮನೆ ಇರು, ರೋಷವೂ ಛಲವೂ ಇಲ್ಲದಿದ್ದರೆ ನನಗೆ ಬದ
ನೀನೇ ಕೂಗು, ನೀನು ಕೂಗಿದಾಗ್ಯೂ ಬಳ್ಳೀಯವನೆನಿಸಿ
ಂಬುವದಿಲ್ಲ, ಈ ಕೆಟ್ಟ ಅಗಸನ ಕೈಲಿ ದೊಣ್ಣೇ ಪೆಟ್ಟು
ೀ, ಇಗೋ ನೋಡಿಕೋ, ಹೇಳಿದ್ದೇನೇ ಎಂದು ಖಂಡಿತವಾ
ಹೇಳಿತು. ಆದಾಗ್ಯೂ ಸುಮ್ಮನೆ ಇರದೆ, ಆ ವಿವೇಕವಿಲ್ಲದ
ಯು, ತಳವನ್ನಗಿದು ಗೋಡೆಯನ್ನು ಮೇಲೆ ಕೆಡವಿಕೊ
ವನ ಹಾಗೆ ಮೈ ಮುರಿಯ ಪೆಟ್ಟಾಗುವದನ್ನರಿಯದೆ, ಹೋ
ಸು ಘಟ್ಟಿಯಾಗಿ ಕೂಗಿತು. ಆಗ ಎಮ್ಮೇ ತಮ್ಮನ ಹಾಗೆ
ದ್ದ ನಿದ್ದೆ ಹೋಗುವ ಮೊದ್ದಗಸನು ಬೆಬ್ಬರ ಬಿದ್ದದ್ದು, ಕೂ
ಗ ಕತ್ತೆಯ ಉಪಕಾರವನ್ನೆಣಿಸದೆ, ಬಟ್ಟೆಗಳನ್ನು ಗಟ್ಟಿಸು
ವ ಕೊಡತಿಯಿಂದ ಕತ್ತೆಯ ಮೈ ಮುರಿಯ ಹೊಡೆದನು. ನಾ
ಯ ಮಾತು ಕೇಳದೆ ಪೆಟ್ಟು ತಿಂದೆನಲ್ಲಾ ಎಂದು ಕತ್ತೆ ಸುಮ್ಮ
ನಾಯಿತು. ಕಳ್ಳರ ಕೆಲಸ ಕೈ ಕೂಡಿತು. ಅಗಸನ ಮನೆ
ಕೆಳ್ಳಿಯಾಯಿತು. ನಾಯಿಯ ಪಂತವಾಸಿ ಗೆದ್ದಿತು. ಹೀಗೆ ಒ
ಬ್ಬನು ಮಾಡುವ ಕೆಲಸ ಮತ್ತೊಬ್ಬರು ಮಾಡಿದರೆ ಅನರ್ಥವಾ
ದಿತು.

ಐವತ್ತಾರನೇ ಕಥೆ.

ಶೆಟ್ಟಿಯೂ ಹಾಸ್ಯಗಾರನೂ.

ಒಂದೂರಿಂದ ಒಬ್ಬ ಶೆಟ್ಟಿಯು ತನ್ನ ಹೆಂಡತಿಯನ್ನು ಕ
ಕೊಂಡು ಮತ್ತೊಂದೂರಿಗೆ ಹೋಗುತ್ತಿರುವಾಗ, ನಡುದಾರಿಯ
ಮೊಣಕಾಲುದ್ದ ನೀರು ಹರಿಯುವ ಒಂದು ಕಾಲು ಹೊಳೆ ಆ
ಲಾಗಿ ಯಿತ್ತು. ಅದರಲ್ಲಿ ಹೆಂಡತಿಯನ್ನು ಮುಂದೆ ಬಿಟ್ಟು ತಾ
ಹಿಂದೆ ಹೋಗುತ್ತಿರುಲಾಗಿ ಆ ಹೆಂಗಸು ಮಟ್ಟವಾದವಳಾದ್ದರಿಂ
ತನ್ನ ತೊಡೆಯವರಿಗೂ ಹರಿಯುವ ನೀರಿನಲ್ಲಿ ಶೀರೆ ನೆನೆಯ
ಹಾಗೆ ಎತ್ತಿಕೊಂಡು ನಡದು ಬರುತ್ತಾ ಯಿದ್ದಳು, ಅದನ್ನು ಕ
ಚೇ ಧಡದಲ್ಲಿ ಕುಳಿತಿದ್ದ ಒಬ್ಬ ಹಾಸ್ಯಗಾರನು ಕಂಡು, ದಿಗ್ಗ
ಎದ್ದು, ಹೋ, ಹೋ, ಮೋಸ ಬಂತೆಂದು ನೀರಿನಲ್ಲಿಳಿದು ಬೇಗ
ಹೆಂಗಸಿನ ಕೈ ಹಿಡಿದು ಕೊಂಡು ಗಡ್ಡಿಗೆ ಕೆಳೆಕೊಂಡದ್ದಲ್ಲದೆ, ಅ
ಳ ಗಂಡನನ್ನು ನೋಡಿ, ಎಲಾ ಹುಚ್ಚಾ, ನೀನು ಎಂಥಾ ಕೆಟ್ಟ ಮ
ನುಷ್ಯನು, ಹೆಂಗಸು ನೀರಿನಲ್ಲಿ ನಡದು ಬರುತ್ತಾ ಇದ್ದರೆ ಹಿಂ
ಗಡೆಯಿಂದ ಬಂದು ಬೆದರಿಸುತ್ತೀಯಾ? ಹಲ್ಲು ಮುರಿಯುತ್ತೇ
ನೀನ್ಯಾರು, ಅವಳ್ಯಾರು, ಛೀ, ಅಚೆ ಹೋಗು, ಎಂದು ಬೆದ
ಸಿದನು. ಅದಕ್ಕಾ ಶೆಟ್ಟಿ ಘಾಬರಿ ಬಿದ್ದು ಎಲಾ ಅಪ್ಪಾ, ನ
ನಂತು ಸೋಲೂರಿನಿಂದ ಬಂದ ಸೋವಮಾರಿ ಶೆಟ್ಟಿ, ನನ್ನ ಹೆಂ
ತಿ ಇವಳು, ಸಂಶಯವಿಲ್ಲ, ನೀನ್ಯಾರಪ್ಪಾ, ಶಾನೆ ಗದ್ದಲ ಮ
ಡುತ್ತೀ, ಎಂದು ಕೇಳಿದ್ದಕ್ಕೆ, ಹಾಸ್ಯಗಾರನು ನೀನು ಶೆಟ್ಟಿಯೊ
ಪಡಿ ಶೆಟ್ಟಿಯೋ, ಇವಳಿಗೆ ನೀನು ಗಂಡನಾದರೆ ನಿನಗೆ ನಾ
ಗಂಡನೋ? ನನ್ನ ಹೆಂಡತಿಯನ್ನು ನಿನ್ನ ಹೆಂಡತಿ ಎಂ
ಹೇಳುತ್ತೀಯಾ? ಹರಿದು ಹೋಗುವ ಹೊಳೆಯಲ್ಲಿ ಕೈ ಹಿ

ಮೇಲಕ್ಕೆ ಕೆಳಕೊಂಡ ನಾನು ಕಲ್ಲು ಗುಂಡಿನ ಹಾಗೆ
ುವಾಗ, ಹಿಂದೆ ಬಂದ ದಾರಿ ಹೋಕನಾದ ನೀನು ಇವ
ಗಂಡನೆಂಬುವವಕ್ಕೆ ಯಾವ ದೃಷ್ಟಾಂತ ಕೊಡುತ್ತೀ
ೀ ಕೊಡು, ನಡಿ ಪಂಚಾಯಿತರ ಬಳಿಗೆ, ಎಂದು ಶೆಟ್ಟಿಯ ಕೈ
ನ್ನು ಬಲಗೈಯಿಂದಲೂ ಹೆಂಗಸಿನ ಕೈಯನ್ನು ಎಡಗೈಯಿಂ
ೂ ಹಿಡುಕೊಂಡು ನ್ಯಾಯಸ್ಥಾನಕ್ಕೆ ಹೋಗಿ, ನನ್ನ ಹೆಂಡತಿ
ನ್ನ ಹೆಂಡತಿ ಎಂದು ಈ ಉಭಯತ್ರರು ತಮ್ಮ ತಮ್ಮ ವ್ಯಾ
ದ ಸಂಗತಿಗಳನ್ನು ಹೇಳಿ ಕೊಳ್ಳುತ್ತಿರುವಾಗ, ಈ ಹೆಂಗಸು
ಳ ಮಾನವಂತೆಯಾದ್ದರಿಂದ ಮಾತನಾಡದೆ ಸುಮ್ಮನೆ ಇದ್ದ
ಅವಳು ಹಾಗೆ ಸುಮ್ಮನೆ ಇದ್ದ ಕಾರಣದಿಂದಲೇ ಈ
ಯವನ್ನು ತೀರಿಸುವದಕ್ಕೆ ನ್ಯಾಯಾಧಿಕಾರಿಗೆ ಸಂಶಯ
ುಟಾಗಿ, ಗುಟ್ಟಾದ ರಹಸ್ಯಗಳನ್ನು ಕೇಳಿ ತಿಳುಕೊಳ್ಳ ಬೇ
ನು ಈ ಶೆಟ್ಟಿಯನ್ನು ಕರದು ಇವಳು ನಿನ್ನ ಹೆಂಡತಿಯೆಂಬ
ಕ್ಕೆ ಇವಳಿಗಿರುವ ರಹಸ್ಯವಾದ ಆಂಗ ಮಚ್ಚೆ ಗುರ್ತುಗಳು
ವದನ್ನಾದರು ಬಲ್ಲಿಯಾ? ಎಂದು ಕೇಳಿದ್ದಕ್ಕೆ, ಆ ಶೆಟ್ಟಿಯು
ಿಸ್ಮಯಗಿ, ಅಯ್ಯಾ, ನನಗಿವಳು ಹೆಂಡತಿ ಎಂಬ ಒಂದು ಮಾತು
ರ್ತು ಮತ್ತ್ಯಾವದನ್ನು ನಾ ನರಿಯೆನೆಂದನು. ಸಂಗಡಲೇ
ಪರಿಹಾಸಕನನ್ನು ವಿಚಾರಿಸಲಾಗಿ ಇವಳ ಎಡ ತೊಡೆಯಲ್ಲಿ
ಮಚ್ಚೆಯೇ ನನಗೆ ಗುರ್ತು ಎಂದನು. ಆ ಮಾತನ್ನು
ಹೆಂಗಸರಿಂದ ಪರಿಕ್ಷೆ ನೋಡಿಸಿ ನಿಜವೆಂದೆಣಿಸಿ, ಈ
ಗೆ ಅನ್ಯಾಯ ಮಾಡುವದಾಗಿದ್ದ ಅಧಿಕಾರಿಯನ್ನು ನೋಡಿ,
ನು ಅಯ್ಯಾ, ನಾನು ಹಾಸ್ಯಗಾರನು, ಅಪಹಾಸ್ಯಕ್ಕಾಗಿ ಈ
ಾರ ಮಾಡಿದೆನೆಂದು ನಡದ ಸಂಗತಿಯನ್ನೆಲ್ಲಾ ತಿಳಿಸಿದನು.

ನ್ಯಾಯಾಧಿಪತಿಯು ಮಾನ ಹೋಯಿತಲ್ಲಾ ಎಂದು ಕೇವಲ ನಿ
ನ್ನನಾಗಿರುವ ಶೆಟ್ಟಿಯನ್ನು ಸಮುದಾಯಿಸಿ ಅವನ ಹೆಂಡತಿ
ನ್ನು ಅವನ ಸಂಗಡ ಕಳುಹಿಸಿದನು. ಹಾಸ್ಯಗಾರನಿಗೆ ಇನ್ನು
ಮೇಲೆ ಹೀಗೆ ಮಾಡಬೇಡವೆಂತ ಹೇಳಿದನು. ನ್ಯಾಯಾಧಿ
ರಿಗಳು ಎಷ್ಟು ಬುದ್ಧಿವಂತರಾಗಿದ್ದಾಗ್ಯೂ ಅನ್ಯಾಯಗಳು ಘಟಿ
ದಂತೆ ದೇವರೇ ರಕ್ಷಿಸಬೇಕು.

ಐವತ್ತೇಳನೇ ಕಥೆ.

ಎಕಚಕ ಬಾಚಿಕನು.

ನರಪತಿ ಕೃಷ್ಣರಾಯರ ಆಳಿಕೆಯಲ್ಲಿ ತೆನ್ನಾಲ ರಾಮ
ಕೃಷ್ಣನು ವಿಕಟ ಕವಿ, ಅವನ ಮಗನು ಭಾಸ್ಕರ ಕವಿ, ಇವನ
ತದ್ಭವದ ಹೆಸರು ಬಾಚಿಕನು. ಇವನನ್ನು ಎಕಚಕಬಾಚಿ
ನೆಂದು ಕರಿಯುವದುಂಟು. ಎಕಚಕವಂದರೆ ಪರಿಹಾಸ, ಇ
ರಿಂದ ಹಾಸ್ಯಗಾರ ಭಾಸ್ಕರ ಕವಿ ಎಂಬ ಅರ್ಥವಾಯಿತು. ಇ
ನ ವಿನೋದಗಳು ತಂದೆಯ ವಿನೋದಗಳಿಗಿಂತಲೂ ಹೆಚ್ಚಾಗಿ
ವವು. ಈ ಬಾಚಿಕನು ಎಂಟು ಹತ್ತು ವರುಷದವನಾಗಿರು
ಗ ಕೈಲಾಗದ ಹುಡುಗನೆಂದು ತಂದೆಯಿಂದ ನಿಂದಿಸಲ್ಪಟ್ಟು, ರೋ
ಷಗೊಂಡು, ಅಪ್ಪಾ, ನಾಳೇ ದಿವಸ ರಾಯನಿಂದ ಬಹುಮಾ
ನೊಂದಿ ಬರುತ್ತೇನೆ, ನೋಡೆಂದು ಪ್ರತಿಜ್ಞೆ ಮಾಡಿದನು.
ಮಾತಿಗೆ ನಕ್ಕು ಸುಮ್ಮನಿದ್ದ ತಂದೆಗೆ ಹೇಳದ ಹಾಗೆ ಮರುದಿ
ಸ ಬೆಳಗಾಗುವದಕ್ಕೆ ಮುಂಚಿತವಾಗಿಯೇ ಹಾಸಿಗೆಯಿಂದ ಎದ್ದು
ಹೊರಟು ಹೋಗಿ ರಾಯನು ನಿತ್ಯವೂ ವಿಮಾನ ದರ್ಶನ ಮಾ
ಡುವ ದೇವೀ ದೇವಸ್ಥಾನದ ಗೋಪುರದ ಮೇಲಕ್ಕೆ ಹತ್ತಿ

ಗೋಟಿ ಹೊರ್ತು ಬೆತ್ತಲೆ ಮೈಯಿಂದ ರಾಯನ ಅರಮನೆ
ನುರಾಗಿ, ಅಂಡು ತಿರಿಗಿಸಿ ಬೊಗ್ಗಿ, ಗೋಪುರದ ಕೊಟ್ಟ ಕೊನೆ
ಲ್ಲಿ ಕೂತು ಕೊಂಡನು.

ಹೀಗಿರುವಾಗ ಸೂರ್ಯೋದಯ ಕಾಲಕ್ಕೆ ರಾಯನು ಉನ್ನ
ನಾದ ಉಪ್ಪರಿಗೆಯಲ್ಲಿ ಹಂಸ ತೂಲಿಕಾ ತಲ್ಪವೆಂಬ ಹಂಸ ಪ
ಗಳ ಪುಡಿರೆಕ್ಕೆಗಳು ತುಂಬಿ ಹೊಲಿದಿರುವ ರಾಜಯೋಗ್ಯ
ದ ಹಾಸಿಗೆಯಿಂದ ಎದ್ದು, ನಾನಾ ವಿಧವಾದ ಮಂಗಳವಾದ್ಯ
ನಿಗಳನ್ನು ಕೇಳುತ್ತಾ, ನಿತ್ಯ ಕಟ್ಟಿಮೇರಿಗೆ ದೇವೀ ದೇವ
ನದ ವಿಮಾನ ದರ್ಶನವನ್ನು ಮಾಡುವದಕ್ಕಾಗಿ ಕಿಟಿ
ಬಾಗಲು ತೆರದು ನೋಡಿದನು. ಆಗ ರಾಯನ ದೃಷ್ಟಿ
ಯು ಮುಂಭಾಗದ ಗೋಪುರದ ಕೊಟ್ಟ ಕೊನೆಯಲ್ಲಿ ಬೊಗ್ಗಿ
ಕೊಂಡಿರುವ ಬಾಚಿಗನ ಅಂಡಿನ ಮೇಲೆ ಬಿತ್ತು. ಆ ಬಳಿ
ಕ ವಿಮಾನ ದರ್ಶನವಾಯಿತು. ಆಗ ರಾಯನಿಗೆ ಬಹಳ
ಕೋಪ ಬಂದು ಆತನು ಇಷ್ಟು ಹೊತ್ತಿಗೆ ಈ ಪ್ರಕಾರ
ನುಗೆ ಕಾಣಿಸಿದವನಿಗೆ ಪ್ರಾಣಾಜ್ಞೆ ಆಗಲೆಂದು ಹಬಿಶಿಯವ
ಗೆ ಹುಕುಂ ಕಳುಹಿಸಿದನು. ತಕ್ಷಣದಲ್ಲೇ, ಅವರು ಯ
ದೂತರ ಹಾಗೆ ಬಂದು, ಗೋಪುರದಿಂದಿಳಿದು ಓಡಿ ಹೋ
ತ್ತಿರುವ ಬಾಚಿಗನನ್ನು ಹಿಡಿದು, ಕೆಂಪು ಬಣ್ಣದ ಹಗ್ಗಗಳಿಂ
ದ ಮುಷ್ಕೀ ಕಟ್ಟಿ, ಎಲಾ ತಲೆ ಹೋಕನೇ, ತಲೆ ಹೊಡಿಸಿ
ಕೋ ನಡಿ, ಎಂದು ತಳ್ಳಿದರು. ಆಗ ಬಾಚಿಕನು ಇದೇನಿರೈ
ಯ್ಯಾ, ಮೂರು ಮಂದಿ ಸರಿಯಾಗಿ ಬಂದಿದ್ದೀರಿ, ನನ್ನ ಮುಂ
ಗಡೆ ಒಬ್ಬನು, ಹಿಂದುಗಡೆ ಒಬ್ಬನು, ಇಬ್ಬರು ಸಾಲದೋ ?
ಸ್ಟನಡುವೆ ಮೂರನೆಯವನು ಯಾತಕ್ಕೆ ? ಹಿಡುಕೊಂಡು

ನೇತಾಡುವದಕ್ಕೋ? ನನ್ನ ರೆಟ್ಟಿಗೆ ವ್ಯರ್ಥವಾಗಿ ಈ ಹಗ್ಗ
ಳನ್ನು ಯಾತಕ್ಕೆ ಕಟ್ಟುತ್ತೀರಿ? ನೀವು ಮೂರು ಮಂದಿಯ
ಒಬ್ಬರಿಗೊಬ್ಬರು ಈ ಹಗ್ಗದಿಂದ ಹಿಂಗಟ್ಟು ಮುರಿ ಕಟ್ಟಿ ಕೊ
ಡು ಮುಂದೆ ನಡದರೆ ನಾನು ಹಿಂದೆ ಬರಲಾರೆನೋ? ಈ ಕೆಂ
ಹಗ್ಗಗಳು ರಾಯನ ಕೊರಳಿಗೆ ಬಿದ್ದರೆ ಬಲು ಚನ್ನಾಗಿ ನೋ
ಬಹುದು, ರಾಯನನ್ನು ನಾನು ಕಂಡು ಬಂದೆರಡು ಮಾತು ಕ
ಳ ಬೇಕೆಂದು ಇದ್ದೇನೆ, ನನ್ನ ಅಭಿಪ್ರಾಯವನ್ನು ಧೊರೆಗೆ ತಿ
ಸಿರಿ, ಆ ತರುವಾಯ ನೀವು ಮಾಡುವ ಕೆಲಸವನ್ನು ಮಾಡಿ
ಎಂದು ಭಯವಿಲ್ಲದೆ ಮಾತನಾಡಿದನು. ಅದನ್ನು ಆ ಮೂ
ಮಂದಿಯಲ್ಲಿ ಒಬ್ಬನು ರಾಯರಿಗೆ ವರದಿ ಮಾಡಿದನು. ಆ ವ
ತು ಕೇಳಿ ಆ ರಾಜನು ಅಪರಾಧಿಯನ್ನು ನಮ್ಮೆದುರಿಗೆ ತಂ
ನಿಲ್ಲಿಸಿರೆಂದು ಆಜ್ಞಾಪಿಸಲು, ಅದೇ ಪ್ರಕಾರ ರಾಜ ಸಭಾನು
ಟಪಕ್ಕೆದುರಾಗಿ ಬಾಚಿಕನು ಬಂದು ನಿಂತು, ಎಲೈ ಪ್ರಭುವೇ
ನನ್ನ ಹಿಂಭಾಗವು ನಿನಗೆ ಉದಯ ಕಾಲದಲ್ಲಿ ಕಾಣಿಸಿದ್ದರಿಂ
ನಿನಗೆ ಕೇಡೇನೂ ಸಂಭವಿಸಲಿಲ್ಲವಲ್ಲಾ, ನಿನ್ನ ಮುಖವನ್ನು
ನಾನು ನೋಡಿದ ಮಾತ್ರದಿಂದಲೇ ನನ್ನ ತಲೆ ಹೋಗುವ ಆಜ್ಞೆ
ಬಂತು, ಈಗ ಲಕ್ಷಣವಾದ್ದು ನನ್ನ ಕುಂಡೆಯೋ ನಿನ್ನ ಮು
ಡೆಯೋ ತಿಳಿದು ಹೇಳೆಂದನು. ಆ ಮಾತಿಗೆ ರಾಯನು ನಾಚಿ
ಪಟ್ಟು ನಕ್ಕು ಇವನು ಬಾಚಿಕನೆಂದರಿಯದೆ ಈ ನೀಚ ಯೊ
ಚನೆಯನ್ನು ಮಾಡಿದೆನು, ವ್ಯರ್ಥವಾಗಿ ಬ್ರಹ್ಮ ಹತ್ಯ ಬರುತ್ತಾ
ಇತ್ತು, ದೇವರು ತಪ್ಪಿಸಿದನೆಂದು ಪಶ್ಚಾತ್ತಾಪ ಪಟ್ಟು, ಎಕಚಕ್ರ
ಬಾಚಕನನ್ನು ಬಿಡಿಸಿ ಮನೆಗೆ ಕಳುಹಿಸಿದನು. ಈ ಪ್ರಕಾ
ಹಾಸ್ಯಗಾರರು ಮಾಡುವ ವಿನೋದಗಳಿಗೆ ಪ್ರಭುಗಳು ಸಂತೋ
ಷ ಪಡುವದಲ್ಲದೆ ಕೋಪ ಮಾಡುವದಿಲ್ಲ.

ಐವತ್ತೊಂಟನೇ ಕಥೆ.

ಗೀಜಿಗಹಕ್ಕಿಯೂ ಕೋತಿಯೂ.

ಬಂದು ನದೀ ತೀರದಲ್ಲಿ ಬಂದು ಮರದಲ್ಲಿ ಗೀಜಿಗಹಕ್ಕಿಯು ಗೂಡು ಕಟ್ಟಿ ಕೊಂಡು, ಹೆಣ್ಣು ಹಕ್ಕಿ ಮರಿಗಳು ಮೊಟ್ಟೆಗಳು ಸಹಿತ, ಸುಖದಿಂದ ಇತ್ತು. ಗೀಜಿಗನ ಗೂಡು ಬಲು ಯಕಟ್ಟಾದ್ದು. ಮೆತ್ತಗೆ ಉದ್ದವಾಗಿ ಗಟ್ಟಿಯಾಗಿರುವ ನಶೇ ಲ್ಲನ್ನು ಆದು ಕೊಂಡು ಬಂದು ಆ ಪಕ್ಷಿಯು ಮನುಷ್ಯರು ಾಪೆ ಮುಂತಾದವುಗಳನ್ನು ಹೆಣೆಯುವದಕ್ಕಿಂತ ಹೆಚ್ಚು ಚಕಮಕ್ಕರವಾಗಿ ಗೂಡನ್ನು ಹೆಣೆಯುವದು. ಆ ಗೂಡು ಮೂರು ಾಲ್ಕು ಪದರಗಳಾಗಿರುವದು. ಒಳಗೆ ಅಂತಸ್ತುಗಳೂ ಮೊಟ್ಟೆಗೆ ಮರಿಗಳಿಗೆ ಹೆಣ್ಣು ಹಕ್ಕಿಗೆ ತನಗೆ ಬೇರೆ ಬೇರೆ ಸ್ಥಳಗೊ ಅಲ್ಲಲ್ಲಿ ಹಾಸಿಗೆಗಳೂ ಸಹ ಮಾಡಿ ಇರುವವು. ಬಂೊಂದು ಅಂತಸ್ತಿಗೆ ಬಂದೊಂದು ಮಿಣಕು ಹುಳಗಳನ್ನು ಪ್ರಾದಿಂದ ತಂದು ತಗಿಲಿಸಿರುವದು. ಆ ಹುಳದ ಹಿಂಭಾಗದಲ್ಲಿ ಾವಾಗಲೂ ಮಿಂಚುವ ಬೆಳಕು ಈ ಪಕ್ಷಿಯ ಗೂಡಿಗೆ ರಾತ್ರಿಯಲ್ಲಿ ದೀಪವಾಗಿರುವದು. ಗೂಡಿನ ಕೆಳಗಡೆ ಇರುವ ದಾರಿಗೆ ಾಗಲು ಸಹ ಇರುವದು. ಅದು ಕೊಂಬು ಸೋರೇಕಾಯಿ ಾಜಿನ ಬುಡ್ಡಿ, ಗದೆ, ಇಂಥಾದ್ದರ ಹಾಗೆ ಇರುವದು. ಅದು ಮನ ಕೊಂಬೆಯಲ್ಲಿ ನೇತಾಡುತ್ತಾ ಇರುವದರಿಂದ ಘಾಳಿಗೆ ತೂಗುವದಲ್ಲದೆ ಹರಿದು ಬೀಳುವದಿಲ್ಲ. ಅದಕ್ಕೆ ಕೆಳಗಡೆ ದಾರಿ ರುವದರಿಂದ ಮಳೆಯ ಭಯವೂ ಇಲ್ಲ. ಇಂಥಾ ಗೂಡಿನಲ್ಲಿ ಈ ಕ್ಕಿಯು ತನ್ನ ಸಂಸಾರದೊಡನೆ ವಾಸವಾಗಿರುವಾಗ ಬಂದು ವಸ ದೊಡ್ಡ ಮಳೆ ಬಂತು. ಆ ಮಳೆಯೆಲ್ಲಿ ಬಂದು ಗಂಡು

ಕೋತಿ ಶಿಕ್ಕಿ ನೆನದು ಬಹಳ ಕಪ್ಪ ಪಟ್ಟು, ತಲೆ ಮರೆಸಿ ಕೊಳ್ಳುವದಕ್ಕೆ ಸ್ಥಳವಿಲ್ಲದೆ ಈ ಹಕ್ಕಿ ಗೂಡು ಮಾಡಿಕೊಂಡಿರುವ ಮರದ ಬುಡದಲ್ಲಿ ಬಂದು ಕೂತು ಕೊಂಡಿತು.

ಆಗ ತೂಗು ಮಂಚದ ಮೇಲೆ ತೂಗಾಡುವ ರಾಯನ ಹಾಗೆ ಗೂಡಿನಲ್ಲಿ ತೂಗಾಡುತ್ತಿರುವ ಈ ಗೀಜಿಗನು ಕೋತಿಯನ್ನು ಕಂಡು, ಓ ಕೋತಿಯೇ, ನಿಂಬೇಕಾಯಿಗಾತ್ರವಿರುವ ನನ್ನನ್ನು ನೋಡಿದಿಯಾ? ಈ ಮಳೆಗೂ ಘಾಳಿಗೂ ಭಯವಿಲ್ಲದ ಹಾಗೆ ಎಷ್ಟೋ ಚನ್ನಾಗಿ ಗೂಡು ಕಟ್ಟಿ ಕೊಂಡು ಸಂತೋಷದಿಂದ ತೂಗಾಡುತ್ತೇನೆ, ನಿನಗೆ ಮನುಷ್ಯರ ಹಾಗೆ ಕೈ ಕಾಲು ಬಲ ಬುದ್ಧಿ ಮಾತ್ರವಲ್ಲದೆ ಉದ್ದವಾದ ಬಾಲ ಸಹ ಇದೆ, ಇಷ್ಟು ಇದ್ದಾಗ್ಯೂ ಒಂದು ಗೂಡು ಕಟ್ಟಿ ಕೊಳ್ಳಲಾರದೆ, ಮಳೆಯಲ್ಲಿ ಶಿಕ್ಕಿ ಪೇಚಾಡುತ್ತಾ ಹಲ್ಲು ಕಿರಿಯುತ್ತೀ, ಸೋಮಾರಿಗಳಿಗೆ ಸುಖ ಉಂಟೋ? ಎಂದು ಗರ್ವದಿಂದ ನಿಂದಿಸಲು, ಕೋತಿಗೆ ಮಹಾ ಕೋಪ ಹುಟ್ಟಿ ತಕ್ಷಣದಲ್ಲೇ ಮರಾ ಹತ್ತಿ ಅದರ ಗೂಡನ್ನು ಕಿತ್ತು ಹರಿಯುವ ನೀರಿನಲ್ಲಿ ಬಿಸಾಡಿ ಬಿಟ್ಟಿತು. ಆಗ ಮೊಟ್ಟೆಗಳು ಮರಿಗಳು ಹುಟ್ಟು ಗೆಟ್ಟು ಹೋದದ್ದನ್ನು ಕಂಡು ಬಹು ದುಃಖ ಪಟ್ಟು, ಗೀಜಗವು ನ್ಯಾಯಾಧಿಪತಿಯ ಬಳಿಗೆ ಬಂದು ತನಗೆ ಕೋತಿ ಮಾಡಿದ ಅಪಕಾರವನ್ನೂ ತಾನು ಕೋತಿಗೆ ಹೇಳಿದ ಉಪಕಾರದ ಬುದ್ಧಿ ಮಾತನ್ನೂ ಸರಿಯಾಗಿ ತಿಳಿಸಿತು. ಆಗ ಹಿಡು ಕೊಂಡು ಬಾ ಕೋತಿಯನ್ನು ಎಂದು ಗದ್ದಿಸುವ ಅಧಿಕಾರಿಯ ಸಮೀಪಕ್ಕೆ ಭಯದಿಂದ ಬರುವ ಈ ಕೋತಿಯು ಮಾರ್ಗದಲ್ಲಿ ಫಲಿಸಿರುವ ಹಲಸಿನ ಮರದಲ್ಲಿ ಪಕ್ವವಾದ ದೊಡ್ಡ ಹಣ್ಣನ್ನು ಕಿತ್ತು ಹೊತ್ತು ಕೊಂಡು ಬಂದು ಅಧಿ

ಕಾರಿಯು ಹಿಂದುಗಡೆ ತಂದಿಟ್ಟು ಬಿಟ್ಟು ಮುಂದುಗಡೆಗೆ ಬಂದು ಕೂತು ವಿನಯದಿಂದ ಕೈ ಮುಗಿಯಲು, ಅಧಿಕಾರಿಯು ಎಲಾ ದುಷ್ಟ ಕೋತಿಯೇ, ಮಳೆಯಲ್ಲಿ ನೆನೆದು ಕಷ್ಟ ಪಡದ ಹಾಗೆ ಬಂದು ಮನೆ ಕಟ್ಟಿಕೋ ಬಾರದೇ ಎಂದು ಬುದ್ಧಿ ಕಲಿಸಿದ ಈ ಗೀಜಗನ ಮರಿಗಳು ಸಾಯುವ ಹಾಗೆ ಇದರ ಗೂಡನ್ನು ಕಿತ್ತು ಬಿಸಾಡಿದೆಯೋ ? ನಿನ್ನ ಕೈಯನ್ನು ಕತ್ತರಿಸುವದಲ್ಲದೆ ದೊಡ್ಡ ಬಾಚಿಯಿಂದ ಹಲಸಿನ ಕಾಯಿ ಕೆತ್ತಿ ಕೊತ್ತುವ ಹಾಗೆ ನಿನ್ನ ಮೈಯನ್ನು ಕೆತ್ತಿ ಕತ್ತರಿಸಿ ಚೂರು ಚೂರು ಮಾಡಿಸುತ್ತೇನೆ, ಎಂದು ಬೆದರಿಸಿದನು. ಕೋತಿ ಬುದ್ಧಿ ಬುದ್ಧಿ, ಸ್ವಾಮಿಯವರು ಹಿಂದು ಮುಂದು ನೋಡಿ ಮಾತಾಡ ಬೇಕೆಂದು ಹೇಳಲು, ನ್ಯಾಯಾಧಿಪತಿ ತನ್ನ ಹಿಂದುಗಡೆಗೆ ತಿರಿಗಿ ಹಲಸಿನ ಹಣ್ಣನ್ನು ಕಂಡು ಸಂತೋಷಿಸಿ, ಸಂಗಡಲೇ ಗೀಜಗಹಕ್ಕಿಯನ್ನು ನೋಡಿ, ಎಲೈ ಅಲ್ಪ ಜೀವಿಯೇ, ಹಿರಿಯರು ಕಿರಿಯರು ಎಂಬ ತಾರತಮ್ಯಗಳಿಲ್ಲದೆ ಬೆಟ್ಟವು ಹಣ್ಣಾದ ಹಾಗೆ ಇರುವ ಈ ಕೋತಿಯನ್ನು ಹುಟ್ಟಿ ಗರ್ವಿಯಾದ ನೀನು ನಿಂದಿಸಿ ಮಾತಾಡಿಸಿದ್ದು ಬಹಳ ಅನುಚಿತ. ಆದಾಗ್ಯೂ ಈ ಸರ್ತಿ ಈ ತಪ್ಪು ಮನ್ನಿಸಿ ಇದ್ದೇನೆ, ಇನ್ನು ಮೇಲೆ ಗರ್ವ ಪಡದೆ ಇರು, ಹೋಗೆಂದು ಕಳುಹಿಸಿ, ಕೋತಿಯನ್ನು ಮೆಚ್ಚಿ ಕೊಂಡನು. ಈ ಮೇರಿಗೆ ನ್ಯಾಯಾಧಿಪತಿಗಳು ಅಪ್ರಮಾಣಿಕರಾದರೆ ನೀತಿ ಕೆಟ್ಟು ಪ್ರಜೆಗಳಿಗೆ ಬಹು ಸಂಕಟ ಉಂಟಾಗುತ್ತದೆ.

ಐವತ್ತೊಂಭತ್ತನೇ ಕಥೆ.

ತೆನ್ನಾಲ ರಾಮು ಕೃಷ್ಣನು ಚಿತ್ರಿಸಿದ್ದು.

ನರಪತಿ ಕೃಷ್ಣರಾಯನು ಅನೇಕ ದ್ರವ್ಯವನ್ನು ಮುಟ್ಟಿ
ಭವನೇಶ್ವರಿ ಎಂಬ ದೊಡ್ಡ ಅರಮನೆಯನ್ನು ಕಟ್ಟಿಸಿ ಅ
ರ ತುಂಬಾ ಬುದ್ಧಿವಂತರಾದ ಚಿತ್ರಗಾರರಿಂದ ನಾನಾ ವಿ
ವಾದ ಭಾವ ಚಿತ್ರಗಳನ್ನು ಬರಿಸಿದನು. ಈ ಪ್ರಕಾರ ಚಿತ್ರ
ವಿಚಿತ್ರವಾದ ಅಲಂಕಾರಗಳಿಂದ ಸಂಪೂರ್ಣವಾಗಿ ಒಪ್ಪಿ ಇರು
ವ ಅರಮನೆಯನ್ನು ನೋಡುವದಕ್ಕಾಗಿ ರಾಯನು, ಮಂತ್ರಿ ಅ
ಪ್ಪಾಜಿ, ರಾಮಕೃಷ್ಣ ಕವಿ ಮುಂತಾದವರೊಡನೆ ಕೂಡಿ ಬಂದ
ಬಂದು ಕಡೆಯಿಂದ ಪಾಜ್ಜುವಾಗಿ ಆ ಚಿತ್ರಗಳನ್ನು ನೋಡು
ತ್ತಾ ಬರುವಲ್ಲಿ, ವಿಶೇಷವಾಗಿ ವಾಲಿ ಸುಗ್ರೀವರ ಚಿತ್ರವನ್ನು
ನೋಡುತ್ತಾ ನಿಂತನು. ಆಗ ವಿಕಟಕವಿ ರಾಮಕೃಷ್ಣನು
ರಾಯನನ್ನು ನೋಡಿ, ಎಲೈ ಮಹಾ ಪ್ರಭುವೇ, ಈ ಎರಡು ಪ್ರ
ತಿಮೆಗಳಿಗೂ ಬಂದೇ ಹೋಲಿಕೆಯಾದ ಅವಯವಗಳಿರುವದು
ಸರಿಯೇ, ಆದರೆ ಬಂದೊಂದಕ್ಕೆ ಎರಡು ಮೇರಿಗೆ ನಾಲ್ಕು ಕ
ಣ್ಣು ಇತ್ತೋ? ಅಲ್ಲದೆ ಇಲ್ಲಿ ಚಿತ್ರಿಸಿರುವ ಹಾಗೆ ವಾಲಿ ಸುಗ್ರೀ
ವರಿಬ್ಬರಿಗೂ ಬಟ್ಟೆಗೆ ಎರಡೇ ಕಣ್ಣಿತ್ತೋ? ಇದಲ್ಲದೆ ಇವರ
ಬ್ಬರಿಗೂ ಅರ್ಧಾರ್ಧ ಮುಖಗಳಾಗಿವೆ, ಕಡಮೆ ಅರ್ಧ ಮುಖ
ಭಂಗವಾಯಿತೋ ಏನು? ಅಂದನು, ಅದಕ್ಕೆ ರಾಯನು ನಕ್ಕು
ರಾಮಕೃಷ್ಣಾ, ನಿನಗೆ ಇಷ್ಟು ಮಟ್ಟಿಗೆ ತಿಳಿಯಲಿಲ್ಲವೋ? ಇ
ದು ಆ ಕಡೆ ಇರುವ ಭಾವವು. ಪೂರ್ಣ ಚಿತ್ರ ಅರ್ಧ ಚಿತ್ರ
ಇತ್ಯಾದಿ ಭಾವ ಚಿತ್ರಗಳ ಲಕ್ಷಣಗಳನ್ನು ನೀನು ತಿಳುಕೋ
ಬೇಕು ಅಂದನು. ರಾಮಕೃಷ್ಣನು, ಬುದ್ಧಿ, ಹಾಗೋ, ಅಪ್ಪ

ೀ ಪ್ರಕಾರಕ್ಕೆ ಇನ್ನು ಮೇಲೆ ತಿಳುಕೊಳ್ಳುತ್ತೇನೆ, ಎಂದು
ನಯದಿಂದ ಕೈ ಮುಗಿದನು. ಈ ಪ್ರಕಾರ ರಾಯನು ಆ
ವಸ ಅರಮನೆಯನ್ನೆಲ್ಲಾ ನೋಡಿ ಸಂತೋಷ ಪಟ್ಟನು. ಅ
ಂತರ ನಾಲ್ಕಾರು ತಿಂಗಳಾದ ಮೇಲೆ ಅವನು ಬಂದು ದಿವಸ ಸಂ
ೋಷವಾಗಿ ಕುಳಿತಿರುವ ರಾಯನ ಬಳಿಗೆ ಬಂದು ವಂದಿಸಿ ನಿಂ
ುಕೊಂಡು, ಮಹಾ ಪ್ರಭೋ, ಅನೇಕವಾದ ಭಾವ ಚಿತ್ರಗಳ
ಕ್ಷಣವನ್ನು ಪರಿಶೋಧಿಸ ಬೇಕೆಂದು ಸನ್ನಿಧಾನದಲ್ಲಿ ಅಪ್ಪಣೆ
ುವಾದ ಪ್ರಕಾರ ಚಿತ್ರಶಾಸ್ತ್ರವನ್ನೆಲ್ಲಾ ಓದಿದೆನು, ಇದು ಮಾ
ವೇ ಅಲ್ಲದೆ, ಪೂರ್ವಕ್ಕೆ ಬಾಣಾಸುರನ ಮಗಳಾದ ಉಷಾ
ನ್ನಿಕೆಗೆ ಚಿತ್ರರೇಖೆ ಎಂಬ ಸ್ನೇಹಿತಳು ಚಿತ್ರವನ್ನು ಬರದು
ೋರಿಸಿದ ಹಾಗೆ ಬಹಳ ಶ್ರಮ ಪಟ್ಟು ಬರೆಯ ಕಲಿತು ಇದ್ದೇ
, ಪರಾಂಬರಿಸ ಬೇಕೆಂದು ವಿನಯದಿಂದ ಬೇಡಿ ಕೊಂಡನು.
ವನ ಮಾತು ನಿಜವೆಂದು ರಾಯನು ನಂಬಿ ಆ ಹೊಸ ಅರಮ
ಗೆ ಬರಿಸಿ ಇರುವ ಚಿತ್ರವೆಲ್ಲಾ ಮಶಿಕಿ ಹೋಗಿ ಹಳೇದಾಯಿ
ು, ಅದನ್ನೆಲ್ಲಾ ಬರಸಿ ಬಿಟ್ಟು ಹೊಸದಾಗಿ ಯೋಗ್ಯವಾದ ಚಿ
ಗಳನ್ನು ವಿಚಿತ್ರವಾಗಿ ಬರದು ತೋರಿಸೆಂದು ಅವನಿಗೆ ಅ
ಪ್ಪಣೆ ಕೊಟ್ಟನು.

ಆಗ ರಾಮಕೃಷ್ಣನು ಇಷ್ಟೇ ಸಾಕೆಂದು ಆ ಭವನೇಶ್ವರಿ
ಂಬ ಹೊಸ ಅರಮನೆಗೆ ಹೋಗಿ ಮೊದಲ್ಲಿದ್ದ ಚಿತ್ರವನ್ನೆಲ್ಲಾ
ಂದೇ ದಿವಸದಲ್ಲಿ ಅಳಿಸಿ ಬಿಟ್ಟು, ಬೇಕಾದ ಬಣ್ಣದ ಸಾಮಾನು
ಳೆಲ್ಲಾ ಸಿದ್ಧ ಮಾಡಿ ಕೊಂಡು, ಹದಿನೈದು ದಿವಸದ ಪರಿಯಂತ
ವೂ ಒಬ್ಬನೇ ಒಳಗೆ ಶೇರಿಕೊಂಡು ಹೊರಗಿನ ಜನಗಳು ಬಾ
ದ ಹಾಗೆ ಬಾಗಲು ಭದ್ರಪಡಿಸಿ ಬರಿಯುವದಕ್ಕೆ ಪ್ರಾರಂಭಿಸಿ,

ಒಂದು ಕಡೆ ಉಗುರು, ಒಂದು ಕಡೆ ಬೆರಳು ಹಾಗೆಯೇ ಹೆಬ್ಬೆ
ಗಳು, ಗಿರಿಕೆ, ಮೇಗಾಲು, ಕೆಳಕಾಲು, ಮೊಣಕಾಲು, ತೊಡೆ
ನಡುವು, ಹೊಕ್ಕಳು, ಹೊಟ್ಟೆ, ಬರ್ರೆಗಳು, ಎದೆಕಟ್ಟು, ಕೊರಳ
ಹೆಗಲುಗಳು, ತೋಳುಗಳು, ಮೊಣ ಕೈಯ್ಯಿ, ಮುಂಗೈಯ್ಯಿ
ಹಿಂಗೈ, ಅಂಗೈ, ಕೈ ಬೆರಳು, ಕೈ ಉಗುರು, ಗಡ್ಡ, ಕೆನ್ನೆ
ತುಟಿ, ಹಲ್ಲು, ವಿಾಶೆಗಳು, ಕೋರೆಗಳು, ಬಾಯಿ, ನಾಲಿಗೆ
ಮೂಗು, ಮೂಗಿನ ಸೊಳ್ಳೆ, ರೆಪ್ಪೆಗಳು, ಕಣ್ಣುಗಳು, ಹುಬ್ಬು
ಗಳು, ಕಿವಿಗಳು, ಕಪಾಳ, ಹಣೆ, ಮುಂಗುರುಳು, ಕೂದಲ
ಜಡೆಗಂಟು, ತುರುಬು, ಈ ಮುಂತಾದ ಅವಯವಗಳು ಪೂರ್ಣ
ವಾಗಿ ಪೂರ್ಣವಾಗಿ ಇರದೆ ಅಲ್ಲೊಂದು ಇಲ್ಲೊಂದು ಅರೆಗೆ
ಸವಾಗಿ, ತಿರುಪತಿ ನಾಯಂದನು ತಲೆ ಬೋಳಿಸುವ ಹಾಗೆ, ಚ
ಚ್ಚು ಹುಚ್ಚಾಗಿ ಬರದು ತನ್ನ ಅಕಟ ವಿಕಟ ಚಿತ್ರದಿಂದ ಅರಮ
ನೆಯನ್ನೆಲ್ಲಾ ತುಂಬಿಸಿ, ಇಪ್ಪತ್ತು ದಿವಸದ ಮೇಲೆ ರಾಯನ
ಳಿಗೆ ಬಂದು ವಂದನೆ ಮಾಡಿ, ಬುದ್ಧಿ ಮಹಾ ಪ್ರಭೋ, ಅಪ್ಪಣೆ
ಪ್ರಕಾರ ವಿಚಿತ್ರವಾದ ಭಾವ ಚಿತ್ರಗಳಿಂದ ತುಂಬಿದ ಭವನೇ
ಶ್ವರಿ ಎಂಬ ಅರಮನೆಯು ಶೋಭಾಯಮಾನವಾಗಿ ಇದೆ,
ತ್ತೈಸಿ ಪರಾಂಬರಿಸ ಬೇಕೆಂದನು.

ಆಗ ರಾಯನು ಪರಿವಾರ ಜನ ಸಹಿತವಾಗಿ ಸಂತೋಷದಿ
ಅರಮನೆಗೆ ಬಂದು, ಅಲ್ಲಿ ಬರದಿರುವ ಹುಚ್ಚು ಹುಚ್ಚಾ
ಅಕಟ ವಿಕಟದ ಚಿತ್ರವನ್ನು ನೋಡಿ, ಕೋಪದಿಂದ ಎಲಾ ಚ
ಚನೇ, ಅರಮನೆಯನ್ನೆಲ್ಲಾ ಕೆಡಿಸಿ ಬಿಟ್ಟ್ಯಲ್ಲಾ, ಇಂಥಾ ಕ
ಗೇಡಿಯಾದ ನಿನ್ನನ್ನು ಏನು ಮಾಡಿದರೆ ದುಃಖ ತೀರುವ
ಎಂದು ತಗಲಿ ಕೊಂಡನು. ಅದಕ್ಕೆ ಭಯ ಪಡದೆ ವಿಕಟಕ

ಯು ಎದುರಾಗಿ ನಿಂತು ಕೈ ಮುಗಿದು, ಮಹಾ ಪ್ರಭುವೇ, ನಾನು ಬರೆದಿರುವ ಚಿತ್ರಗಳ ಪೂರ್ಣ ಭಾವಗಳೆಲ್ಲಾ ಹಿಂ ಮುಗಡೆಯಾಗಿರುವದು. ಆರು ತಿಂಗಳಿಗೆ ಮುಂಚೆ ಅರ್ಧ ಮು ಖದ ಚಿತ್ರವನ್ನು ನೋಡಿ ನಾನು ಅರಿಕೆ ಮಾಡಿದ್ದಕ್ಕೆ ಅದು ಅ ತ್ಯಕಡೆಯ ಭಾವವೆಂದು ಅಪ್ಪಣೆ ಕೊಟ್ಟದ್ದನ್ನು ಜ್ಞಾಪಕಕ್ಕೆ ತಂದು, ನನ್ನ ತಪ್ಪುಗಳನ್ನೆಲ್ಲಾ ಮನ್ನಿಸ ಬೇಕೆಂದನು. ಆಗ ರಾಯನು ನಕ್ಕು ಸುಮ್ಮನೆ ಆದನು. ಇದೇ ವಿಕಟಕವಿಗಳ ಲಕ್ಷಣವು.

ಅರವತ್ತನೇ ಕಥೆ.

ರಾಮಕೃಷ್ಣನು ತಲೆ ಮರಸಿ ಕೊಂಡದ್ದು.

ಅದೇ ರಾಮಕೃಷ್ಣ ಕವಿಯು ವಿನೋದಾರ್ಥವಾಗಿ ದಿನ ಒಂ ದಕ್ಕೆ ನೂರು ತಪ್ಪುಗಳು ಮಾಡಿದಾಗ್ಯೂ ಮನ್ನಿಸುವದಾಗಿ ಅ ರಸಿಗೆ ರಾಯನು ಮಾತು ಕೊಟ್ಟದ್ದರು. ಆ ಧೈರ್ಯದಿಂದಲೇ ರಾಯನು ಸಹಿಸ ಕೂಡದ ತಪ್ಪುಗಳನ್ನು ಸಹ ಅವನು ಹಾಸ್ಯ ಕರನೆಂಬ ನೆವದಿಂದ ಭಯವಿಲ್ಲದೆ ಮಾಡುತ್ತಿರುವನು. ಹೀ ರುವ ರಾಮಕೃಷ್ಣ ಕವಿಯನ್ನು ಸ್ವಲ್ಪ ಭಯದಿಂದಿರುವ ತಾಗೆ ಮಾಡಬೇಕೆಂದು ರಾಯರ ಮಂತ್ರಿ ಅಪ್ಪಾಜಿಯು ಆಲೋ ಚಿಸಿ, ರಾಮು ಕೃಷ್ಣನನ್ನು ತನ್ನ ಮನೆಗೆ ಅಂತರಂಗವಾಗಿ ಕ ರೆಸಿ, ಅಯ್ಯಾ ವಿದ್ವಾಂಸನೇ, ನೀನು ಮಹಾ ಸಮರ್ಥನು ಹೌ ದು, ಆದಾಗ್ಯೂ ಅಲಂಕಾರವಾಗಿಯೂ ಯೋಗ್ಯವಾಗಿಯೂ ರುವ ಭವನೇಶ್ವರಿ ಎಂಬ ಅರಮನೆಯ ಚಿತ್ರವನ್ನು ನೀನು

ಕೆಡಿಸಿ ಬಿಟ್ಟು, ಯದ್ವಾತದ್ವಾ ಕೋತಿಗೀಟುಗಳು ಕೊಂಗರಿ ಗೀ
ಟುಗಳು ಬರದಿಟ್ಟಿಯಲ್ಲಾ, ಅದರಿಂದ ರಾಯರು ನಿನ್ನ ಮೇ
ಬಹಳ ಕೋಪವಾಗಿದ್ದಾರೆ, "ಅರಸನ ಚಿತ್ತವು ಮುರದ ನೆರಳ
ಎಂಬುವ ಹಾಗೆ ಧೊರೆಗಳ ಚಿತ್ತವು ಒಂದು ಪ್ರಕಾರವಿರುವದೀ
ಹ್ಯಾಗೆ ಹೋಗಿ ಹ್ಯಾಗೆ ಬರುವದೋ ತಿಳಿಯದು, ಆದಕಾರ
ರಾಯರಿಗೆ ನಿನ್ನ ಮೇಲೆ ಹುಟ್ಟಿರುವ ಕೋಪ ಶಾಂತವಾಗಿ ರಾ
ಕೃಷ್ಣನು ಎಲ್ಲೆಂದು ಪ್ರೀತಿಯಿಂದ ನಿನ್ನನ್ನು ಕರಿಸುವ ಪರಿಯ
ತರಕ್ಕೂ ನೀನು ರಾಯರ ದೃಷ್ಟಿಗೆ ಬೀಳದೆ ಅಯಿದಾರು ದಿವ
ತಲೆಮರೆಯಾಗಿ ಇರು, ಎಂದು ಹೇಳಿದನು. ಆ ಮಾತನ್ನು ಕ
ಳಿ ರಾಮಕೃಷ್ಣನು, ಸ್ವಾಮಿಾ, ನಾನು ಅಂಥಾ ದೊಡ್ಡ ತಪ್ಪು
ನೂ ಮಾಡಲಿಲ್ಲ, ಆದಾಗ್ಯೂ ತಮ್ಮ ಅಪ್ಪಣೇ ಪ್ರಕಾರ ನಡೀ
ಬೇಕಾದ್ದೇ ಯುಕ್ತವೆಂದು ಹೇಳಿ ತನ್ನ ಮನೆಗೆ ಬಂದು,
ಮರುದಿವಸ ಒಂದು ಬಾನಿಗೆ ಎರಡು ತೂತು ಕೊರದು ಆ
ಧ್ರಗಳಿಂದ ಕಣ್ಣು ಕಾಣುವ ಹಾಗೆ ಮಾಡಿಕೊಂಡು, ಆ ಬಾ
ಯನ್ನು ತಲೇ ಮೇಲೆ ಕವಿಚಿ ಕೊಂಡು, ಮೈಗೆಲ್ಲಾ ಈ
ಲು ಬಾಪೆ ತುಂಡುಗಳು ಸುತ್ತಿಕೊಂಡು, ಬೀದಿ ಬೀದಿ ತಿ
ಲಾರಂಭಿಸಿದನು. ಅವನು ರಾಮಕೃಷ್ಣನೆಂದು ಒಬ್ಬರಿಗೂ ತಿ
ಯದೆ ಇತ್ತು. ಇದೇ ವೇಷದಿಂದ ಅವನು ಆ ದಿವಸ ದರ
ರಿನ ಹೊತ್ತಿನಲ್ಲಿ ರಾಜ ಸಭೆಯ ಮುಂದೆ ಬಂದು ನಿಂತ
ಆಗ ಇಂಥಾ ವಿಕಾರ ವೇಷದಿಂದ ಸ್ವಲ್ಪವಾದರೂ ಭಯ
ಕೋಚಗಳಿಲ್ಲದೆ ಸಭೆಗೆದುರಾಗಿ ನಿಲ್ಲುವ ಧೈರ್ಯವು ರಾಮ
ಷ್ಣನಿಗೆ ಹೊರ್ತು ಮತ್ತೊಬ್ಬರಿಗೂ ಇಲ್ಲವೆಂದೂಹಿಸಿ ರಾಯ
ನೀನ್ಯಾರು? ರಾಮಕೃಷ್ಣನೋ? ಎಂದು ವಿಚಾರಿಸಲು, ಆ

ು ಮಹಾ ಪ್ರಭೋ, ಹೌದು, ಆಜ್ಞಾಧಾರಕನು ಸನ್ನಿಧಾನದಲ್ಲಿ
ಾಜರಾಗಿದ್ದೇನೆಂದು ಘಟ್ಟಿಯಾಗಿ ಕೂಗಿ ಹೇಳಿದನು. ಅದ
ಕ್ಕೆ ಮಹಾ ದಯಾಳುವಾದ ರಾಯರು ಯಾಕೆ ಹೀಗಿದ್ದೀ
ಂದು ಕೇಳಲು, ತಲೆ ಮರೆಯಾಗಿರು ಎಂದು ಅಪ್ಪಾಜಿಯವರ
ಪ್ಪಣೆ ಆಯಿತು, ನಾನು ತಲೆ ಮಾತ್ರವೇ ಅಲ್ಲದೆ ಮೈಯೆಲ್ಲಾ ಸಹ
ುರಿಸಿ ಕೊಂಡಿದ್ದೇನೆ, ಯಾವ ತಪ್ಪಿದ್ದರೂ ಮನ್ನಿಸಿ ಕಾಪಾಡ
ೀಕೆಂತ ಬೇಡಿ ಕೊಳ್ಳುತ್ತೇನೆ, ಎಂದನು. ರಾಯರು ತಕ್ಷಣ
ಲ್ಲೇ ಆ ವಿಕಾರ ವೇಷವನ್ನು ತೆಗಿಸಿ ಬಹುಮಾನ ಮಾಡಿ,
ಪ್ಪಾಜಿಯನ್ನು ನೋಡಿ ಹೀಗೆ ಯಾಕೆ ಹೇಳಿದಿ ಎಂದು ಕೇಳಿ
ಕ್ಕೆ, ಅಪ್ಪಾಜಿಯು ನಾನು ಬಂದು ಹೇಳಿದರೆ ಎರಡು ಮಾಡಿ
ವನೆ, ಸರ್ವಜ್ಞ ಚಿತ್ತವೆಂದು ರಾಯರನ್ನು ಸಮಾಧಾನ ಪಡಿಸಿ
ನು. ಎಲ್ಲರೂ ಸಂತೋಷ ಪಟ್ಟರು. ಹೀಂಗೆ ರಾಮಕೃಷ್ಣ
ು ಮಾಡಿದ ವಿನೋದಗಳು ಅನೇಕ ಉಂಟು.

ಅರವತ್ತೊಂದನೇ ಕಥೆ.

ರಾಯರ ಚಿತ್ತದ ಪರಿಕ್ಷೆ.

ತೆನ್ನಾಲರಾಮಕೃಷ್ಣನು ಒಂದು ದಿವಸ ರಾಯರ ಸಭೆಯಲ್ಲಿ
ುಳಿತು ಕೊಂಡಿದ್ದು ತನ್ನ ಮೇಲೆ ರಾಯರ ದೃಷ್ಟಿಯು ಪೂರ್ಣ
ಾಗಿ ಬಿದ್ದ ಸಮಯದಲ್ಲಿ ಹುಸ್ಸೆಂದು ನಿಟ್ಟುಸುರು ಬಿಟ್ಟು ಜೋ
ು ಮುಖ ಬೇಳ ಮಾಡಿಕೊಂಡನು. ಹೀಗಿರುವ ರಾಮಕೃ
ಷ್ಣನ ಮುಖ ಭಾವವನ್ನು ನೋಡಿ ರಾಯರು, ರಾಮಕೃಷ್ಣಾ,
ಯಾತಕ್ಕೆ ಬಹಳ ವ್ಯಸನಾಕ್ರಾಂತನಾಗಿದ್ದೀಯೆ? ಮನಸ್ಸಿನಲ್ಲಿ

ಇರುವ ಕೊರತೆಯನ್ನು ತಿಳಿಸು, ನಿನ್ನ ಕೋರಿಕೆ ಕೈ ಗೂ
ಬರುವ ಹಾಗೆ ಮಾಡುವೆವು, ಎಂದನು. ರಾಮಕೃಷ್ಣನು
ಯ್ಯಾ, ನನ್ನ ಮನಸ್ಸಿನಲ್ಲಿರುವ ಕೊರತೆಯನ್ನು ಸನ್ನಿಧಾನ
ಲ್ಲಿ ಅರಿಕೆ ಮಾಡದೆ ಮತ್ತ್ಯಾರ ಸಂಗಡ ಹೇಳಲಿ, ಚಿತ್ತಕ್ಕೆ ತ
ಬೇಕು, ನಿನ್ನೀ ದಿವಸ ಹೊತ್ತು ಹೋಗದೆ ನನ್ನ ಜಾತಕ
ವಹಿಯನ್ನು ಓದಿ ನೋಡುತ್ತಾ ಇದ್ದೆನು, ಅದರಲ್ಲಿ ನನ್ನ ಆಯ
ರ್ದಾಯಕ್ಕೆ ಸೂರ್ಯ ಚಂದ್ರ ಗ್ರಹಗಳು ಎರಡೂ ವಕ್ರಿಸಿ ಇ
ಮತ್ತೂ ರಾಜದೃಷ್ಟಿಯು ಸಂಪೂರ್ಣವಾಗಿ ನನ್ನ ಮೇಲೆ ಎಂ
ಬೀಳುತ್ತದೋ ಆ ತರುವಾಯ ಬಹಳ ದಿವಸ ಬದುಕಲಾರೆನೆಂ
ಸೂಚನೆ ಉಂಟಾಗಿದೆ, ಈ ದಿವಸ ಆಳಿದ ಮಹಾ ಸ್ವಾಮಿಯವ
ಸಂಪೂರ್ಣ ದೃಷ್ಟಿ ನನ್ನ ಮೇಲೆ ಬಿದ್ದದ್ದ ನೋಡಲಾಗಿ ಜಾ
ಕದಲ್ಲಿ ಬರದಿರುವ ಫಲವು ತಾರ್ಕ್ಷಣಿಕೆ ಬಂತು "ಜಾತಸ್ಯ ವ
ರಣಂಧ್ರುವಂ" ಅಂದರೆ ಹುಟ್ಟಿದವನಿಗೆ ಸಾವು ನಿಶ್ಚಯವೇ ಸರಿ
ಪ್ರಾಣಿಗಳಿಗೆಲ್ಲಾ ಸ್ವಭಾವ ಸಿದ್ಧವಾಗಿ ಉಂಟಾದ ಮರಣಕ್ಕೆ ನ
ನು ಅಂಜುವದಿಲ್ಲ, ಆದರೆ ನನ್ನ ತರುವಾಯ ನನ್ನ ಕುಟುಂಬ
ನ್ನು ನನ್ನ ಹಾಗೆ ಯಾರು ಸಂರಕ್ಷಣೆ ಮಾಡ್ಯಾರು? ನನ್ನ ಮೇ
ಹ್ಯಾಗೆ ಉದ್ಧಾರವಾದೀತು? ಎಂಬ ಯೋಚನೆ ಹಿಡಿದದೆ, ಎಂದ
ಸುಳ್ಳು ಸುಳ್ಳಾಗಿ ಕಣ್ಣುಗಳಲ್ಲಿ ನೀರು ಬಿಟ್ಟನು. ಆಗ ರಾಯನ
ರಾಮಕೃಷ್ಣಾ, ಯಾಕೆ ವ್ಯಸನ ಪಡುತ್ತೀ? ಅಂಥಾ ಆಪತ್ತು
ನಿನಗೆ ಬರಲೀ ಬೇಡ, ಮನುಷ್ಯನಾದ್ದರಿಂದ ಬಂದು ಮೇಳೆ ಬಂದ
ಗ್ಯೂ ನಿನ್ನ ಕುಟುಂಬವನ್ನು ನೀನಿದ್ದದ್ದಕ್ಕಿಂತಲೂ ಹೆಚ್ಚಾಗಿ
ಪರಾಂಬರಿಸಿ ಕಾಪಾಡುವೆನು, ಇದಕ್ಕಾಗಿ ನೀನು ಯೋಚನೆ
ಮಾಡ ಬೇಡವೆಂದು ಭರವಸ ಹೇಳಿದನು. ರಾಮಕೃಷ್ಣನು

ನ್ನ ವ್ಯಸನ ಹೋಯಿತೆಂದು ಎದ್ದು ಕೈ ಮುಗಿದನು. ತರು
ಾಯ ಮರುದಿವಸದಿಂದ ರಾಮಕೃಷ್ಣನ ಶರೀರಕ್ಕೆ ಸ್ವಸ್ಥವಿಲ್ಲ
ಂಬಂದಾಗಿ ರಾಯರ ಮಟ್ಟಿಗೂ ವರ್ತಮಾನ ಮುಟ್ಟುವ ಹಾಗೆ
ೀಪಜ ಮಾಡಿ, ಸಭೆಗೆ ಹೋಗದೆ ಮನೆಯೊಳಗೆ ಇದ್ದು ಕೊಂ
ಬು, ತನ್ನ ದ್ರವ್ಯವನ್ನೆಲ್ಲಾ ಬೇರೊಂದು ಕಡೆ ಭದ್ರ ಪಡಿಸಿ
ಪುಸ್ತಕ ಮುಂತಾದ ಕೆಲವು ಸಾಮಾನುಗಳನ್ನು ದೊಡ್ಡ ದೊಡ್ಡ
ಪೆಟ್ಟಿಗೆಗಳಿಗೆ ತುಂಬಿ ಬೀಗ ಮುದ್ರೆ ಮಾಡಿ, ಅವುಗಳಿಗೆ ದ್ರವ್ಯದ
ಪೆಟ್ಟಿಗೆಗಳೆಂದು ಮೇಲು ವಿಳಾಸಗಳು ಬರದಿಟ್ಟು, ತಾನು ಒಂದು
ಪೆಟ್ಟಿಗೆಯೊಳಗೆ ಉಸರಾಡುವದಕ್ಕೆ ಆಯಕಟ್ಟು ಮಾಡಿ ಶೇರಿ
ಸೊಂಡು ಅದಕ್ಕೆ ರತ್ನದ ಪೆಟ್ಟಿಗೆ ಎಂದು ವಿಳಾಸ ಪಾಕ ಹೇಳಿ,
ಾನು ತೀರಿ ಹೋದನೆಂಬ ಪ್ರಕಾರು ಹುಟ್ಟಿಸಿದನು. ಆಗ
ಾಯನು ವ್ಯಸನಪಟ್ಟು ಸಾಯಂಕಾಲವಾಗುತ್ತಲೇ "ಅರಸನಿ
ಿ ಹಣದಾಶೆ" ಎಂಬ ಸಾಮತಿಗೆ ಸರಿಯಾಗಿ ರಾಮಕೃಷ್ಣನ
ುನೆಯಲ್ಲಿ ಬಹಳ ಹಣವಿರುವದೆಂದೆಣಿಸಿ, ಕಲಾಸೀ ಕಾವಾಟ
ಳುಗಳನ್ನು ಅಲ್ಲಿಗೆ ರಹಸ್ಯವಾಗಿ ಕಳುಹಿಸಿ, ಆ ಮೇಲು ವಿಲಾ
ದ ಪೆಟ್ಟಿಗೆಗಳನ್ನೆಲ್ಲಾ ಅರಮನೆಗೆ ತರಿಸಿದನು. ಅದರೊಳಗೆ
ಾಮಕೃಷ್ಣನು ಶೇರಿಕೊಂಡು ಇದ್ದ ಪೆಟ್ಟಿಗೆ ಬಹಳ ಭಾರವಾಗಿ
ದ್ದರಿಂದ ಇದರಲ್ಲಿ ಬಹಳ ರತ್ನಗಳಿರುವದೆಂದು ಸಾಲಿನಲ್ಲಿ ಮೊ
ಲನೇ ಪೆಟ್ಟಿಗೆಯಾಗಿ ರಾಯನ ಮುಂದುಗಡೇಲಿ ಇಟ್ಟರು.

ಆಗ ರಾಯನು ಜಾಗ್ರತೆಯಾಗಿ ಆ ಪೆಟ್ಟಿಗೆಯ ಮುಚ್ಚಳವ
ನ್ನು ತೆಗಿಸಲು, ಜಯೂ ವಿಜಯೀ ಭವ ಎಂದು ಎದ್ದು ನಿಂತು
ಕೊಂಡ ರಾಮಕೃಷ್ಣನನ್ನು ನೋಡಿ, ರಾಯನು ಕಡುನಾಚಿಕೆ
ಯಿಂದ ರಾಮಕೃಷ್ಣಾ, ನೀನು ಸತ್ತು ಹೋದಿ ಎಂದು ವರ್ತ

ಮಾನ ಕೇಳಿದೆವಲ್ಲಾ, ಎಂದು ಉಪಚಾರ ಹೇಳಿದನು. ರಾಮ
ಕೃಷ್ಣನು ಪ್ರಭುವೇ ನಿಮ್ಮನ್ನು ನಂಬಿ ಸಾಯ ಬಹುದೋ
"ಬುಡ್ಡಿಯನ್ನು ನಂಬಿ ಹೊಳೆಯಲ್ಲಿ ಬೀಳ ಬಹುದೋ"
ಮ್ಮಂಥಾ ಪ್ರಭುವೇನೋ ನನ್ನ ಕುಟುಂಬವನ್ನು ಸಂರಕ್ಷ
ಮಾಡತಕ್ಕವರು, ಹಾಗಿದ್ದರೆ "ಧರ್ಮೋವನಂತರ್ಗತಃ" ಅಂ
ಧರ್ಮವು ಅಡವಿ ಪಾಲಾಯಿತೆಂಬ ನೀತಿ ವಾಕ್ಯವು ಯಾಕೆ ಕ
ಟ್ಟುವದು? ಆ ವಾಕ್ಯವೇ ನಿಜವು, ನಿಮ್ಮ ಮಾತೇ ಸುಳ್ಳು, ನನ್
ಮಾತು ಸುಳ್ಳೋ ನಿಜವೋ ಅಪ್ಪಣೆಯಾಗ ಬೇಕೆಂದನ
ಆಗ ಅರಸನಿಗೆ ಬಹಳ ನಾಚಿಕೆ ಉಂಟಾಗಿ ಆತನು ಅಪಕೀರ್ತಿ
ಬಂತೆಂಬ ಭಯದಿಂದ ರಾಮಕೃಷ್ಣನಿಗೆ ಬಹುಮಾನ ಮಾ
ಸಾವಾನು ಸಹ ಮನೆಗೆ ಕಳುಹಿಸಿ ಕೊಟ್ಟನು. ಹೀಗೆ ಹ
ಸಂಪಾದಿಸುವ ವಿಷಯದಲ್ಲಿ ಅಧರ್ಮಕ್ಕೆ ಬೀಳುವ ಅರಸುಗಳ
ಅಪಕೀರ್ತಿ ತಪ್ಪುವದಿಲ್ಲ.

ಅರವತ್ತೈರಡನೇ ಕಥೆ.

ಮೂಗುಹರಕನನ್ನು ಕುರಿತದ್ದು.

ಒಂದಾನೊಂದು ಕಾಲದಲ್ಲಿ ಮುಕ್ಕಡಿ ತಿಮ್ಮನೆಂಬ ಬಿ
ಮೂಗು ಹರಕ ನಿದ್ದನು. ಅವನು ಯವ್ವನದಲ್ಲಿ ದೂರ ದೇ
ಸಂಚಾರ ಮಾಡುತ್ತಾ ಇರುವಾಗ, ಎಲ್ಲೋ ಏನೋ ಕೆಟ್ಟ ಕ
ಸ ಮಾಡಿದ್ದರಿಂದ ಯಾರೋ ಹಿಡಿದು ಮೂಗು ಹತ್ತ ಕೊಯಿ
ಹಾಕಿ ಬಿಟ್ಟರು. ಆಗ ಅವನು ಇನ್ನು ಮೇಲೆ ನಾನೆಲ್ಲಿ ಹೋ
ರೂ ಮಾನಕ್ಕೆ ಕಡಿಮೆಯಾಗುವದೆಂದು ತಾನಿರುವದಕ್ಕೆ ತ

ಊರನ್ನು ಹುಡಿಕಿ ಈ ಮೂಗಿದ್ಯಾವನಪುರಕ್ಕೆ ಬಂದು ಶೇರಿ
ನು. ಆ ಊರಲ್ಲಿ ಇರುವ ಜನಗಳು ಓದು ಬರಹಾ ತಿಳಿಯವ
ಮೂಢರಾಗಿದ್ದರು. ಅಂಥಾ ಊರಿನಲ್ಲಿ ಇವನು ಬಂದು ಶೇರ
ಯ, ಅವರು ಇವನ ಹರದ ಮುಕ್ಕಡಿ ಮೂಗನ್ನು ನೋಡಿ,
ಮೂಗು ಹರಕ ಮುಕ್ಕಡಿತಿಮ್ಮನೆಂದು ಹೆಸರಿಟ್ಟು ಕರೆಯುವ
ಲ್ಲದೆ ಬಹಳವಾಗಿ ಅಪಹಾಸ್ಯದ ಮಾತುಗಳು ಆಡಸಾಗಿದರು.

ಆಗ ಅವನು ‘ರಾಮೇಶ್ವರಕ್ಕೆ ಹೋದರೂ ಶನೇಶ್ವರ ಬಿಡ
ಲಿ’ ಎಂಬ ಗಾದೆಗೆ ಸರಿಯಾಗಿ ನಾನೀ ಹಳ್ಳಿಗಾಡಿನಲ್ಲಿ ಬಂದು ಶೇ
ರಿದಾಗ್ಯೂ ನನಗೆ ಮೂಗು ಹರಕ ಮುಕ್ಕಡಿತಿಮ್ಮನೆಂಬ ಹೆಸರು
ತಪ್ಪದೆ ಹೋಯಿತಲ್ಲಾ, ಈ ಹೆಸರು ಈ ಊರಿನಲ್ಲಿ ತಪ್ಪಿ ಹೋ
ಗುವ ಹಾಗೆ ಏನಾದರು ಬಂದು ಹುನ್ನಾರ ಹುಡುಕ ಬೇಕೆಂದು
ತೋಚಿಸಿ ಹೊತ್ತು ಹುಟ್ಟುವಾಗ್ಯೆ ಎದ್ದು ನಡುಬೀದಿಯಲ್ಲಿ
ನಿಂದು ನಿಂತುಕೊಂಡು, ತಲೇ ಎತ್ತಿ ಆಕಾಶವನ್ನು ನೋಡುತ್ತಾ,
ಓ ಲೋಕ ಕರ್ತನೇ, ದೇವರೇ, ಬಹು ದಿವಸದಿಂದ ಈ ಪ್ರಪಂ
ಚದ ಮಾಯೆಯಲ್ಲಿ ಬಿದ್ದು ಮೇಲಕ್ಕೆ ಏಳಲಾರದೆ ಒದ್ದಾಡು
ತ ನನ್ನನ್ನು ಉದ್ಧಾರ ಮಾಡು, ನಿನ್ನ ಸೇವೆಯನ್ನು ಮಾಡಿ
ತಿಟ್ಟಿಸುವದಕ್ಕೆ ಈ ಅಲ್ಪ ಮನುಷ್ಯನಾದ ನಾನು ಶಕ್ತನಲ್ಲ,
ಸರ್ವ ಶಕ್ತನಾದ ನೀನೇ ನನ್ನನ್ನು ಕನಿಕರಿಸಿ ಕಾಪಾಡ ಬೇ
ಕೆಂದು ಮೈ ನಡುಗುತ್ತಾ ಆನಂದ ಬಾಷ್ಪ ಬಿಡುತ್ತಾ ಅಂದರೆ
ಕಣ್ಣಲ್ಲಿ ನೀರು ಸುರಿಸುತ್ತಾ ಡಗ್ಗುತ್ತಿಗೆಯಿಂದ ದಪ್ಪವಾದ ಗಂ
ಟಲನಲ್ಲಿ ಗದ್ಗದಸ್ವರವನ್ನು ಹೊರಡಿಸುತ್ತಾ, ಅಳುಕು ಬೆಳಕುಗ
ಳನ್ನು ತೋರಿಸಿ, ತಾನು ಮಾಡುವ ಸ್ತೋತ್ರಕ್ಕೆ ದೇವರು ಪ್ರ
ತ್ಯಕ್ಷವಾದ ಹಾಗೆ ನಿನ್ನ ಪಾದಕ್ಕೆ ಶರಣು ಶರಣು ಎಂದು ಅಡ್ಡಿ

ಬೀಳುತ್ತಾ, ಎದ್ದು ನಿಂತು, ಸುತ್ತಲಿರುವ ಜನಗಳನ್ನು ನೋ
ದೇವರನ್ನು ನೋಡಿರಿ, ಕೊಂಡಾಡಿರಿ, ಸ್ತೋತ್ರ ಮಾಡಿರಿ, ಆ
ಪಾಡಿ ಬೇಕಾದ ವರಗಳನ್ನು ಬೇಡಿರಿ, ವ್ಯರ್ಥವಾಗಿ ಕಾಲ ಕ
ಯ ಬೇಡಿರಿ, ಎಂದು ಪ್ರತಿನಿತ್ಯವೂ ಅವರನ್ನು ಭ್ರಮೆ ಪಡಿ
ತ್ತಾ, ಮಾಯವಾದಿತನವನ್ನು ತೋರಿಸುತ್ತಾ ಬರಲು; ಕೂ
ಬಂದ ಮೂಢರೆಲ್ಲರೂ ಇವನ ಮೋಸಕ್ಕೆ ಒಳಗಾಗಿ, ಓ ಮಹ
ತ್ಮನೇ, ನಮ್ಮಲ್ಲಿ ಕರುಣವಿಟ್ಟು ದೇವರು ನಮಗೆ ಕಾಣಿಸು
ಹಾಗೆ ಮಾಡಬೇಕೆಂದು ಬಹುತರವಾಗಿ ಬೇಡಿ ಕೊಂಡರು. ಆ
ಅವನು ಆಜನಗಳನ್ನು ನೋಡಿ ನೀವು ನನ್ನ ಹಾಗೆ ಮೂಗು
ರಕರಾದ ಕಾಲಕ್ಕೆ ದೇವರನ್ನು ನೋಡುವಿರಂದನು. ಆ ಮಾ
ನ ಮೇರಿಗೆ ಕೆಲವರು ಮೂಗುಗಳ ಹತ್ತ ಕೊಯಿ ಕೊಂಡು
ವನ ಹಾಗೆ ಆಕಾಶಕ್ಕೆ ತಲೇ ಎತ್ತಿ ನೋಡಿದಾಗ ದೇವರೂ ಕಾ
ಣಿಸಲಿಲ್ಲ, ದಿಂಡರೂ ಕಾಣಿಸಲಿಲ್ಲ. ಆಗ ಅವರು ಮೋಸ ಹೊ
ದಿವೆಂದು ಬಾಯಿಂದ ಹೇಳದೆ, ತಮ್ಮನ್ನು ನೋಡಿ ನಗುವ ಜ
ಕ್ಕ ಜನಗಳನ್ನೆಲ್ಲಾ ಮೋಸ ಮಾಡುವದಕ್ಕಾಗಿ ತಮಗೆ ದೇ
ರು ಕಾಣ ಬರುತ್ತಾನೆಂದು ಸುಳ್ಳು ಮಾತುಗಳನ್ನು ನಿಜವಾ
ತೋರುವ ಹಾಗೆ ಹೇಳುತ್ತಾ ಬರಲು, ಹತ್ತು ಮಂದಿ ಹೇಳು
ಮಾತು ನಿಜವೇಸರಿ ಎಂದು ಊರಿನವರೆಲ್ಲರೂ ಮೂಗು ಕೊಂ
ಕೊಂಡು ಮೂಗು ಹರಕರಾದರು. ಆಗ ಆ ಊರಿಗೆ ಮೂಗ
ದೇವನ ಹಳ್ಳಿ ಎಂಬ ಹೆಸರು ನಿಶ್ಚಯವಾಯಿತು. ಎಲ್ಲರ
ಮುಂಕು ದೇವರ ಪೂಜಾರಿಗಳಾದರು. ಹೀಗೆ "ತಾನು ಕೆಡ
ಕೋತಿಯು ವನವೆಲ್ಲಾ ಕೆಡಿಸಿತು" ಎಂಬ ಗಾದೆಯ ಹಾಗೆ, ಈ
ರ್ಮಾರ್ಗರು ಜನಗಳನ್ನು ಕೆಡಿಸುವರು.

ಅರವತ್ತು ಮೂರನೇ ಕಥೆ.

ಸೋರೇಕಾಯೂ ಅರಸನ ಮಗನೂ.

ಅವಂತಿ ಎಂಬ ಪಟ್ಣ್ಣದಲ್ಲಿ ಅವಿದ್ಯನೆಂಬ ಒಬ್ಬ ಅರಸು ಮಗ
ದ್ದನು. ಅವನಿಗೆ ಬಾಲ್ಯದಲ್ಲಿ ತಂದೆಯೂ ಉಪಾಧ್ಯನೂ ಅ
ನೇಕ ಪ್ರಕಾರವಾಗಿ ಅನೇಕ ಉಪಾಯಗಳಿಂದ ವಿದ್ಯೆ ಕಲಿಸಿದ
ರು. ಆದಾಗ್ಯೂ ಅವನಿಗೆ ವಿದ್ಯೆ ಬಾರದೆ ರಾಜನೀತಿ ಲಕ್ಷಣಗಳು
ನೂ ತಿಳಿಯದೆ, ಅವನು ಬೇಟೆ, ಕೋಳಿ ಹುಂಜಿನ ಜಗಳ, ಟ
ರಿನ ಕಾಳಗ, ಇಂಥಾ ಅಯೋಗ್ಯ ಕೆಲಸಗಳಲ್ಲಿ ರುಚಿಯುಳ್ಳವ
ನಾಗಿ ಅವಿದ್ಯನೆಂಬ ಹೆಸರು ಪಡೆದನು. ಹೀಗಿರುವಾಗ ಕೆಲವು ವ
ರ್ಷಗಳ ಮೇಲೆ ತಂದೆ ತೀರಿಹೋಗಲು, ಮಗನಿಗೆ ಪಟ್ಟವಾಯಿ
ತು. ಅವಿವೇಕಿಗೆ ಪ್ರಭುತ್ವ ಉಂಟಾದ ಮೇಲೆ ಅವನ ರಾಜ್ಯ
ಭಾರದ ಕ್ರಮವೆಲ್ಲಾ ಅಕ್ರಮವಾಯಿತು. ಈ ಅರಸನ ಬಳಿಗೆ
ಅನೇಕ ವಿದ್ವಾಂಸರು ಬಂದು ಬಹುಮಾನ ಪಡೆಯಬೇಕೆಂಬ
ಅಪೇಕ್ಷೆಯಿಂದ ತಮ್ಮ ವೀಣೆಗಳನ್ನು ಬಾರಿಸಿ ರಾಗ ರಚನೆಯಿಂ
ದ ರಾಯನನ್ನು ಮೆಚ್ಚಿಸಿದರು. ಆಗ ಅವರ ವೀಣೆಗಳಲ್ಲಿ ತುಂ
ಬುರು ವೀಣೆಗಳಿಗೆ ಒಂದೊಂದು ಸೋರೆ ಬುರಡೆಗಳೂ, ರುದ್ರ
ವೀಣೆಗಳಿಗೆ ಮೂರು ಮೂರು ಸೋರೆ ಬುರಡೆಗಳೂ ಇರುವ
ದನ್ನು ನೋಡಿ, ಅವಿದ್ಯರಾಯನು ಆ ವೀಣಾ ವಾದ್ಯದ ಸ್ವಾರ
ಸ್ಯವನ್ನು ಸ್ವಲ್ಪವಾದರೂ ತಿಳುಕೊಳ್ಳದೆ ಬುರುಡೆ ಒಂದಕ್ಕೆ
ಒಂದೊಂದು ವರಹಾ ಪ್ರಕಾರ ಲೆಖ್ಖ ಮಾಡಿ ಬಹುಮಾನ ಕೊ
ಟ್ಟು ಹೋಗಿರೆಂದನು.

ಈ ಮೇರಿಗೆ ಅಲ್ಪ ಬಹುಮಾನವನ್ನು ಪಡದು ಅಸಂತುಷ್ಟ
ರಾಗಿ ತಮ್ಮ ತಮ್ಮ ಊರುಗಳಿಗೆ ಹೊರಟ ವಿದ್ವಾಂಸರೊಳಗೆ

ಚಂಡಾಮರ್ಕನೆಂಬ ವೈಣಿಕನು ಕೆಲವು ತಿಂಗಳ ಮೇಲೆ
ನಃ ರಾಯನ ಬಳಿಗೆ ಬಂದು, ಅರಮನೆಯ ಹೊರಬಾಗ
ಉದ್ಭವಾದ ಕಂಭಕ್ಕೆ ನೂರಾರು ಸೋರೆ ಬುರಡೆಗಳನ್ನು ತ
ಕಟ್ಟಿ ಸ್ತಂಭ ವೀಣೆಗಾರನು ಬಂದಿದ್ದಾನೆ ಎಂಬ ವರ್ತಮಾ
ನ್ನು ಅರಸಿಗೆ ತಿಳಿಸಿದನು. ಒಳಕ್ಕೆ ಬರಹೇಳೆಂದು ಮೂಢ
ಯನು ಹೇಳಿ ಕಳುಹಿಸಲು, ಚಂಡಾಮರ್ಕನು ಒಳಕ್ಕೆ ನಾ
ಬಂದರೂ ಸ್ತಂಭವೀಣೆಯು ಬರಲಾರದು ಎಂದು ತಿಳಿಸಿದ
ಆ ಮಾತಿಗೆ ಮೂಢರಾಯನು ಸೋರೆ ಬುರಡೆಯೆ ಲೆಕ್ಕಿದ
ಕಾರ ವರಹಾಗಳು ಕೊಟ್ಟು ಕಳುಹಿಸಿ ಬಿಡೆಂದು ಆಜ್ಞಾಪಿಸಿದ
ವೈಣಿಕನಿಗೆ ನೂರಾರು ವರಹಾ ಪ್ರಯೋಜನವಾಯಿತು. ರಾ
ನಿಗೆ ಅವಿವೇಕಿ ಎಂಬ ಹೆಸರೇ ಸ್ಥಿರವಾಯಿತು. ಆದ್ದರಿಂದ ವಿ
ಇಲ್ಲದವನಿಗೆ ವಿತರಣೆ ಹುಟ್ಟುವದು ಪ್ರಯಾಸವು.

ಅರವತ್ತಾಲ್ಕನೇ ಕಥೆ.

ಸ್ನೇಹ ಮಾಡಿ ಬಿಡುವಿಕೆ.

ಕಲ್ಪಕವೆಂಬ ಪಟ್ಟಣದಲ್ಲಿ ಕಲ್ಯಾಣಶೀಲನೆಂಬ ಅರಸು ತಾ
ಧರ್ಮ ಗುಣ ವುಳ್ಳವನಾಗಿದ್ದುಕೊಂಡು, ತನ್ನ ರಾಜ್ಯದಲ್ಲಿ ಅ
ರ್ಮ ಅನ್ಯಾಯಗಳು ನಡೆಯದ ಹಾಗೆ ಹಿಂದಿನ ಚಕ್ರವರ್ತಿ
ಳೋಪಾದಿಯಲ್ಲಿ ರಾಜ್ಯವನ್ನಾಳುತ್ತಾ ಯಿದ್ದನು. ಹೀಗಿರು
ಗ ಮತ್ಯೋಹಿ ಅತ್ಯೋಹಿ ಎಂಬ ಯೋಗ ಸಿದ್ಧರಿಬ್ಬರು ಅರ
ಕಾಣುವ ಬಗ್ಗೆ ರಾಜ ಸಭೆಗೆ ಬಂದು ಆಶೀರ್ವದಿಸಿ, ಅರಸನ
ನುಮತಿಯಿಂದ ತಕ್ಕ ಸ್ಥಳಗಳಲ್ಲಿ ಕುಳಿತುಕೊಳ್ಳಲು, ಲೋಕ

ಾಮವಾಗಿ ಧರ್ಮಪರವಾದ ಪ್ರಸ್ತಾಪಗಳು ನಡೆಯುವಲ್ಲಿ ಅರಸ
ು ಅವರಿಬ್ಬರನ್ನು ನೋಡಿ ಎಲೈ ಸರ್ವಜ್ಞರೇ, ಸ್ನೇಹಿಸ ತಕ್ಕವ
ು ಇಂಥಾವರು, ಸ್ನೇಹಿಸ ಕೂಡದವರು ಇಂಥಾವರು, ಎಂಬುದ
ನ್ನು ವಿವರಿಸಿ ಹೇಳಬೇಕೆಂದನು. ಅದಕ್ಕೆ ಮತ್ಸ್ಯಾಹನಿಂತೆಂದ
ು. ಆದೂರು ಎಂಬ ಗ್ರಾಮದಲ್ಲಿ ಅಂಕನೆಂಬ ಶೂದ್ರನ ಬಳೀ
ಬಂದು ನಾಯಿ ಇತ್ತು. ಅದು ಅವನ್ನು ಎಡೆಬಿಡದೆ ಸ್ನೇಹಿಸಿ
ುರುವದು. ಬಂದು ದಿವಸ ಅಗಾಧವಾದ ಮಡುವಿನಲ್ಲಿ ಮೈ ತೊ
ಯುವದಕ್ಕೆ ಆ ಶೂದ್ರನು ಇಳಿಯ ಹೋಗಲಾಗಿ ಆ ನಾಯಿ
ದರಲ್ಲಿರುವ ಮೊಸಳೆಯು ಸೋವೆಯನ್ನು ತಿಳಿದು, ಆತನನ್ನು
ೀರಿನಲ್ಲಿಳಿಯು ಬೇಡವೆಂಬುವ ಹಾಗೆ ಸನ್ನೆ ಮಾಡಿತು. ಅದನ್ನು
ರಿಯದೆ, ಅವನು ನಾಯನ್ನು ಹಿಂದಕ್ಕೆ ತಳ್ಳಿ ಮುಂದಾಗಿ ನಡೆದ
ು. ಆಗ ನಾಯಿ ಅವನ ಉಟ್ಟ ಬಟ್ಟೆಯನ್ನು ಹಿಡಿದು ಹಿಂದಕ್ಕೆ
ಳೆಯಲು, ಆಗಲೂ ಅವನು ಅದನ್ನು ತಳ್ಳಿ ನೀರೊಳಗೆ ಇಳಿ
ು ಹೋದನು. ತನ್ನ ಸಾಕಿದ ಶೂದ್ರನು ಮೊಸಳೆಯ ಬಾಯಿಗೆ
ತೆಯಾಗುತ್ತಾನಲ್ಲಾ ಎಂಬ ಚಿಂತೆಯಿಂದ, ಆ ನಾಯಿ ಅವನಿ
ುತ ಮುಂದಾಗಿ ಮಡುವಿನಲ್ಲಿ ಹೊಕ್ಕು ಮೊಸಳೆಯ ಬಾಯಿಗೆ
ುತ್ತಾಗಿ ಸತ್ತು ಹೋಯಿತು. ಆಗ ಶೂದ್ರನು ಭಯದಿಂದ
ುಂತಿರಿಗಿ ತನ್ನ ಪ್ರಾಣವನ್ನು ಕಾಪಾಡುವದಕ್ಕಾಗಿ ಸತ್ತ ನಾ
ುಗೋಸ್ಕರ ದುಃಖ ಪಟ್ಟನು. ಇಂಥಾ ಗುಣವುಳ್ಳವನನ್ನು
ೀಹಿಸಬೇಕೆಂತ ಮತ್ಸ್ಯಾಹನು ಹೇಳಿದನು. ಅತ್ಸ್ಯಾಹನು
ೀಳೈಯ್ಯಾ ಅರಸೇ, ಮದೋತ್ಕಟವೆಂಬ ಆನೆಗೆ ಮುಂದಪಾಲ
ುಬ ನಾವಟಿಗ ನಿದ್ದನು, ಅವನು ಆ ಆನೆಗೆ ನಿತ್ಯವೂ ಅರ
ುನೆಯಿಂದ ಕೊಡುವ ರಾತೀಬು ಕಬಳಗಳಲ್ಲಿ ಒಂದು ಕಬ

ಳವನ್ನು ಮಿಗಿಸಿಕೊಂಡು ಮಿಕ್ಕ ಕಬಳಗಳನ್ನೇ ಕೊಡುತ್ತಾ ಯಿದ್ದನು, ಸಾಕಿದವನೆಂತ ಅವನ ಮೇಲೆ ಅಭಿಮಾನಿಸದೆ ಹಗ ಯಿಟ್ಟು ಆ ಆನೆ ಬಂದಾನೊಂದು ಸಮಯದಲ್ಲಿ ಅವನನ್ನು ಸೋ ಡ್ಲದಲ್ಲಿ ಹಿಡಿದು ಸುತ್ತಿ ನೆಲಕ್ಕೆ ಅಪ್ಪಳಿಸಿ ಕೊಂದು ಹಾಕಿತು. ಇಂಥಾ ಗುಣ ವುಳ್ಳವನನ್ನು ಸ್ನೇಹಿಸ ಬಾರದು, ಆದಕಾರಣ ದೊಡ್ಡಸ್ತಿಕೆ ಚಿಕ್ಕತನ ಇವು ಎರಡಕ್ಕೂ ಮುಖ್ಯವಾದ್ದು ಗುಣ ವೇ ಹೊರ್ತು ಆಕಾರವಲ್ಲ, ಹೀಗೆ ಗುಣವರಿತು ಸ್ನೇಹಿಸ ಬೇ ಕೆಂದು ನುಡಿದನು. ಅದಕ್ಕೆ ರಾಯನು ಸಂತೋಷಪಟ್ಟು ಆ ಇಬ್ಬರನ್ನೂ ಸನ್ಮಾನಿಸಿ ಕಳುಹಿಸಿದನು.

ಅರವತ್ತೈದನೇ ಕಥೆ.

ಯೋಗ್ಯತೆ.

ಪಾಂಡ್ಯದೇಶಕ್ಕೆ ಅಧಿಪತಿಯಾದ ಪ್ರಜ್ಞಾನಿಧಿ ಎಂಬ ರಾಯ ನಿಗೆ ಲೀಲಾವತಿ ಎಂಬ ರಾಣಿ ಇರುವಳು. ಆ ರಾಣಿಯು ಬಂ ದಾನೊಂದು ದಿವಸ ರಾಯನು ಸಂತೋಷಚಿತ್ತನಾಗಿ ಅಧಿಕಾರ ಪದ್ಧತಿಗಳನ್ನು ತನ್ನೊಡನೆ ಹೇಳುತ್ತಾ ಇರುವ ಸಮಯದಲ್ಲಿ ಆತನನ್ನು ಕುರಿತು, ಪ್ರಿಯನೇ, ನನ್ನ ಬಿನ್ನಹವನ್ನು ಚಿತ್ತಕ್ಕೆ ತಂದು ಸದುತ್ತರವನ್ನು ಹೇಳಬೇಕು, ಅದೇನಂದರೆ, ಮಂತ್ರಿ ಸಾ ಮಾಜೀಕರು ಮೊದಲಾದವರು ಯಾವ ಕೆಲಸವೂ ಮಾಡದೆ ಅ ಲಂಕಾರವಿದ್ಯಾರ್ಥಿಗಳ ಹಾಗೆ ಸುಮ್ಮನೆ ಸಭೆಯಲ್ಲಿ ಕುಳಿತುಕೊಂ ಡು ಇರುತ್ತಾರೆ, ಅವರಿಗೆಲ್ಲಾ ಐನೂರು ಆರುನೂರು ಸಾವಿರ ವ ರಹಾಗಳ ಪರಿಯಂತರವೂ ಹೆಚ್ಚು ಸಂಬಳ ನಡಿಯುತ್ತದೆ. ಕ

ಯದ ನಡುವು ಬಿಚ್ಚದಹಾಗೆ ಕೂತುಕೊಳ್ಳುವದಕ್ಕೆ ಸಾವಕಾಶವಿ
ದೆ, ಎಲ್ಲಿ ಬೇಕಾದರೆ ಅಲ್ಲಿಗೆ ಓಡಿ ಹೊಗುತ್ತಾ ಬರುತ್ತಾ ಕಷ್ಟ
ಟ್ಟು ಚಾಕರಿ ಮಾಡುವಂಥಾ ದಲಾಯಿತರು ಮುಂತಾದ ಅಳುಗ
ಗೆಲ್ಲಾ ಆರಕ್ಕೆ ಹೆಚ್ಚಿಲ್ಲ, ಮೂರಕ್ಕೆ ಕಡಮೆ ಇಲ್ಲ, "ಅರಮ
ನೆಗೆ ಹತ್ತು ವನಿಗೆ ಏಳು" ಮತ್ತು "ಮುಂಡೆಗೆ ಸಂಬಳ ಮುವ್ವ
ಸ್ರ ಹಣ" ಎಂಬ ಗಾದೆಗಳಿಗೆ ಸರಿಯಾಗಿ ಸ್ವಲ್ಪ ಸ್ವಲ್ಪ ಸಂಬಳ
ಗಳೇ ನಡಿಯುತ್ತವೆ, ಇಂಥಾ ಪದ್ಧತಿ ಬಹಳ ಅನ್ಯಾಯವಲ್ಲವೆ?
ಳೀಳಿರಿ ಅಂದಳು. ಸಂಗಡಲೇ ರಾಯನು ಎರಡು ದಂತದ ಭರ
ಣಗಳನ್ನು ಉಗ್ರಾಣದಿಂದ ತರಿಸಿ, ಆ ಎರಡರಲ್ಲೂ ಸ್ವಲ್ಪ ಸ್ವಲ್ಪ
ಬೂದಿ ಒಂದೆರಡು ಕೂದಲುಗಳು ಹಾಕಿ ಮುಚ್ಚಳವನ್ನು ಭದ್ರ
ವಾಗಿ ಮುಚ್ಚಿ ಮೊಹರು ಮಾಡಿ ಸಾವಿರ ವರಹಾ ಸಂಬಳ ಉಂ
ಟುವ ವಿವೇಕಶೀಲನೆಂಬ ಮಂತ್ರಿಯ ಮಗನಾದ ವಿವೇಕನಿಧಿ
ಯೆಂಬವನನ್ನು ಕರಿಸಿ, ಅರಸ್ತಿ ನೋಡುತ್ತಿರುವಾಗ ಬಂದು ಭರಣಿ
ಯನ್ನು ಅವನ ಕೈಲಿ ಕೊಟ್ಟು, ಎಲೈ ಮಂತ್ರಿ ಕುಮಾರನೇ, ಈ
ಭರಣಿಯನ್ನು ಕೇರಳರಾಯನಾದ ಕೃತವೀರ್ಯನಿಗೆ ತಲಪಿಸಿ ಬಾ
ಎಂದು ಕಳುಹಿಸಿದನು. ಮತ್ತೊಂದು ಭರಣಿಯನ್ನು ಆರು
ವರಹಾದ ಸಂಬಳಗಾರನಾದ ದಫೇದಾರನ ಕೈಗೆ ಕೊಟ್ಟು ಇದ
ನ್ನು ಚೋಳರಾಯನಾದ ಸುತೀಕ್ಷ್ಣನಿಗೆ ಮುಟ್ಟಿಸಿ ಬಾ ಎಂದು
ಕಳುಹಿಸಿದನು.

ಮಂತ್ರಿ ಕುಮಾರನು ಕೇರಳದೇಶಾಧಿಪತಿಯ ಬಳಿಗೆ ಬಂದು
ನಯದಿಂದ ಕೈಮುಗಿದು ರಾಯನ ಕುಶಲವಾರ್ತೆಯನ್ನು ತಿಳಿ
ಕೇರಳ ರಾಯನು ಸಂತೋಷಚಿತ್ತನಾಗಿರುವ ಸಮಯವನ್ನು
ತು ಆ ದಂತದ ಭರಣಿಯನ್ನು ಕೈವಸ್ತ್ರದ ಮಡುಪಿನ ಮೇಲೆ

ಇಟ್ಟುಕೊಂಡು, ತನ್ನ ಎರಡು ಕೈಗಳನ್ನು ಒಟ್ಟಿ ಕಾಣಿಕೆಯ
ಹಾಗೆ ರಾಯನ ಮುಂದೆ ಇಟ್ಟನು. ರಾಯನು ಅದನ್ನು ಕೈಗ
ತೆಗದುಕೊಂಡು ಮುಚ್ಚಳವನ್ನು ತೆರೆದು ನೋಡಿ, ಇದೇನು
"ತೋಟ ಶೃಂಗಾರ ಬಳಗೆ ಗೋಣಿಸೊಪ್ಪು" ಎಂಬ ಗಾದೆ
ಸರಿಯಾಗಿದೆ, ಎನ್ನಲು, ಆಗ ತಾನೇ ಆಭರಣಿಯಲ್ಲಿದ್ದದ್ದನ್ನು
ನೋಡಿದ ಮಂತ್ರಿ ಕುಮಾರನು ಪ್ರಭುವೇ, ಲಾಲಿಸ ಬೇಕು
ಇವು ಬಹಳ ಶ್ರೇಷ್ಠವಾದ್ದು, ವಿಂಧ್ಯಪರ್ವತ ವಾಸಿಗಳಾದ ಮೂ
ತ್ರ ಸಿದ್ಧರು ಇಬ್ಬರು ಬಂದು, ತಮ್ಮ ಅನುಗ್ರಹಕ್ಕೆ ಪಾತ್ರ
ನಾದ ನಮ್ಮ ರಾಯನ ಕಡೆಯಿಂದ ಮಾಡಿಸಿದ ಯಜ್ಞಾದಲ್ಲಿ ಪ
ತ್ಯಕ್ಷವಾದ ಭೂತರಾಜನಿಂದ ಕೊಡೋಣಾದ ಈ ಭಸ್ಮವೂ
ಜೆಡೆಯ ಕೂದಲೂ ಅರಸಸುಗಳಿಗೆ ಜಯಕಾರಣವಾದ್ದು, ಪು
ಜಾಯೋಗ್ಯವಾದ್ದು, ಆದ್ದರಿಂದ ಪರಮ ಮಿತ್ರರಾದ ನಿಮಗೆ ಸ್ವ
ಲ್ಪ ಕಳುಹಿಸಿ ಕೊಟ್ಟು ಇದ್ದಾರೆ, ಎಂದು ಹೇಳಿದನು. ಆ ಮಾತ
ನ್ನು ಕೇಳಿ ರಾಯನು ಅದನ್ನು ಸಂತೋಷದಿಂದ ಅಂಗೀಕರಿಸಿ
ಮಂತ್ರಿಕುಮಾರನಿಗೆ ಬಹುಮಾನವನ್ನು ಕೊಟ್ಟನು. ಅದನ್ನು
ಪಡಕೊಂಡು ಮಂತ್ರಿಕುಮಾರನು ಬಂದು ರಾಣಿಯು ಕೇಳುವ
ಹಾಗೆ ಪಾಂಡ್ಯರಾಯನಲ್ಲಿ ನಡದ ಸಂಗತಿಯನ್ನೆಲ್ಲಾ ತಿಳಿಸಿದನು

ಎರಡನೆಯವನಾದ ಆಳುಮಾತ್ರದವನು ಚೋಳರಾಯನ ಬಳ
ಗೆ ಹೋಗಿ ಅಲ್ಲಿದ್ದ ಸಮುಖದ ಊಳಿಗದವರ ಕೈಗೆ ಭರಣಿಯ
ನ್ನು ಕೊಟ್ಟು ದೂರದಲ್ಲಿ ಕೈಮುಗಿದು ನಿಂತಿರುವಾಗ, ಚೋಳನ
ಆ ಭರಣಿಯ ಮುಚ್ಚಳವನ್ನು ತೆರದು ನೋಡಿ, ಕೋಪಗೊಂಡ
ಪಾಂಡ್ಯನಿಗೆ ಕಣ್ಣು ಮುಚ್ಚಿ ಹೋಯಿತೋ ಏನೋ? ಕೇಶ ಭ
ಸ್ಮಗಳನ್ನು ಕಳುಹಿಸಿದ್ದಾನೆ, ಇದನ್ನು ತಂದವನ್ಯಾರೆಂದು ಗಜಿ

ಸಿದನು. ಅಷ್ಟುಮಾತ್ರದಲ್ಲೇ ಎದುರಾಗಿ ನಿಲ್ಲಿಸಲ್ಪಟ್ಟ ಊಳಿಗದ
ನನ ಮುಖಕ್ಕೆ ರಾಯನು ಅಬೂದಿಯನ್ನು ಬಳಿಸಿ, ಅವನ ಕೆವಿ
ಗೆ ಆ ಕೂದಲುಗಳನ್ನು ಸುತ್ತಿಸಿ, ಕೆನ್ನೆಗೆ ಪೆಟ್ಟು ಹೊಡಿಸಿ,
ನಿವ್ಮ ರಾಯನ ಬಳಿಗೆ ಹೋಗೆಂದು ತಳ್ಳಿಸಿ ಬಿಟ್ಟನು. ಅವ
ನು ಅಳುತ್ತಾ ಬಂದು ತನ್ನ ಅವಸ್ಥೆಯನ್ನು ಹೇಳುವದನ್ನೆಲ್ಲಾ
ಕೇಳುತ್ತಾ ಕಿಟಕಿಯಲ್ಲಿ ಕುಳಿತಿರುವ ರಾಣಿಯನ್ನು ನೋಡಿ,
ನಿನ್ನ ಸಂದೇಹ ಹೋಯಿತೋ ಇನ್ನು ಇದೆಯೋ ? ಎಂದು
ರಾಯನು ಕೇಳಿದ್ದಕ್ಕೆ, ಆಕೆ ನಾಚಿಕೆ ಪಟ್ಟು ಕ್ಷಮಿಸ ಬೇಕೆಂ
ದು ಹೇಳಿದಳು. ಆಗ ರಾಯನು ಮಂತ್ರಿ ಕುಮಾರನಿಗೆ ಮಂ
ತ್ರಿತ್ವವನ್ನು ಕೊಟ್ಟು ಪೆಟ್ಟು ತಿಂದು ಬಂದ ಆಳಿಗೆ ತಕ್ಕ ಇನಾ
ಮು ಕೊಟ್ಟು ಸಮುದಾಯಿಸಿ ಕಳುಹಿಸಿದನು. ಈ ಮೇರಿಗೆ ರಾ
ಜದ್ವಾರದಲ್ಲಿ ಅವರವರ ಯೋಗ್ಯತಾನುಸಾರವಾಗಿ ಜೀವನಗಳುಂ
ಟಾಗಿರುವದು.

ಅರವತ್ತಾರನೇ ಕಥೆ.

ಕಥಾಸಾಗರನು.

ದುರ್ಗವೆಂಬ ಪಟ್ಟಣದಲ್ಲಿ ಲುಬ್ಧಕನೆಂಬ ಅರಸು ಮಹಾ ಲೋ
ಭ ಗುಣದಿಂದ ರಾಜ್ಯವಾಳುತ್ತಿರುವಾಗ, ದೇಶಾಂತ್ರಗಳಿಂದ ಯಾ
ಚಕಸ್ತರಾಗಿ ಬರುವ ವಿದ್ವಾಂಸರು ಅವನ ಗುಣವನ್ನು ಅರಿಯ
ದೆ ರಾಜಾಶ್ರಯದಿಂದ ನಮಗೆ ವಿಶೇಷವಾಗಿ ಪ್ರಯೋಜನ ಉಂಟಾ
ಗುತೆಂಬ ಆಶೆಯಿಂದ ರಾಯನ ಸಮುಖವನ್ನು ಕಾದು ಕಟ್ಟಿ,
ಸಮಯವರಿತು ಕಂಡು ತಮ್ಮ ವೃತ್ತಾಂತವನ್ನೆಲ್ಲಾ ವಿನಯ

ವಾಗಿ ತಿಳಿಸಿ ನಿತ್ಯವ್ರೂ ಅರಸನ ಬಳಿಗೆ ಬರುತ್ತಾ ಇರುವರ
ಅವರನ್ನು ಒಬ್ಬೊಬ್ಬರಾಗಿ ರಾಯನು ಸವಿೂಪಕ್ಕೆ ಕರಿಯುತ
ಏನಾದರೂ ಕಥೆ ಹೇಳಿ ಎಂದು ಕೇಳುವನು. ಅವನವನು ತ
ಗೆ ತೋಚಿದ ಬಂದೆರಡು ಕಥೆಗಳನ್ನು ಹೇಳಿದ್ದ ಕೇಳಿ, ಇನ್ನೊ
ದು ಹೇಳು, ಮತ್ತೊಂದು ಹೇಳು, ಎಂದು ಅವನಿಗೆ ಬರು
ಕಥೆಗಳನ್ನೆಲ್ಲಾ ಕೇಳಿದ ತರುವಾಯ ಇಷ್ಟೇನೋ? ಇನ್ನೇನ
ಬಾರದೋ? ಇಂಥಾವನಿಂದ ನಮಗೇನು ಪ್ರಯೋಜನ? ಬಂ
ದಾರೀ ಹಿಡುಕೊಂಡು ಹೋಗು ಎಂದು ಬಂದು ರೂಪಾಯಾ
ರೂ ಕೊಡದೆ ಕಳುಹಿಸುವನು. ಬಂದ ವಿದ್ವಾಂಸರೆಲ್ಲರೂ
ದೇ ಮೇರಿಗೆ ಪ್ರಯೋಜನವಿಲ್ಲದೆ, ಬರಿಕೈಗಳಿಂದ ಹೋಗುವ
ಮಾತ್ರವೇ ಅಲ್ಲದೆ, ಏನೂ ತಿಳಿಯದ ಮೂಢರೆನಿಸಿಕೊಂಡು
ಇವನು ಮಹಾ ಲುಬ್ಧನು, ಎಂದು ಬೈಕೊಂಡು ಹೋಗುತ್ತಿರು
ರು. ಅದರಿಂದಲೇ ಲುಬ್ಧಕನೆಂಬ ಹೆಸರು ಇವನಿಗುಂಟಾಯಿತ
ಹೀಗಿರುವಲ್ಲಿ ಸಪ್ತಗೋದಾವರಿ ತೀರವಾಸಿಯಾದ ಪ್ರಚಂಡ ಪ
ಡಿತನೆಂಬ ಹೆಸರುಳ್ಳ ಒಬ್ಬ ವಿದ್ವಾಂಸನು, ಈ ವರ್ತಮಾನವನ
ಕೇಳಿ, ಈ ಲೋಭಿರಾಯನಿಂದ ಅನೇಕ ಬಹುಮಾನಗಳನ
ಸಂಪಾದಿಸಿ ಕೊಂಡು ಬರುವದಲ್ಲದೆ, ವಿದ್ವಜ್ಜನಗಳಿಗೆ ಅವವ
ನ ಮಾಡುವ ಇವನ ದುರ್ಗುಣವನ್ನು ಹೋಗಲಾಡಿಸುವೆನೆಂ
ಪ್ರತಿಜ್ಞೆ ಮಾಡಿ ಕೊಂಡು ತನ್ನ ಸ್ಥಳದಿಂದ ಹೊರಟು, ಈ ಪಟ್ಟ
ಕ್ಕೆ ಬಂದು ತಕ್ಕ ಸಮಯವರಿತು ರಾಯನನ್ನು ಕಂಡು ಆ
ರ್ವದಿಸಿ, ವಿದ್ವಾಂಸರು ಕುಳಿತು ಕೊಳ್ಳುವ ಸ್ಥಳದಲ್ಲಿ ರಾಜಾ
ಮತಿಯಿಂದ ಕೂತು ಕೊಂಡನು. ಆಗ ರಾಯನು ಈ ಬ್ರ
ಹ್ಮಣನನ್ನು ನೋಡಿ ನಿಮ್ಮದು ಯಾವ ದೇಶ? ವಾಸಸ್ಥಳವ

ನು ? ನಿಮ್ಮ ನಾಮಧೇಯವೇನು ? ಎಂದು ಕೇಳಲು, ಆತನು ಪ್ರಭುವೇ, ಸಪ್ತಗೋದಾವರೀ ತೀರದಲ್ಲಿ ಚಾತುರ್ಯ ಸೆಮು ವೆಂಬ ಅಗ್ರಹಾರದಲ್ಲಿ ವಾಸವಾಗಿರುವ ನನ್ನನ್ನು ವಾಗ್ಝರಿ ಯುಳ್ಳ ಕಥಾಸಾಗರನೆಂತ ಜನಗಳು ಕರೆಯುವರು, ಕಥೆಗಳ ನ್ನು ಕೇಳುವ ವಿಷಯದಲ್ಲಿ ಅತ್ಯಂತ ಕುತೂಹಲ ಉಳ್ಳ ತಮ್ಮ ನ್ನು ಸಂತೋಷ ಪಡಿಸಿ ಸಂತುಷ್ಟಿ ಹೊಂದುವದಕ್ಕೆ ಬಂದಿದ್ದೇ ನೆ ಸ್ವಸ್ತ್ಯಾಸ್ತು ಅಂದನು. ಆಗ ರಾಯನು, ಆ ಬ್ರಾಹ್ಮಣನ ತೇಜಸ್ಸನ್ನು ನೋಡಿ, ಅಯ್ಯಾ, ನಿನಗುಂಟೂದ ಹೆಸರಿಗೆ ತಕ್ಕ ಕಥೆಯನ್ನು ಹೇಳಿದರೆ ಕೇಳುತ್ತೇನೆಂದನು. ಅದಕ್ಕಾ ಬ್ರಾಹ್ಮ ಣನು ಒಳ್ಳೇದು, ಹೇಳುತ್ತೇನೆಂತ ಇಂತೆಂದನು. ಪ್ರಭುವೇ, ಪೂರ್ವ ಕಾಲದಲ್ಲಿ ಸೂರ್ಯ ಮಂಡಲಕ್ಕೆ ಮರೆಯಾಗುವಷ್ಟು ಉನ್ನತವಾಗಿ ಬೆಳದು ಅಂದರೆ ಅರವತ್ತು ಗಾವದ ಉದ್ದ ಮೂ ವತ್ತಿಗಾವದ ಅಗಲ ಹತ್ತು ಗಾವದ ಉನ್ನತ ವುಳ್ಳ ವಿಂಧ್ಯ ಪ ರ್ವತದ ಮಧ್ಯಪ್ರದೇಶದಲ್ಲಿ ಒಂದು ಮಹಾ ಸರೋವರ ಉಂಟು. ಅದು ಉತ್ತರ ದಕ್ಷಿಣ ಎಂಟು ಸಾವಿರ ಗಜ, ಪೂರ್ವ ಪಶ್ಚಿಮ ಎಂಟು ಸಾವಿರ ಗಜ, ಹೀಗೆ ಚಕಚೌಕವಾಗಿ ಯಿರುವದು. ಅದ ರ ಕಮಲ ಕಲ್ಹಾರ ಕುಮುದ ನೀಲೋತ್ಪಲ ಮುಂತಾದ ನೇಕ ಪುಷ್ಪ ವಿಶೇಷಗಳು ರವ್ಯವಾಗಿರುವದು.

ಅಂಥಾ ಸರೋವರದ ನಿರ್ಮಲವಾದ ವುದಕದಲ್ಲಿ ಸಂಚಾರ ಮಾಡುವದಕ್ಕೂ ಆ ದಿವ್ಯವಾದ ಕಮಲಗಳ ನಾಳಗಳನ್ನು ಭಕ್ಷಿ ಸುವದಕ್ಕೂ ಸತ್ಯಲೋಕದ ಮಾನಸ ಸರಸ್ಸಿನಿಂದ ಕೋಟಾನ ಕೋಟಿ ಹಂಸ ಪಕ್ಷಿಗಳು ಬರುತ್ತಾ ಇರುವವು. ಹೀಗಿರುವಲ್ಲಿ ಒ ದಾನೊಂದು ದಿವಸ ದೊಡ್ಡ ಘೋಳಿ ಮಳೆಯ ಪೆಟ್ಟನ್ನು ತಪ್ಪಿ

ಸಿಕೊಳ್ಳುವ ನಿಮಿತ್ತ ಆ ಸರೋವರದ ಬಳಯಲ್ಲಿರುವ ದೊಡ್ಡ
ಗುಹೆಯನ್ನು ಈ ಹಂಸಗಳು ಪ್ರವೇಶಿಸಿ, ಘಳಿ ಮಳೆ ನಿಂತ ಕ
ಡ್ಲೀ ಯಥಾಸ್ಥಾನಕ್ಕೆ ಹೋಗತಕ್ಕ ಬಗ್ಯೆ ಆ ಗುಹೆಯ ಇಕ್ಕ
ಟ್ಟಿನ ಬಾಗಲಿನಿಂದ ಬಂದು ಹಂಸವು ಹೊರಟಿತು ಎಂದು ನ
ಮ್ಮನಾದನು. ಆಗ ರಾಯನು ಮತ್ತೇನೆಂದನು, ಬ್ರಾಹ್ಮಣನ
ಮತ್ತೊಂದು ಹೊರಟಿತೆಂದನು. ಈ ಪ್ರಕಾರ ಮತ್ತೇನು ಮ
ತ್ತೇನೆಂದು ಆ ಲುಬ್ಧರಾಯನು ಕೇಳುವದಕ್ಕೆಲ್ಲಾ ಮತ್ತೊಂದು
ಹೊರಟಿತು ಮತ್ತೊಂದು ಹೊರಟಿತು ಎಂದು ಬ್ರಾಹ್ಮಣನು
ಹೇಳಿದನು. ಅವನ ಚಾತುರ್ಯವನ್ನು ನೋಡಿ ರಾಯನು ನಾಣ
ಕೆ ಪಟ್ಟು, ಕಥಾಸಾಗರನಿಗೆ ಅನೇಕ ಬಹುಮಾನಗಳನ್ನು ಕೊ
ಟ್ಟು ಕಳುಹಿಸಿ, ಅದು ಮೊದಲುಗೊಂಡು ಬಂದ ವಿದ್ವಾಂಸರಿ
ಮರ್ಯಾದೆ ಮಾಡುತ್ತಾ ಬಂದನು. ಈ ಪ್ರಕಾರ ಪಂಡಿತ
ಬೋಧನೆಯಿಂದಲೇ ಮೂರ್ಖರಿಗೆ ವಿವೇಕ ಉಂಟಾಗಬೇಕು.

ಅರವತ್ತೇಳನೇ ಕಥೆ.

ಮಂತ್ರಿತ್ವ.

ಅವಂತಿ ದೇಶಾಧಿಪತಿಯಾದ ಅತಿ ತೀವ್ರನೆಂಬ ಅರಸು, ತನ್ನ
ರಾಜ್ಯದ ಪ್ರಜೆಗಳ ಬಾಳಿಕೆ ಬಡತನ ಮೊರೆ ಮುಂತಾದ್ದ ವಿನಾ
ವಿಚಾರಣೆ ಮಾಡದೆ, ಹಣದ ಮೇಲೆ ಮಾತ್ರ ಆಶೆ ವುಳ್ಳವನಾಗಿ
ರೈತರು ಮಾಡುವ ಭೂಮಿಗೆಲ್ಲಾ ಬೆಳದ ಸಂವತ್ಸರದ ತೆರಿಗೆಯ
ಹಾಗೆಯೇ, ಬೆಳೆಯದ ಸಂವತ್ಸರಕ್ಕೂ ಕಂದಾಯವನ್ನು ಹೊ
ದು ತೆಗದುಕೊಳ್ಳುವದಲ್ಲದೆ, ಬೆಳದ ಹೊಲಗಳ ದವಸಗಳಲ್ಲಿ ಸ

ಅರಮನೆಗೆ ವಾರಾ ತೆಗದುಕೊಳ್ಳುವನು. ಇದೂ ಅಲ್ಲದೆ ಉತ್ತ
ಭೂಮಿಗೆ ಬಿತ್ತದೆ ಯಿದ್ದಾಗ್ಯೂ ಕಂದಾಯ ಮಾತ್ರ ತಪ್ಪದು.
ಕಾಲಾವದಿಯಲ್ಲಿ ಬಂದು ವರಹಾಕ್ಕೆ ಸಾಗುವಳಿ ಮಾಡಿದ ಭೂ
ಮಿಯನ್ನು ರೈತರು ಕಷ್ಟಪಟ್ಟು ಬೆಳೇ ಮಾಡಿದ ಬಳಿಕ ರೈತನ
ಮೇಲೆ, ಇಲ್ಲ ಸಲ್ಲದ ಲೆಖ್ಖಗಳ ಹೊರಿಸಿ, ಬಂದು ವರಹಾಕ್ಕೆ
ಮೂರು ವರಹಾ ದಂಡಾ ತೆಗದುಕೊಳ್ಳುವನು. ಮತ್ತೂ ಕೈ ತ
ಪ್ಪು, ಬಾಯಿತಪ್ಪು, ಗಂಡ ಹೆಂಡರ ವ್ಯಾಜ್ಯ, ಅಣ್ಣತಮ್ಮಂದಿರ
ಜಿವಾದ, ತಾಯಿ ಮಕ್ಕಳ ಜಗಳ, ಕೊಟ್ಟು ಕೊಂಡವರ ವಾ
ಗ್ವಾದ, ನೆಂಟರಿಷ್ಟರ ಹೋರು, ಮುಂತಾದ್ದೇನಾದರೂ ಉಂಟೆಂ
ದು ವರ್ತಮಾನ ಕೇಳಿದ ಮಾತ್ರದಿಂದಲೇ, ಅರಸನು ಅವರನ್ನು
ಂಡಿತರಿಸಿ ಹೊಡಿಸಿ ಬಡಿಸಿ ಅಪರಾಧಗಳ ಹೊರಿಸಿ ಮಿತಿಮೀ
ರಿದ ದಂಡಗಳು ತೆರಿಸುವನು. ಸುಂಕದ ಅವಾಂತ್ರವಂತೂ
ಕೇಳಲೇ ಕೆಲಸವಿಲ್ಲ. ಕುಡಿಯಲಿಕ್ಕೆ ನೀರು ಕೆರೆಯಿಂದ ತಂ
ದರೆ ಬಿಂದಿಗೆ ನೀರಿಗೆ ಬಂದು ಕಾಸು ಪ್ರಕಾರ ಅನ್ಯಾಯವಾಗಿ
ತನ್ನ ಶೀಮೆಯನ್ನು ತಾನೇ ದ್ರೋಚಿಕೊಳ್ಳುತ್ತಾ ಯಿರುವನು.
ಇಂಥಾ ದಂಡ ದ್ರೋಹಗಳ ತೆತ್ತು ರೈತರು ವರ್ತಕರು ಮುಂ
ತಾದ ಪ್ರಜೆಗಳೆಲ್ಲಾ ಕುಡಿಯುವದಕ್ಕೆ ಅಂಬಲಿಯೂ ಹೊದಿಯು
ವದಕ್ಕೆ ಚಿಂದಿಯೂ ಸಹ ಇಲ್ಲದೆ ಕಷ್ಟ ಪಡುವಕಾಲ ಸಂಭ
ವಿಸಿದ್ದರಿಂದ, ಇದೆಲ್ಲಾ ಹಣದ ಮೇಲೆ ಅತ್ಯಾಶೆ ಉಳ್ಳ ಅರಸಿನಿಂ
ದ ಬಂದ ಕಷ್ಟಗಳೆಂದು ನಿಶ್ಚೈಸಿ, ಇವನ ಧೊರೆತನ ಎಂದು
ಹೋದೀತು, ಬಳ್ಳೀ ಧೊರೆ ಎಂದಿಗೆ ಬಂದಾನು, ಎಂದು ಪ್ರಜೆಗ
ಳೆಲ್ಲಾ ಮಾಡುವ ಆಲೋಚನೆಯು ಬಹು ಪ್ರಕಟವಾಗಿ ಮಂತ್ರಿ
ಸಭೆಗೆ ತಿಳಿಯಿತು.

ಆ ಸಭೆಯಲ್ಲಿರುವ ಮಂತ್ರಿ ಶ್ರೇಷ್ಠರೆಲ್ಲಾ ಕೂಡಿ ಈ ರಾಜಾ ರಿಷ್ಟವನ್ನು ಪರಿಹರಿಸ ಬೇಕೆಂದು ಆಲೋಚಿಸಿದ ಮೇಲೆ ವಿನಯ ಶೀಲನೆಂಬ ಮುಖ್ಯ ಪ್ರಧಾನಿಯು ಅರಸನ ಬಳಿಗೆ ಬಂದು ತನಗೆ ಕೇಡು ಬಂದಾಗ್ಯೂ ಚಿಂತೆಯಿಲ್ಲ ಪ್ರಜೆಗಳಿಗೆ ಕ್ಷೇಮವಾದರೆ ಸಾಕು, ಎಂತ ನಿಶ್ಚೈಸಿ ಧೈರ್ಯವನ್ನು ತಾಳ ಅರಸನೊಡನೆ ಪ್ರಭುವೇ, ನನ್ನ ವಿಜ್ಞಾಪನೆಯನ್ನು ಚಿತ್ತಕ್ಕೆ ತರಬೇಕು, ಏನಂದರೆ, ಉರುಳುವ ಗುಂಡಿನ ಮೇಲೆ ಇಟ್ಟ ವಸ್ತುವೂ ದುರುಳನಾಗಿ ಪ್ರಜೆಗಳ ಕಷ್ಟ ಪಡಿಸುವ ರಾಯನ ತಲೆಯ ಮೇಲೆ ಇಟ್ಟ ಕಿರೀಟವೂ ಸ್ಥಿರವಾಗಿ ನಿಲ್ಲಲಾರದು, ಈ ಮಾತು ನಾನು ಮಾತ್ರ ಆಡುತ್ತೇನೆಂದು ಆಗ್ರಹಪಡ ಕೆಲಸವಿಲ್ಲ, ನಮ್ಮ ರಾಜ್ಯದಲ್ಲಿರುವ ಆಬಾಲ ವೃದ್ಧರಾದ ಎಲ್ಲಾ ಪ್ರಜೆಗಳೂ ಪ್ರಕಟವಾಗಿ ಕೂಗುತ್ತಾರೆ, ನಾವು ಮಾಡುವ ಕಾರಬಾರದಿಂದ ಪ್ರಜೆಗಳಿಗೆ ಬಹಳ ತೊಂದರೆ ಸಂಭವಿಸಿ ಅನ್ನ ವಸ್ತ್ರಗಳಿಗೆ ಸಹ ಇಲ್ಲದೆ ಅಲೆಯುತ್ತಾರೆ, ನಿಶ್ಚಯವಾಗಿ ರಾಜ್ಯ ಕ್ಷೋಭೆಯಿಂದ ರಾಯನಿಗೆ ಕೇಡು ಬರುವದು, ರಾಯನು ಕೆಟ್ಟು ಹೋದ ಕ್ಷಣದಲ್ಲೇ ರಾಜ್ಯವನ್ನು ಪರರಾಯರು ಆಕ್ರಮಿಸಿ ಕೊಳ್ಳುವರು, ಆದ್ದರಿಂದ ಪ್ರಜೆಗಳ ತೊಂದರೆ ಪಡಿಸದವನೇ ಅರಸು, ತೊಂದರೆ ಪಡಿಸಿದವನೇ ಅರಸನು, ಅಂದರೆ ರಸವಿಲ್ಲದವನೆಂತ ಅರ್ಥವು, "ರಸವಿಲ್ಲದರಸು ಕಸಕ್ಕಿಂತಲೂ ಕಡೆ" ಎಂಬ ಗಾದೆಗೆ ಸರಿಯಾಗಿ ನಮಗೆ ಕಷ್ಟಗಳು ಸಂಭವಿಸುವದೆಂದು ಖಂಡಿತವಾಗಿ ಅರಿಕೆ ಮಾಡಿದ್ದೇನೆ, ಶತ್ರುಸೈನ್ಯವೆಂಬ ದೊಡ್ಡ ಮಳೆ ಬಂದು, ಪ್ರಜಾಕ್ಷೋಭ ರಾಜ್ಯವೆಂಬ ಅಸತ್ತಾದ ಕೆರೇ ಕಟ್ಟೆ ಕಿತ್ತು ಹೋದ ತರುವಾಯ ದುಃಖ ಪಟ್ಟು ಪ್ರಯೋಜನ ವೇನು ? ಅಂಥಾ ದುಃಖಕ್ಕೆ ಆಸ್ಪ

ದ ಕೊಡದೆ ಮುಂಚಿತವಾಗಿಯೇ ನೀತಿ ನ್ಯಾಯ ವೆಂಬ ಕಲ್ಲು ಕೆ
ಲಸ ಮಣ್ಣು ಕೆಲಸಗಳಿಂದ ಕೆರೆಕಟ್ಟೆಯನ್ನು ಭದ್ರಪಡಿಸಿ ನೆಲೆ
ಗೊಳಿಸಬೇಕೆಂದು ಹೇಳಿದನು. ಆ ಮಾತನ್ನು ಮನಸ್ಕರಿಸಿ
ರಾಯನು ಅದು ಮೊದಲು ಶೀಮೆಯ ಪ್ರಜೆಗಳಿಗೆ ಅನ್ಯಾಯ
ಅಷಡ್ಡಾಳ ಮಾಡದೆ ನ್ಯಾಯವಾಗಿ ರಾಜ್ಯವನ್ನಾಳುತ್ತಿದ್ದನು. ಪ್ರ
ಜೆಗಳೆಲ್ಲಾ ಸೂಖ್ಯ ಹೊಂದಿದರು. ಹೀಗೆ ತಿದ್ದುಪಾಟು ಮಾಡು
ನ ಮಂತ್ರಿಯುಳ್ಳ ರಾಯನಿಗೂ ರಾಜ್ಯಕ್ಕೂ ಎಂದಿಗೂ ಸೂ
ಖ್ಯ ಉಂಟಾಗುವದು.

ಅರವತ್ತೆಂಟನೇ ಕಥೆ.

ದಾನ ಪಾತ್ರನು.

ಧರ್ಮಪತಿ ಎಂಬ ಪಟ್ಣಕ್ಕೆ ದಾನಶೀಲನೆಂಬ ಅರಸನು ಅಧಿ
ಪತಿಯಾಗಿ ರಾಜಾಧಿರಾಜರ ನಿತ್ಯ ನೇಮಗಳಿಗೆ ಕೊರತೆ ಬಾರ
ದಂತೆ ಪ್ರತಿನಿತ್ಯವೂ ಬಹಳ ಹಿರಣ್ಯದಾನ ಮಾಡುತ್ತಿದ್ದನು
ಅಂದರೆ ನೂರಾರುಮಂದಿ ಬ್ರಾಹ್ಮಣರಿಗೆ ನೂರಾರು ವರಹಾಗಳು
ದಾನ ಕೊಡುತ್ತಾ ಇರುವನು. ಈ ಮೇರಿಗೆ ಕೊಡುವ ಅರಸ
ನ ವರ್ತಮಾನವನ್ನು ಕೇಳಿ ಇಬ್ಬರು ಬ್ರಾಹ್ಮಣರು ದೂರ ದೇ
ಶದಿಂದ ಬಂದರು. ಅವರಲ್ಲಿ ಒಬ್ಬನು ವಿದ್ಯೆ ಕಲಿತವನಾಗಿಯೂ
ಮತ್ತೊಬ್ಬನು ವಿದ್ಯೆ ಕಲಿಯದವನಾಗಿಯೂ ಇದ್ದನು. ಅವ
ರಿಬ್ಬರಿಗೂ ತಲಾ ಒಂದೊಂದು ವರಹಾ ಮೇರಿಗೆ ಅರಸು ದಾನಾ
ಕೊಟ್ಟನು, ಆಗ ಆ ಕಲಿತವನು ಹೊಟ್ಟೆಕಿಚ್ಚಿನಿಂದ ಎಲೈ
ಅರಸೇ, ನಾನು ವಿದ್ಯ, ಬುದ್ಧಿ, ಚಾಕಚಕ್ಯ ಚಮತ್ಕಾರಗ

ಳನ್ನೆಲ್ಲಾ ತಿಳಿದವನು, ಆತ್ಮಸ್ತುತಿ ಪರನಿಂದೆ ಮಾಡುವವ
ಲ್ಲ, ಈ ವಿಪ್ರನು ನಿರಕ್ಷರಕುಕ್ಷಿ, ತುಂಟನು, "ಗೋತ್ರವರಿ
ಹೆಣ್ಣು ಕೊಡು, ಪಾತ್ರವರಿತು ಹೊನ್ನುಕೊಡು" ಎಂದು ನೀ
ವಾಕ್ಯವಿರಲಾಗಿ, ಪಾತ್ರಾ ಪಾತ್ರ ವಿವೇಕವಿಲ್ಲದೆ ಇವನಿಗೂ ನ
ಗೂ ಸರಿಯಾಗಿ ದಾನ ಕೊಡ ಬಹುದೋ? ಅಂದನು. ಅ
ಕ್ಕರಸು ಏನೂ ಪ್ರತ್ಯುತ್ತರ ಕೊಡದೆ ಆ ದಿನ ಸುಮ್ಮನೆ ಇದ
ಮರುದಿವಸ ದಾನಕಾಲದಲ್ಲಿ ಸಿದ್ಧವಾಗಿದ್ದ ಈ ಇಬ್ಬರಲ್ಲಿ ಹೊ
ಕಿಚ್ಚಿನವನಿಗೆ ಯಥಾಪ್ರಕಾರವಾಗಿ ಒಂದು ವರಹಾ ಕೊಟ್ಟ
ಎರಡನೇ ಬ್ರಾಹ್ಮಣನಿಗೆ ಎರಡು ವರಹಾ ಕೊಟ್ಟನು. ಆಗ ಈ
ಅಸೂಯೆಗಾರನಿಗೆ ದುಃಖ ಹೆಚ್ಚಾಗಿ ಮತ್ತಷ್ಟು ಆಕ್ಷೇಪಿಸಿದನ
ರಾಯನು ನಕ್ಕು ಸುಮ್ಮನೆ ಇರು ಎಂದು ಗದರಿಸಿ ಕಳ
ಹಿಸಿದನು.

ಅರವತ್ತೊಂಭತ್ತನೇ ಕಥೆ.

ಪಟಾಟೋಪ.

ಒಬ್ಬ ವಿದ್ವಾಂಸನು ಧನ ಗೌರವಗಳನ್ನು ಸಂಪಾದಿಸ ಬೆ
ಕೆಂದು ಹೊರಟು ದೇಶ ಸಂಚಾರ ಮಾಡುತ್ತಿರಲು, ಮಾರ್ಗಾ
ಯಾಸದಿಂದ ಬಂದ ರೋಗಾದಿಗಳನ್ನು ಸ್ವಸ್ಥ ಮಾಡಿ ಕೊ
ತಕ್ಕ ಬಗ್ಗೆ ಕೈಲಿದ್ದ ಹಣಕಾಸೆಲ್ಲಾ ವೆಚ್ಚವಾಗಿ ಹೋದದ್ದಲ್ಲದೆ
ಉಟ್ಟು ಹೊದ್ದು ಕೊಳ್ಳುವದಕ್ಕೆ ಅನುವಾದ ಬಂದು ವಸ್ತ್ರ ಸ
ಇಲ್ಲದೆ ದೇಹ ಪೋಷಣೆ ಕಡನಿಯಾದ್ದರಿಂದ ವಿರೂಪವಾಗಿ ಬಹ
ಕಷ್ಟ ದಶೆಯನ್ನು ಅನುಭವಿಸುತ್ತಾ ಬಂದು ದೊಡ್ಡ ಊರಿಗೆ ತ

ುದನು. ಆ ಊರಿನಲ್ಲಿ ಪ್ರತಿಷ್ಠಾಕಾಮಿಯಾಗಿ ಮಾರ್ಗಸ್ಥರಿಗೆ
ನ್ನಾ ಕೊಡುವ ಒಬ್ಬ ಗ್ರಹಸ್ಥನಿದ್ದನು. ಅವನು ಅಲ್ಪ ಸ್ವಲ್ಪ
ಯಾಚಕ ಸಹ ಕೊಡುವದುಂಟು, ಆದ್ದರಿಂದ ಉದಾರಿ ಎಂಬ
ಸರು ಪಡದಿದ್ದನು. ಅವನ ಮನೆಗೆ ಈ ವಿದ್ವಾಂಸನು ವಸ್ತ್ರ
ಾರ್ಪಣ್ಯದಿಂದ ಅನ್ನಾತುರನಾಗಿ ಬರಲು, ಅವನು ಇವನ
ನ್ನು ನೀನು ಯಾರು? ಎಲ್ಲಿಂದ ಬಂದಿ? ಎಂದು ವಿಚಾರಿಸದೆ ಇ
ದ್ದಲ್ಲದೆ, ಕೂತುಕೊಳ್ಳುವದಕ್ಕೆ ಸ್ಥಳ ಸಹ ಕೊಡಲಿಲ್ಲ. ಅದ
ೋಡಿ ವಿದ್ವಾಂಸನು ಆ ದಿವಸ ಮತ್ತೊಂದು ಮನೆಗೆ ಭೋ
ನಕ್ಕೆ ಹೋಗಿ ಮಾರನೇ ದಿನ ಧೌತ ಅಂಗವಸ್ತ್ರ ತ
ಗೆ ಸುತ್ತಿಕೊಳ್ಳುವದಕ್ಕೆ ಶಾಲು ಸಹ ಎರವು ಸಂಪಾದಿಸಿಕೊಂ
ು ಚನ್ನಾಗಿ ಗರಿಮುರಿಯಾಗಿ ಪುನಃ ಆ ಉದಾರಿಯ ಮನೆಗೆ
ರುತ್ತಿದ್ದನು. ಅವನನ್ನು ಆ ಮನೆಯವನು ದೂರದಲ್ಲಿ ಕಂ
ು ಎದ್ದು ನಿಂತು ಎದುರಾಗಿ ಬಂದು ಕಾಲುಮುಟ್ಟಿ ನಮಸ್ಕಾರ
ಾಡಿ, ಹಸ್ತಲಾಘವ ಕೊಟ್ಟು ಮನೆಯ ಒಳಗೆ ಕರಕೊಂಡು
ಣೆ ಹಾಕಿ ಕುಳ್ಳಿರಿಸಿ, ಯೋಗಕ್ಷೇಮ ವಿಚಾರಿಸಿ, ಕಾದಿದ್ದ ಹಂ
ಯ ಬಿಸಿನೀರಿನಿಂದ ಸ್ನಾನ ಮಾಡಿಸಿ ಅವನಿಗೆ ಮಕುಟವನ್ನು
ುಡಿಯುಡುವದಕ್ಕೆ ಕೊಟ್ಟು, ತನ್ನ ಪಜ್ಜಿಯಲ್ಲಿ ಮೃಷ್ಟಾನ್ನ
ೋಜನವನ್ನು ಇಡಿಸಿದನು. ಆ ವಿದ್ವಾಂಸನು ಭೋಜನಕ್ಕೆ
ುಳಿತ ಕೂಡಲೇ ಮೊದಲು ಕಬಳವನ್ನು ಎತ್ತಿ ಹೊದ್ದ ವಸ್ತ್ರ
ಮೇಲೆ ಇಟ್ಟನು. ಇದೇನೆಂದು ಆಶ್ಚರ್ಯದಿಂದ ಮನೆಯವನು
ೀಳಲು, ವಿದ್ವಾಂಸನು ಎಲೈ ಗ್ರಹಸ್ಥನೇ, ನೀನಿಟ್ಟ ಮೃಷ್ಟಾ
ವು ಈ ವಸ್ತ್ರ ಗಳಿಗಲ್ಲದೆ ನನಗಲ್ಲ, ಯಾಕಂದರೆ, ವಸ್ತ್ರಹೀನ
ಗಿ ನಿನ್ನೆ ದಿವಸ ಬಂದಿದ್ದೆ, ನನ್ನನ್ನು ಸ್ವಲ್ಪವಾದರೂ ಪರಾಂ,

ಬರಿಸದೆ ಅನಾದರಣೆ ಮಾಡಿದಿಯಲ್ಲಾ, " ಪಟಾಟೋಪೋ ಭಯಂಕರಃ " ಎಂಬ ನೀತಿ ವಾಕ್ಯಕ್ಕೆ ಸರಿಯಾಗಿ ಎರವಲಾಗಿ ಉಟ್ಟು ಕೊಂಡು ಹೊದ್ದುಕೊಂಡು ಬಂದ ಈ ವಸ್ತ್ರಗಳ ಆಟೋಪಕ್ಕೆ ಬಹಳ ಭಯ ಪಟ್ಟವನ ಹಾಗೆ, ನನಗೆ ಉಪಚಾರಗಳನ್ನು ಮಾಡಿದಿಯಷ್ಟೆ, ನಿನ್ನ ಹಾಗೆ ಸಾಮಾನ್ಯರು ಲೋಕದಲ್ಲಿ ಬಹಳ ಮಂದಿ ಉಂಟು, ಪಾರಮಾರ್ಥಿಕರನ್ನು ಹುಡುಕಿ ಹಿಡಿಯುವದು ಬಹಳ ಕಷ್ಟವಾಗಿರುವದೆಂದನು. ಈ ಮಾತುಗಳನ್ನೆಲ್ಲಾ ಕೇಳಿ ಮನುಷ್ಯನು ನಾಚಿಕೆ ಪಟ್ಟು ಭೋಜನವಾದ ತರುವಾಯ, ವಸ್ತ್ರ ತಾಂಬೂಲ ದಕ್ಷಿಣೆ ಸಹ ವಿನಯದಿಂದ ಕೊಟ್ಟು ನಮಸ್ಕರಿಸಿ ಸಮಾಧಾನ ಪಡಿಸಿ ಕಳುಹಿಸಿದನು. ಹೀಗೆ ಯಾರಿಗಾದರೂ ಸರಿ ವಸ್ತ್ರವೇ ಭೂಷಣ.

ಎಪ್ಪತ್ತನೇ ಕಥೆ.

ಒಕ್ಕಲಿಗನ ಮೊಂಡತನ.

ಚಂಡಿ ಎಂಬ ಪಟ್ಣಕ್ಕೆ ಶೇರಿದ ರಾಜ್ಯವನ್ನು ಚಂದ್ರಶಾಸನೆಂಬ ರಾಯನು ಆಳುತ್ತಿರುವಲ್ಲಿ ಪ್ರಜೆಗಳು ಅನ್ಯಾಯದ ತೆರಿಗೆ ದಂಡ ದ್ರೋಹಗಳಿಗೆ ಗುರಿಯಾಗಿ ಇದ್ದರು. ಆಗ ಮುಂಡೂರೆಂಬ ಗ್ರಾಮದಲ್ಲಿ ಮೊಂಡುನಾಗನೆಂಬ ಒಬ್ಬ ರೈತನು ಬಲು ಪುಂಡುಗಾರನಾಗಿದ್ದನು. ಅವನು ತಾನು ಮಾಡುವ ಹೊಲ ಗದ್ದೆ ತೋಟ ಮುಂತಾದ ಭೂಮಿಗಳಿಗೆ ದಂಡ ತೆತ್ತು ತೆತ್ತು " ತಿಂಬುವ ಹಿಟ್ಟು ಬೆಲ್ಲವಾಗಿ ತಿಕದ ಮೇಲಿನ ಬಟ್ಟೆ ಹಾವಾಗಿ " ಎಂಬ ಗಾದೆಗೆ ಸರಿಯಾಗಿ ಬಡವರೊಳಗೆಲ್ಲಾ ಅತಿ ಬಡವನಾದನು

ಹಾಗಾದರೂ ತೆರುವ ದಂಡ ತಪ್ಪದೆ ಹೋದ್ದರಿಂದ ಅವನು "ಧೊ
ತ ತನಕ ದೂರು, ಹೊಳೆತನಕ ಓಟ" ಎಂಬ ಸಾಮತಿಯನ್ನು
ನೆನಸಿಕೊಂಡು, ಅರಮನೆಯವರು ತೆರಿಗೇ ಹಣಕ್ಕೆ ಮನೇ ಬಾ
ಗಲು ಬಿರೀ ಕಟ್ಟಿ ಮುದೆ ಹಾಕಲು, ಕೋರಿ ಕಂಬಳಿ ಮೇಲೆ ಹಾ
ಕಿಕೊಂಡು, ಬಂದೇ ಓಟಕ್ಕೆ ಅರಸನ ಬಳಿಗೆ ಬಂದು ಅಡ್ಡಬಿದ್ದ
ನು. ಏನೆಂದರಸನು ಕೇಳಲು, ಸೋಮಿಾ, ಬುದ್ದಿ, ಹನ್ನೆರಡು
ವರುಷದಿಂದ ಅನ್ಯಾಯದ ದಂಡಾ ತೆತ್ತು ತೆತ್ತು ನನ್ನ ಮನೆ
ಕಾಳಾಗಿ ಹೋಯಿತು, ಅರಮನೆ ಎಂದಿಗೆ ಹಾಳಾದಿತೋ ಎಂದು
ನೋಳುವದಕ್ಕೆ ಬಂದಿದ್ದೇನೆ, ನನ್ನ ತೆರಿಗೆ ಹಣವೆಲ್ಲಾ ಬಿಡಿಸಿ
ಬಿಟ್ಟರೂ ಸರಿಯೇ, ಎಲ್ಲಿಗಾದರೂ ಹೋಗೆಂದು ಹೇಳಿದರೂ ಸರಿ
ಯೇ, ಇದರ ಮೇಲೆ ನನ್ನ ಪ್ರಾಣ ತೆಕ್ಕೊಂಡರೂ ಸರಿಯೇ,
ಈ ಮೂರು ಮಾತುಗಳೊಳಗೆ ಯಾವ ಮಾತು ಅಪ್ಪಣೆ ಕೊ
ಡುತ್ತೀರಿ? ಎಂದು ಮೊರೆ ಇಟ್ಟನು. ಅದ ಕೇಳಿ, ಅರಸನು
ಅಲಾ ತುಂಟನೇ, ನೀನು ತೆರತಕ್ಕ ಕಂದಾಯದ ಹಣದಲ್ಲಿ ನೀನು
ಮತ್ತಾಗ್ಯಾ ಒಂದು ಕಾಸು ಬಿಡುವದಿಲ್ಲ, ನಮ್ಮ ಶೀಮೆಯೊಳಗೆ
ಇದ್ದರೆ ಇರು, ಇಲ್ಲದಿದ್ದರೆ ತಲೇ ಮೇಲೆ ಗುಡ್ಡೆ ಹಾಕ್ಕೊಂಡು
ನಿನ್ನ ಮನಸ್ಸು ಬಂದ ಕಡೆಗೆ ಹೋಗೆಂದನು.

ಅದಕ್ಕಾ ಮೊಂಡೊಕ್ಕಲಿಗನು ಒಳ್ಳೇ ಮಾತು, ಒಳ್ಳೇ ಮಾ
ನು, ತೆರಿಗೆ ಬಿಡದ ಪಕ್ಷದಲ್ಲಿ ನಾನು ಹೋಗ ಬೇಕಾದ ತಾವನ್ನು
ತಾವೇ ಅಪ್ಪಣೆ ಕೊಡ ಬೇಕೆಂದನು. ರಾಯನು ಶ್ರೀರಂಗ
ಪಟ್ಣಕ್ಕೆ ಹೋಗೆಂದನು. ರೈತನು ಶ್ರೀರಂಗ ಪಟ್ಣಕ್ಕೆ ನಿಮ್ಮ
ಕಕ್ಕಪ್ಪನೇ ಧೊರೆಯಾಗಿದ್ದಾನೆ, ತಂಜಾವೂರು ಶೀಮೆಗೆ ಹೋ
ಗುವದೀರಿ, ಅದು ನಿಮ್ಮ ತಮ್ಮನ ರಾಜ್ಯ, ಆರುಕಾಟಿಗೆ ಹೋ

ಗಂದರೆ ಅದನ್ನು ನಿಮ್ಮ ಅಣ್ಣನು ಆಳುತ್ತಾನೆ, ಮತ್ತು ಬಂದರ
ಶೀಮೆ ನಿಮ್ಮ ಭಾವನದು, ಮೈಲಾಪೂರು ಚನ್ನಪಟ್ಟಣವು ನಿಮ್
ಮೈದನದು. ನಾನು ಇನ್ನೆಲ್ಲಿಗೆ ಹೋಗಲಿ, "ರಾಮೇಶ್ವರ ಹೊ
ದರೂ ಶನೇಶ್ವರ ಬಿಡದು," ಒಕ್ಕಲಿಗರನ್ನು ಕಾಡಿಸೋದ
ಧೊರೆಗಳಿಗೆ ಬಳ್ಳೀದಲ್ಲ, ಇನ್ನೆಲ್ಲಿಗೆ ಹೋಗೆಂದು ಅಪ್ಪಣೆ ಆಗ
ತ್ತದೆ, ಎಂತ ಘಟ್ಟಿಯಾಗಿ ಕೂಗಿದನು. ರಾಯನಿಗೆ ಕೋಪ ಬ
ದು ಆತನು ಎಲಾ ತುಂಟಾ, ನರಕಕ್ಕೆ ಹೋಗು ಎಂದು ಗದರಿ
ನು. ಒಕ್ಕಲಿಗನು ನರಕಕ್ಕೆ ಹೋದರೂ ಅಲ್ಲಿ ನಿಮ್ಮ ಹೆತ್ತಪ್ಪ
ಮುತ್ತಪ್ಪ ಮುಂತಾದ ಸತ್ತಪ್ಪನವರೆಲ್ಲಾ ಇದ್ದಾರಂತಲ್ಲಾ,
ಲ್ಲಿಗೆ ಹೋಗೋದಕ್ಕಿಂತಲೂ ಕೂಲೋ ನಾಲೋ ಮಾಡಿ ಕೊ
ಡು ಇಲ್ಲಿ ಇರುವದೇ ವಾಸಿ, ಎಂದು ಭಯವಿಲ್ಲದೆ ಮಾತನ
ಡಿದನು. ಬಳಿಕ ರಾಯನು ಆ ಮೊಂಡೊಕ್ಕಲಿಗನ ತೆರಿಗೆ
ಲ್ಲಾ ಬಿಡಿಸಿ ಛೀ! ಎಲ್ಲಿಗಾದರೂ ಹೋಗೆಂದು ತಳ್ಳಿಸಿ ಬಿಟ್ಟನ
ಈ ಮೇರೆಗೆ ಮೊಂಡುತನದಲ್ಲಿ ಬದುಕುವ ಒಕ್ಕಲಿಗರಿಗೆ ತಿಂ
ಗೂ ಇಲ್ಲ, ತುಂಡಕ್ಕೂ ಇಲ್ಲ.

ಎಪ್ಪತ್ತೊಂದನೇ ಕಥೆ.

ಕಾಗಿಯ ಶಕುನ.

ಬೆಳಗಾಗಿ ಏಳುತ್ತಲೇ ಎರಡು ಕಾಗಿಗಳು ಬಂದೇಕಡೆ ಕ
ತಿರುವವನ್ನು ನೋಡಿದರೆ ಬಲು ಬಳ್ಳೀದೆಂಬ ಅವಿವೇಕದ ಪ
ತಿಯನ್ನು ಕೇಳಿ, ಅವಿವೇಕಿಗಳಿಗೆಲ್ಲಾ ಶಿಖಾಮಣಿಯಾದ ಬಿ
ಮನುಷ್ಯನು ತಾನೂ ಹಾಗೆ ಮಾಡ ಬೇಕೆಂದು ತನ್ನ ಮನೆಂ

ಲ್ಲಿರುವ ಆಳನ್ನು ಕರದು, ಎಲಾ ತಿಕ್ಕಲತಿಮ್ಮಾ, ನಾಳೆ ಹೊತ್ತು ಹುಟ್ಟುವದಕ್ಕೆ ಮುಂಚಿತವಾಗಿ ಜೋಡು ಕಾಗಿಗಳನ್ನು ನೋ ತಿ ಬಂದು ನನ್ನನ್ನು ಎಬ್ಬಿಸೆಂದು ರಾತ್ರಿಯೇ ಹೇಳಿ ಇದ್ದನು. ತ ಆಳು ಅದೇ ಮೇರಿಗೆ ಊರು ಮುಂದಿನ ಹುಂಗೇ ಮರದ ಮೇಲಿದ್ದ ಜೋಡು ಕಾಗಿಗಳನ್ನು ಕಂಡು ಬಂದು, ಅಪ್ಪಾ, ಬೇಗ ಏಳು, ಕಾಗಿಯ ಜೋಡು ನೋಡು, ಎಂದೆಬ್ಬಿಸಿದನು. ಈ ಅವಿವೇಕಿಯು ಬೆಬ್ಬರಿಸಿ ಕೊಂಡು ದಿಗ್ಗನೆ ಎದ್ದು ಕಣ್ಣೂರ ಸುತ್ತಾ, ತನ್ನ ತಲಬಾಗಲಿಗೆದುರಾಗಿ ಕಾಣಿಸುವ ಊರು ಮುಂ ಏನ ಹುಂಗೇ ಮರದ ಮೇಲೆ ನೋಡಲು, ಆಳು ಕಂಡು ಬಂದು ಹೇಳಿದ ಎರಡು ಕಾಗಿಗಳಲ್ಲಿ ಬಂದು ಓಡಿಹೋಗಿ ಎರಡನೇದು ಮಾತ್ರ ಕರ್ರ ಕರ್ರೆಂದು ಕೂಗುತ್ತಾ ಕೂತಿರುವದನ್ನು ಕಂಡು, ಎಲಾ ತಿಕ್ಕಲತಿಮ್ಮಾ, ನಾನು ಹೇಳಿದ ಹಾಗೆ ಎರಡು ಕಾಗಿಗಳಿ ಲ್ಲದೆ ಬಂದೇ ಕಾಗಿ ಮಾತ್ರ ಕೂತಿರುವಾಗ ನನ್ನನ್ನು ಎಬ್ಬಿಸಿದಿ ಯಲ್ಲದೆ ಮೊದಲೇ ಎಬ್ಬಿಸದೆ ಹೋದಿಯಲ್ಲಾ, ಎಂದು ಕೋಪ ಗೊಂಡು ಆ ಆಳನ್ನು ಕೆನ್ನೆಗೆ ಹೊಡದು ಕಿವಿ ಹಿಂಡಿ ಬೈದು, ಕಾಲಲ್ಲಿ ಒದ್ದನು. ಆಗ ಆಳು, ಅಯ್ಯೋ! ಅಪ್ಪಾ, ನಿನ್ನ ನಾತಿನ ಮೇರಿಗೆ ಹೊತಾರೇ ಹೊತ್ತು ಜೋಡು ಕಾಗಿಗಳನ್ನು ನೋಡಿ ಬಂದದ್ದಕ್ಕೆ ನನಗೆ ಪೂರಾ ಶಾಂತಿ ಆಯಿತು, ನಿನಗೂ ನಾಳೆ ದಿವಸ ಬೇಕಾದರೆ ಆದೀತು, ಎಂದು ಹೇಳಿದನು. ಅದ ಕೇಳಿ ಎಜಮಾನನು ನಾಚಿಕೆ ಪಟ್ಟು, ಎಲಾ ತಿಮ್ಮಪ್ಪಾ, ನೀನು ತಿಕ್ಕಲ ತಿಮ್ಮನಲ್ಲ, ನಾನೇ ತಿಕ್ಕಲ ತಿಮ್ಮನು, ನೀನು ಬು ಕ್ಕಲ ತಿಮ್ಮನು, ಎಂದು ಸಮಾಧಾನ ಪಡಿಸಿದನು. ಇದೇ ಜ್ಞಾನಸಗಾರರ ಸಂಗತಿಯು.

ಎಪ್ಪತ್ತೆರಡನೇ ಕಥೆ.

ತಂತ್ರಗಾರನು.

ಕಾಶೀ ದೇಶದಿಂದ ಒಬ್ಬ ತಂತ್ರಗಾರನು ಹೊರಟು ದೇ
ಸಂಚಾರ ಮಾಡುತ್ತಾ, ಮಾರ್ಗದಲ್ಲಿ ನಿಷ್ಕಪಟಿ ಎಂಬ ರಾಯ
ನಾಳುವ ನೇತ್ರಾವತಿ ಎಂಬ ಪಟ್ಟಣಕ್ಕೆ ಬಂದು ಬಹಳ ಡಾಂಭಿಕ
ತನವನ್ನು ವಹಿಸಿ ರಾಜಸ್ಥಾನವನ್ನು ಪ್ರವೇಶಿಸಿ ರಾಯನನ್ನು
ಕಂಡು ವಿದ್ವಾಂಸರ ಮರ್ಯಾದೆ ಪ್ರಕಾರಕ್ಕೆ ಕೊಂಡಾಡಿ ಹೊ
ಗಳಿದನು. ರಾಯನು ಅವನನ್ನು ನೋಡಿ ನೀನ್ಯಾರು? ಎ
ಲ್ಲಿಂದ ಬಂದಿ? ನಿನಗೆ ಯಾವ ವಿದ್ಯದಲ್ಲಿ ಪರಿಚಯ ಉಂಟು
ಎಂದು ಕೇಳಲು, ತಂತ್ರಗಾರನು ನಾನು ಗೋಕುಲ ಬೃಂದಾವನ
ದಿಂದ ಬಂದು ಕಾಶಿಯಲ್ಲಿ ದೊಡ್ಡ ವಿದ್ವಾಂಸನಾಗಿ ಸರ್ವತಂತ್ರ
ನೆಂಬ ಬಿರಿದಿನ ಘಂಟೆ ಕಟ್ಟಿ ಇದ್ದೇನೆ, ಈಗ ನಿಂತಿರುವ ಸ
ಮುದ್ರವನ್ನಾದರು ಕುಡಿಯ ಬಲ್ಲೆನು, ನನ್ನ ವಿದ್ಯೆಯನ್ನು ಪರೀ
ಕ್ಷಿಸಿ ನೋಡಿ ಸಂತೋಷ ಪಡುವ ಪ್ರಭು ಸಾರ್ವ ಭೌಮನು
ನೀನೇ ಸರಿ, ಎಂದು ಬಹಳವಾಗಿ ಕೊಂಡಾಡಲು, ರಾಯನಿಗೆ ಉ
ಬ್ಬಟಿ ಹುಟ್ಟಿ ಸಮುದ್ರವನ್ನು ಪಾನಾ ಮಾಡುವ ಕೆಲಸವು ಅಗ
ಸ್ತ್ಯ ಮಹಾ ಮುನೀಶ್ವರನಿಂದ ಹಿಂದಕ್ಕಾಯಿತೆಂಬ ಪುರಾಣ
ವಚನಗಳನ್ನು ಕೇಳಿ ಇದ್ದೇವೆ, ಈಗ ನೀನು ಸಮುದ್ರವನ್ನು
ಕುಡಿದರೆ ಈ ಮಹದಾಶ್ಚರ್ಯವನ್ನು ನೋಡ ಬೇಕಾದ್ದೇ
ಸರಿ, ಅದಕ್ಕೆ ನಿನಗೆ ಏನು ಆಯಿಕಟ್ಟು ಮಾಡಿಸಿ ಕೊಡಬೇ
ಕೆಂದು ಕೇಳಿದನು. ಅದಕ್ಕಾ ತಂತ್ರಗಾರನು ಈಗ ಸಾವಿರ
ವರಹಾ ಕೊಟ್ಟರೆ ಕುಂಭ ಸಂಭವನಾದ ಅಗಸ್ತ್ಯ ಮಹಾ
ಮುನಿಯನ್ನು ಉಪಾಸನ ಪೂರ್ವಕವಾಗಿ ಪ್ರಾರ್ಥಿಸಿ ಕಾ

ರ್ಮವನ್ನು ನೆರವೇರಿಸುವೆನು, ತರುವಾಯ ನನಗೆ ಅಗತ
ಕ್ಕ ಬಹುಮಾನವನ್ನು ನಡಿಸ ತಕ್ಕದ್ದು ತಮ್ಮನ್ನ ಶೇರಿ
ನಿರುತ್ತದೆಂದನು. ಅದೇ ಪ್ರಕಾರಕ್ಕೆ ರಾಯನು ಮೂರು
ಸಾವಿರದ ಐನೂರು ರೂಪಾಯನ್ನು ಖಜಾನೆಯಿಂದ ಕೊಡಿಸಿ
ಕೊಟ್ಟನು. ಅದನ್ನೆಲ್ಲಾ ತೈಲಿ ಬಂದಕ್ಕೆ ಐನೂರು ರೂಪಾಯಿ
ಪ್ರಕಾರ ಏಳು ತೈಲಿಗಳಾಗಿ ಕಟ್ಟಿ ರಹಸ್ಯವಾದ ಸ್ಥಳಗಳಲ್ಲಿ ಬ
ಚ್ಚಿಟ್ಟು, ತಂತ್ರಗಾರನು ಸಮುದ್ರತೀರಕ್ಕೆ ಹೋಗಿ ಕುಳಿತು,
ನ ಮಧ್ಯಾಹ್ನದ ಮೇಲೆ ರಾಯನನ್ನು ಬರ ಹೇಳಿ ವರ್ತಮಾ
ನ ಕೊಟ್ಟನು. ರಾಯನು ಪರಿವಾರದೊಡನೆ ಬಂದು ತಂತ್ರ
ಗಾರನನ್ನು ಕುರಿತು ಯಾಕೆ ಸಾವಕಾಶ ಮಾಡುತ್ತೀ? ಕಡಲ
ನ್ನು ತಡಿಬಡಿ ಯಿಲ್ಲದೆ ಕುಡಿದು ಬಿಡು, ನೋಡೋಣ, ಎನ್ನಲು,
ತಂತ್ರಗಾರನು ಎಲ್ಲೆ ಒಡೆಯನೇ, ಪಡವಲು ಬಡಗಲು ಮೂ
ಕಲು ಈ ಮೂರು ಕಡೆಗಳಿಂದ ಸಮುದ್ರದಲ್ಲಿ ಬಂದು ಬೀಳುವ
ಹೊಳೆಗಳನ್ನು ಬಾರದ ಹಾಗೆ ಅವುಗಳ ಬಾಯಿಗಳನ್ನು ಕಟ್ಟಿ
ಬಿಟ್ಟಿನು. ತೆಂಕಲಾದ ದಕ್ಷಿಣ ದೇಶದಲ್ಲಿ ಹರಿಯುವ ಕಾವೇರಿ
ನದಿಯ ಮುಖವನ್ನುಮಾತ್ರ ನನ್ನ ಮಂತ್ರ ಶಕ್ತಿಯಿಂದ ಕಟ್ಟುವ
ಕ್ಕೆ ಅಸಾಧ್ಯವಾಗಿ ಇದೆ, ಪ್ರಭುವಾದ ನೀನು ಇಷ್ಟು ಮಾತ್ರ
ಮಂದೋಬಸ್ತು ಮಾಡಿಸಿ ಕೊಟ್ಟರೆ, ಮೇಲು ನೀರು ಬಂದು
ಳೀಳದೆ ನಿಂತ ಸಮುದ್ರವನ್ನು ತುಸ ನೀರು ಸಹ ಯಿಲ್ಲದಹಾಗೆ
ಈ ಕ್ಷಣವೇ ಕುಡಿದು ಬಿಡುತ್ತೇನೆಂದನು. ಅವನ ತಂತ್ರಕ್ಕೆ
ರಾಯನು ನಕ್ಕು ಅಗಸ್ತ್ಯರಿಗೆ ಪ್ರತಿ ಕಕ್ಷಿಯಾಗಿ ಸಮು
ದ್ರವನ್ನು ಕುಡಿಯುವದಕ್ಕೆ ಸಿದ್ಧವಾದ ನಿನ್ನನ್ನು ಅದೇ ಸ
ಮುದ್ರದಲ್ಲಿ ಕಟ್ಟಿ ಹಾಕಿಸಿ ಬಿಡುತ್ತೇನೆಂದು ಬೆದರಿಸಲು, ತಂತ್ರ

ಗಾರನು ಹಾಗೆ ತಾವು ಮಾಡಿಸಿದರೆ ಮಡಿದು ಹೋಗುತ್ತೇನೆ, ಕ
ಡಿಯುವದು ಮಡಿಯುವದು ಎರಡೂ ನನ್ನಪಾಲಿಗೆ ಬಂದೇ ಆ
ವೋ ? ಅಂದನು. ಈ ಮೇರಿಗೆ ತಂತ್ರಗಾರರು ಎಷ್ಟಕ್ಕಂ
ರೆ ಅಷ್ಟಕ್ಕೆ ಸಿದ್ಧವಾಗಿ ಇರುವರು.

ಎಪ್ಪತ್ಮೂರನೇ ಕಥೆ.

ರಾಜ ಪದ್ಧತಿ.

ರಾಜಕೇಸರಿ ಎಂಬ ರಾಯನು ಧರ್ಮದಿಂದ ರಾಜ್ಯವನ್ನಾಳ
ತ್ತಿರುವಾಗ ಸಕಲ ಪ್ರಜೆಗಳೂ ತಮ್ಮ ತಮ್ಮ ಸ್ವಧರ್ಮಗಳ
ತಪ್ಪದ ಹಾಗೆ ನಡಿಯುತ್ತಿರುವರು. ಅದರಿಂದಲೇ ಕಾಲ ಕಾ
ಕ್ಕೂ ತಪ್ಪದ ಹಾಗೆ ಮಳೆ ಬಿದ್ದು ಬೆಳೆಯಾಗಿ ಪ್ರಜೆಗಳಿಗೆ ಸಂ
ತೋಷವೂ ಅರಮನೆಗೆ ಹಣವೂ ಹುಟ್ಟುತ್ತಿರುವದು. ರಾಯನ
ಆ ಬಂದ ಹಣದಲ್ಲಿ ಬಂದು ಪಾಲು ಬೊಕ್ಕಸಕ್ಕೆ ಶೇರಿಸಿ, ವಿ
ಕ್ಕ ಐದು ಪಾಲನ್ನು ಧರ್ಮ ವೆಚ್ಚ ಮಾಡುತ್ತಾ ಧರ್ಮಾತ್ಮನೆ
ದು ಹೆಸರು ಪಡದು ಬಹು ಕಾಲ ರಾಜ್ಯವನ್ನಾಳಿ ಮುದಕನಾ
ತರುವಾಯ ತನ್ನ ಹಿರಿಯ ಮಗನನ್ನು ಕರದು, ಎಲೈ ಮಗ
ನೇ, ಬಹುಕಾಲ ರಾಜ್ಯಭಾರಾ ವಹಿಸಿದ ನನ್ನ ಭುಜಗಳು ಈಗ
ಮುಪ್ಪಿನಿಂದ ಅದನ್ನು ವಹಿಸಲಾರವು, ನೀನು ರಾಜ್ಯಭಾರವನ್ನು
ವಹಿಸಿ ನನಗೆ ವಿಶ್ರಾಂತಿಯನ್ನು ಕೊಟ್ಟಿಯಾದರೆ ನಾನು ನಿಶ್ಚಿಂ
ತೆಯಾಗಿ ಪರಲೋಕ ಸುಖವನ್ನು ಸುಪುತ್ರನಾದ ನಿನ್ನ ಸಹಾ
ಯದಿಂದ ಸಂಪಾದಿಸುವೆನು, ರಾಜ್ಯಭಾರವು ಸಾಮಾನ್ಯವೆಂದೆ
ಸಬೇಡ, ಬುದ್ಧಿವಂತನಾದ ಮಂತ್ರಿಯ ಮುಖದಿಂದ ಎಲ್ಲಾ ಆಲೋ
ಚನೆಗಳನ್ನು ಕೇಳುತ್ತಾ, ಸೇನೆಯನ್ನೂ ಭಂಡಾರವನ್ನೂ ದಿನ

ನಕ್ಕೂ ವೃದ್ಧಿ ಮಾಡುತ್ತಾ, ಪ್ರಜೆಗಳ ಸಂತೋಷ ಪಡಿಸುವ
ೀ ರಾಯನಿಗೆ ಲಾಭವು, ದುಃಖಪಡಿಸುವದೇ ಕಷ್ಟವು, ಎಂಬ
ಜ ನೀತಿಯನ್ನೆಲ್ಲಾ ವಿವರಿಸಿ, ತರುವಾಯ ಮಗನಿಗೆ ಪಟ್ಟಾಭಿ
ೀಕ ಮಾಡಿ, ತಾನು ನಿಶ್ಚಿಂತೆಯಾಗಿ ಸುಖ್ಯ ಹೊಂದಿದನು. ಇ
ೀ ರಾಜ ಪದ್ಧತಿಯು.

ಎಪ್ಪತ್ನಾಲ್ಕನೇ ಕಥೆ.

ವಿದ್ಯಾಗರ್ವ.

ಒಂದು ಅಗ್ರಹಾರದಿಂದ ನಾಲ್ಕು ಮಂದಿ ಬ್ರಹ್ಮಚಾರಿಗಳು
ದ್ಯಾರ್ಥಿಗಳಾಗಿ ದೇಶಾಂತರಕ್ಕೆ ಹೋಗಿ ಅಲ್ಲಿ ಮಂತ್ರ ಶಾಸ್ತ್ರ
ೂದಲಾದ ವಿದ್ಯೆಗಳನ್ನೆಲ್ಲಾ ಕಲಿಯಲಾರಂಭಿಸಿದರು. ಆಗ ಅ
ರಲ್ಲಿ ಮೂರು ಮಂದಿ ಮಹಾ ಮಂತ್ರವಾದಿಗಳಾದರು, ನಾಲ್ಕ
ೀಯವನು ಮನಸ್ಸು ಕಲಗಿಸಿ ಹುಚ್ಚು ಹಿಡಿಸುವ ಮಂತ್ರ
ಳಿಂದ ಏನೂ ಪ್ರಯೋಜನವಿಲ್ಲವೆಂದು ಲೋಕದ ನಡತೆಗಳೇ
ುಖ್ಯವಾಗಿ ತಿಳಿಯತಕ್ಕದ್ದಾಗಿವೆ ಎಂಬ ಬುದ್ಧಿವಂತಿಕೆಯಿಂದ
ಕಲ ಕಾರ್ಯಗಳನ್ನು ತನ್ನಲ್ಲಿ ತಾನೇ ಆಲೋಚಿಸಿ, ಭದ್ರ
ಡಿಸುತ್ತಾ, ಹೊರಗೆ ನೋಡಿದವರಿಗೆ ತನಗೇನೂ ತಿಳಿಯದೆಂಬ
ಾಗೆ, ಬೂದೀ ಮುಚ್ಚಿದ ಕೆಂಡದೋಪಾದಿಯಲ್ಲಿ ಇದ್ದನು.
ವನ ಮನಸ್ಸನ್ನು ಮೂರನೇಯವನು ತಿಳಿದವನಾಗಿದ್ದನು, ಕ
ಮ್ಮಿ ಇಬ್ಬರೂ ವಿದ್ಯಾ ಮದದಿಂದ ಈ ನಾಲ್ಕನೇಯವನನ್ನು
ಲ್ಲಗಳೆಯುತ್ತಾ ಇರುವರು. ಹೀಗೆ ಈ ನಾಲ್ವರೂ ತಮ್ಮ
ೀಶಕ್ಕೆ ಪುನಃ ಬರುತ್ತಿರುವಾಗ ಮಾರ್ಗದಲ್ಲಿ ಸತ್ತು ಬಿದ್ದಿರುವ
ುಲಿಯನ್ನು ಕಂಡರು. ತಮ್ಮ ಮಂತ್ರ ಬಲದಿಂದ ಆ ಹು

ಲಿಯನ್ನು ಬದುಕಿಸಿ ನೋಡ ಬೇಕೆಂತ ಅವರಲ್ಲಿ ಇಬ್ಬರು
ಹೇಳಿದರು. ಅದ ಕೇಳಿ ನಾಲ್ಕನೇಯವನು ಮೂರನೇಯವ
ನಿಗೆ ಕೇಳಿಸುವ ಹಾಗೆ, ಎಲಾ ಅಣ್ಣಂದಿರಾ, ಲೋಕದಲ್ಲಿ ದುಷ್ಟ
ಮೃಗಗಳನ್ನು ಪ್ರಯತ್ನ ಪೂರ್ವಕವಾಗಿ ಹುಡಿಕಿ ಕೊಲ್ಲ ಬೇ
ಕಲ್ಲದೆ, ಸತ್ತ ಹುಲಿಯನ್ನು ಎಬ್ಬಿಸ ಬಾರದು, ಅದು ಬದುಕಿ
ಎದ್ದ ಮೇಲೆ ನಮ್ಮನ್ನು ಬದುಕ ಗೊಡಿಸುವದೋ? ಕೊಂದು
ಹಾಕುವದು, ಅಂದನು. ಆ ಮಾತಿಗೆ ಮೂರನೇಯವನು ಈ
ತಮ್ಮನ ಮಾತು ನಿಜವೇ, ಆ ಕೆಲಸವನ್ನು ಬಿಟ್ಟು ಬಿಡಿ, ಎಂದು
ತಡದನು. ಅದನ್ನು ಧಿಕ್ಕರಿಸಿ ವಿದ್ಯಾಗರ್ವಿಗಳಾದ ಇಬ್ಬರೂ
ದಾಗಿ, ಮೃತ ಸಂಜೀವಿನಿ ವಿದ್ಯೆಯಿಂದ ಸತ್ತ ಹುಲಿಯನ್ನು
ಎಬ್ಬಿಸಲಾರಂಭಿಸಿದರು. ಮಿಕ್ಕವರಿಬ್ಬರೂ ಬಂದು ದೊಡ್ಡ ವೃ
ರವನ್ನೇರಿ ಕೊಂಡು ತಮಾಷೆ ನೋಡುತ್ತಾ ಇದ್ದರು. ಆಗ
ಅವಿವೇಕಿಗಳ ಮಂತ್ರ ಪ್ರಭಾವದಿಂದ ಬದಿಕಿದ ಹುಲಿಗೆ ಬದಿಕಿ
ಸಿದವರೇ ಆಹಾರವಾದರು. ಹೀಗೆ ವಿದ್ಯಾಗರ್ವಿಗಳಿಗೆ ವಿವೇಕ
ಶೂನ್ಯವಾಗಿರುವದು. ವಿದ್ಯೆಯೂ ವಿವೇಕವೂ ಉಂಟಾದವನೇ
ವಿದ್ವಾಂಸನು.

ಎಪ್ಪತ್ತೈದನೇ ಕಥೆ.

ಚಿಪ್ಪಿಗನ ಕಳ್ಳತನ.

ದಾರಿಹೋಕನಾದ ಕೋರಿ ಶೆಟ್ಟಿ ಎಂಬ ಒಬ್ಬ ಬಣಜಿಗನ
ಷಟ್ಟದ ವ್ಯಾಪಾರಸ್ಥನಾಗಿದ್ದನು. ಅವನು ತಾನು ಷಟ್ಟದ ಕೆ
ಗಿನಿಂದ ತಂದ ಅಡಿಕೆ, ಮೆಣಸು, ಯೆಲಕ್ಕಿ, ಲವಂಗ, ಜಾಪತ್ರಿ
ಜಾಕಾಯಿ ಮುಂತಾದ ದಿನಸುಗಳನ್ನೆಲ್ಲಾ ಷಟ್ಟದ ಮೇಲಣ ಶಿ

ಸಿಯಾದ ಬೆಂಗಳೂರು ಮುಂತಾದ ದೊಡ್ಡ ದೊಡ್ಡ ಪೇಟೆ ಮನೆ
ಗಳಲ್ಲಿ ವ್ಯಾಪಾರ ಮಾಡಿ, ಬಂಡವಾಳದ ಹಣವನ್ನು ಮುಂಚಿ
ತವಾಗಿ ಲೆಖ್ಖ ನೋಡಿ, ಒಟ್ಟು ಗಂಟು ಮಾಡಿ, ದೊಡ್ಡ ಸಾವ
ಕಾರನ ವಶಕ್ಕೆ ಕೊಟ್ಟು, ಅವನ ಹೆಸರಿನ ಹುಂಡೀ ಚೀಟನ್ನು
ತನಗೆ ಯಜಮಾನನಾದ ಬಳ್ಳಾರಿ ಶಿದ್ದಲಿಂಗ ಶೆಟ್ಟಿಗೆ ಕಳುಹಿಸಿ
ಕೊಟ್ಟು, ಲಾಭಾದಾಯದ ಹಣಕ್ಕೆ ಶ್ರೇಷ್ಠವಾದ ಒಂದು ರತ್ನ
ವನ್ನು ಕೊಂಡು ಕೊಂಡು, ಆ ಅಮೂಲ್ಯ ರತ್ನವನ್ನು ಒಬ್ಬರ
ಕೈಗೂ ಕೊಡುವದಕ್ಕೆ ನಂಬಿಕೆ ಇಲ್ಲದೆ, ತಲೆಗೆ ಸುತ್ತಿ ಕೊಂ
ಡಿದ್ದ ರುಮಾಲೆಯ ಶೆರಗಿನಲ್ಲೇ ಕಟ್ಟಿಕೊಂಡು, ಆಗಾಗ್ಗೆ ಕೈ
ಯಿಂದ ಮುಟ್ಟಿ ಮುಟ್ಟಿ ನೋಡಿ ಕೊಳ್ಳುತ್ತಾ, ಬಹು ಜಾಗ್ರತೆ
ಯಾಗಿ ಊರಿಗೆ ಪ್ರಯಾಣ ಸನ್ನಾಹ ಮಾಡಿ, ಸಾವಿರಾರು ಕೇ
ರ್ರು ಎತ್ತುಗಳನ್ನೆಲ್ಲಾ ಬಳ್ಳಾರೀ ಮಾರ್ಗದಲ್ಲಿ ಮುಂಚಿತವಾಗಿ
ಕಳುಹಿಸಿ, ತಾನು ಮೈಸೂರು ನಗರಗಳ ಮಾರ್ಗವಾಗಿ ಸ್ವಳ
ಕೀರ ಬೇಕೆಂಬ ಅಪೇಕ್ಷೆಯಿಂದ ತಾನು ಹತ್ತಿ ಕೊಳ್ಳುವ ಎತ್ತು
ಒಂದು ಆಳೊಬ್ಬನು ಇಪ್ಪತ್ತೆರೊಡನೆ ಹೊರಟು ಬೆಂಗಳೂರಿಂದ
ಮೈಸೂರು ತಟ ಹಾದು ಪಯಣದ ಮೇಲೆ ಪಯಣವಾಗಿ ಬಿಸ
ಲೀ ಘಾಟಿಗೆ ಹೋಗಿ ಶೇರಿ, ಆ ರಾತ್ರಿ ಆ ಘಾಟೀ ನಡುವೆ ಇರು
ವ ಛತ್ರದಲ್ಲಿ ಇಳುಕೊಂಡನು. ಆ ರಾತ್ರಿ ನೂರಾರು ಮಂದಿ
ಮಾರ್ಗಸ್ಥರು ಅಲ್ಲೇ ಬಂದು ಇಳುಕೊಂಡಿದ್ದರು. ಹೀಗಿರು
ವಲ್ಲಿ ಕಳ್ಳತನಕ್ಕಾಗಿಯೇ ಮಾರ್ಗಸ್ಥರೊಳಗೆ ಮಾರ್ಗಸ್ಥನಾಗಿ
ಬಂದ ಒಬ್ಬ ಕಳ್ಳನು ಈ ಕೋರಿ ಶೆಟ್ಟಿಯ ಬಂದೇ ಎತ್ತನ್ನೂ
ಒಬ್ಬನೇ ಆಳನ್ನೂ ನೋಡಿ, ಇವನು ಘಟ್ಟದ ವ್ಯಾಪಾರಸ್ತನೆಂ
ದು ತಿಳಿದು, ಅವನು ತಲೆಯ ಮೇಲಿನ ರುಮಾಲು ಶೆರಗನ್ನು

ಆಗಾಗ್ಯೆ ಮುಟ್ಟಿ ನೋಡಿ ಕೊಳ್ಳುವದನ್ನು ಕಂಡು ಈ ಶೆರ
ನಲ್ಲಿ ಏನೋ ಬಂದು ಉತ್ತಮವಾದ ವಸ್ತು ಇದೆ ಎಂತ ನಿ
ಯಿಸಿ ಹೊಂಚುತ್ತಾ ಇದ್ದು, ಅರ್ಧ ರಾತ್ರಿಯಲ್ಲಿ ಮೈ ಮರತ
ನಿದ್ದೆ ಹೋಗುವ ಕೋರಿಶೆಟ್ಟಿಯ ಹತ್ರಕ್ಕೆ ಬಂದು ತನ್ನ ಹ
ನ್ನುರದಿಂದ ರುಮಾಲೆಯ ಶೆರಗಿನ ಗಂಟನ್ನು ಬಿಚ್ಚಿ ಅದರಲ್ಲಿ
ರತ್ನವನ್ನು ಕದ್ದುಕೊಂಡು ಹೋದನು.

ಇದು ರಾತ್ರೀ ಹಗಲೂ ರತ್ನ ಚಿಂತಾಪರನಾದ ಕೋರಿ ಶೆಟ್ಟಿ
ಗೆ ಕನಸಿನ ಹಾಂಗಿದ್ದು ಅವನು ಸ್ವಪ್ನದ ಕಲವರಿಕೆಯಿಂದ ಎ
ಬ್ಬರ ಬಿದ್ದಿದ್ದು, ರುಮಾಲೆಯ ಕೊನೆಯನ್ನು ನೋಡಿಕೊಂ
ನು. ಆ ಗಂಟು ಮಗುವಿಲ್ಲದೆ ಬರೀ ತೊಪ್ಪಿನೋಪಾದಿಯ
ಬಿಚ್ಚಿ ಬಿರಿದಾದ್ದನ್ನು ಕಂಡು, ತನ್ನ ಸ್ವಪ್ನವು ಸ್ವಪ್ನವಲ್ಲ, ಯ
ಥಾರ್ಥವಾಯಿತೆಂದು ದುಃಖಿಸಿ, ಸಂಗಡಲೇ ಧೈರ್ಯ ತಂ
ಕೊಂಡು, ಎದ್ದು ಆ ಛತ್ರದಲ್ಲಿ ಮಲಗಿರುವ ನಿದ್ರಾ ಪರರಾ
ಗಂಡಸರ ಎದೆಗಳನ್ನೆಲ್ಲಾ ಮುಟ್ಟಿ ಮುಟ್ಟಿ ನೋಡಿ, ಆಗ ತಾನೆ
ಕದ್ದು ಸುಳ್ಳು ನಿದ್ದೆ ಹೋಗುವ ಕಳ್ಳನ ಎದೆಯು ತಟ ತಟ
ಬಡುಕೊಳ್ಳುವದನ್ನು ತಿಳಿದು ಇವನೇ ರತ್ನ ಚೋರನೆಂದ
ನಿಶ್ಚೈಸಿ, ಗುರುತಿಗಾಗಿ ಅವನ ಜುಟ್ಟನ್ನು ಕತ್ತರಿಸಿ ಗುಲ್ಲ
ಮಾಡದೆ ಮೆಲ್ಲಗೆ ತಾನಿದ್ದ ತಾವಿಗೆ ಬಂದು ಕೂತಿದ್ದನು. ಕೂ
ಲೇ ಆ ಗಂಟುಕಳ್ಳನು ಸತ್ರದಲ್ಲಿ ಮಲಗಿದ್ದವರ ಜುಟ್ಟುಗಳನ್ನೆ
ಲ್ಲಾ ಬಂದೇ ಸರಿಯಾಗಿ ಕತ್ತರಿಸಿ ಬಿಟ್ಟನು. ಕೋರಿಶೆಟ್ಟಿ
ರುಣೋದಯವನ್ನು ಎದುರುನೋಡುತ್ತಾ ಇದ್ದು ಬೆಳಗಾದ ಕ
ಡ್ಲೇ ಛತ್ರದ ಅಧಿಕಾರಿಗೆ ತಿಳಿಸಿದನು. ಆಗ ಆ ಛತ್ರಾಧಿಕಾರಿಯ
ಒಳಗಿದ್ದ ಜನಗಳನ್ನೆಲ್ಲಾ ಶೋಧಿಸಲಾಗಿ ಎಲ್ಲರ ಜುಟ್ಟೂ ಹೋ

ಗಿ ಯಿದ್ದ ಕಾರಣ ಆ ಜನದ ಗುಂಪಿನಲ್ಲಿ ಗಂಟು ಕಳ್ಳ ನಿವನೆಂ
ಹಿಡಿಯಲಿಕ್ಕಾಗದೆ ಛತ್ರದಲ್ಲಿ ಇಳಿದಿದ್ದ ಮಾರ್ಗಸ್ಥರನ್ನೆಲ್ಲಾ
ವಲು ಹಾಕಿ ನ್ಯಾಯಾಧಿಪತಿಯ ಬಳಿಗೆ ಕರಕೊಂಡು ಹೋಗಿ
ಟ್ಟು, ಆ ಸಂಗತಿಯನ್ನೆಲ್ಲಾ ತಿಳಿಸಿದನು. ಬುದ್ಧಿವಂತನಾದ
ಅಧಿಪತಿಯು ಬಂದೇ ಸಮವಾಗಿ ಕತ್ತರಿಸಿರುವ ಜುಟ್ಟುಗಳ
ತಿಯನ್ನು ಮನಸ್ಸಿನಲ್ಲಿ ಆಲೋಚಿಸಿ, ಇದು ಕತ್ತರಿಸುವ
ವ್ಯೆಯಿಂದ ಉಪಜೀವಿಸುವ ಚಿಪ್ಪಿಗನ ಕೆಲಸವೆಂದು ತಿಳು
ಂಡು, ಆ ಬಂದಿರುವ ಜನಗಳ ಜಾತಿಯ ಹೆಸರನ್ನು ಕೇಳ
ಗಿ ಈ ಗಂಟುಕಳ್ಳನು ತಾನು ಚಿಪ್ಪಿಗನೆಂದು ಹೇಳಿದನು.
ಮೇಲೆ ಅವನ ಬಟ್ಟೆಗಳನ್ನೆಲ್ಲಾ ಶೋಧಿಸಿ ನೋಡಲಾಗಿ, ಅ
ನ ಜೇಬಿನಲ್ಲಿ ಒಂದು ಕತ್ತರಿ ಪಾಗಿನಲ್ಲಿ ಶಿಕ್ಕಿಸಿರುವ ಸೂಜಿ
ರದ ಉಂಡೆಗಳು ಹೊರ್ತು ಇನ್ನೇನೂ ಶಿಕ್ಕಲಿಲ್ಲ.

ಆಗ ನ್ಯಾಯಾಧಿಪತಿಯು ತನ್ನ ಯುಕ್ತಿ ವಿಚಾರಣೆ ಇವನ
ಮೇಲೆ ಸಾಗಲಿಲ್ಲ, ಆದರೂ ಕಳ್ಳತನದ ಗುಮಾನಿ ಪೂರ್ಣವಾಗಿ
ವನ ಮೇಲೆ ತನಗೆ ಉಂಟಾಗಿದೆ, ಇದನ್ನು ಪರಿಕ್ಷಿಸಿ ನೋಡ
ೇಕೆಂದು ಅವನನ್ನು ಪಾರೆದಲ್ಲಿಟ್ಟು ಅವನಿಗೆ ವಾಂತಿಗೆ ಕೊಡಿ
ಲು, ಆ ರತ್ನ ವಾಂತಿಯಲ್ಲಿ ಬಿತ್ತು. ನ್ಯಾಯಾಧಿಪತಿಯು ಆ ರತ್ನ
ನ್ನು ಕೋರಿಶೆಟ್ಟಿಗೆ ಕೊಡಿಸಿ ಕಳ್ಳನಿಗೆ ತಕ್ಕ ಶಿಕ್ಷೆ ಮಾಡಿಸಿ
ನು. ಹೀಗೆ ಕಳ್ಳತನ ಮಾಡುವವರಿಗೆ ಕೇಡು ತಪ್ಪುವದಿಲ್ಲ.

ಎಪ್ಪತ್ತಾರನೇ ಕಥೆ.

ಅವಿವೇಕರಲ್ಲಿ ವಿವೇಕವು.

ತುಂಗಭದ್ರಾತೀರವಾಸಿಯಾದ ಒಬ್ಬ ವಿದ್ವಾಂಸನು ಕರ್ನಾಟಕ ದೇಶಾಧಿಪತಿಯಾದ ಕಂಠೀರವ ನರಸರಾಜ ಒಡೆಯರ ಬಳಿಗೆ ಬಂದು, ಬಹುಮಾನವನ್ನು ಹೊಂದ ಬೇಕೆಂಬ ಅಪೇಕ್ಷೆಯಿಂದ ಆ ಸಂಸ್ಥಾನದಲ್ಲಿರುವ ಮುಖ್ಯ ಮುಖ್ಯಸ್ಥರಾದ ವಿದ್ವಾಂಸರನ್ನೆಲ್ಲಾ ವಿನಯ ಪೂರ್ವಕವಾಗಿ ಕಂಡು, ತನ್ನ ವಿದ್ವತ್ತನ್ನು ಎಲ್ಲರಲ್ಲಿಯೂ ವಿಧೇಯನಾಗಿ ತಿಳಿಸಿ, ಅವರ ಪ್ರೀತಿ ಸಂಪಾದಿಸಿ ಅವರ ಮುಖಾಂತರವಾಗಿ ರಾಜ ಸಭಾ ಪ್ರವೇಶವನ್ನು ಮಾಡಿ ರಾಜ ಮರ್ಯಾದೆಯನ್ನು ಅರಿತು ಕಾಣಿಸಿ ಕೊಂಡು ಫಲ ಮಂತ್ರಾಕ್ಷತೆಗಳನ್ನು ಆಶೀರ್ವಾದ ಪುರಸ್ಸರವಾಗಿ ಕೊಟ್ಟು ಕೊಂಡಾಡಿ, ಅರಸನ ಅನುಮತಿಯಿಂದ ವಿದ್ವಾಂಸ ಮಂಡಲೆಯಲ್ಲಿ ತಕ್ಕ ಸ್ಥಳವರಿತು ಕುಳಿತು ಕೊಂಡು, ತನ್ನ ವರ್ತಮಾನವನ್ನೆಲ್ಲಾ ಪ್ರಸಂಗ ರೂಪದಿಂದ ಅರಿಕೆ ಮಾಡಿ, ವಿದ್ವಾಂಸರ ಗಣನೆಯಲ್ಲಿ ಶ್ರೇಷ್ಠತಕ್ಕವನೆಂದು ಬಹು ಮತಿ ಪಡದು, ಪ್ರಥಮ ಭೇಟಿಯಲ್ಲಿ ಅಮೂಲ್ಯವಾದ ಬಂದು ಮಾಣಿಕ್ಯವನ್ನು ಅರಸನಿಂದ ಸಂಭಾವನೆಯಾಗಿ ಹೊಂದಿ, ಆ ದಿವಸವೇ ಅರಸನ ಅಪ್ಪಣೆ ತೆಗದ ಕೊಂಡು ತನ್ನ ಸ್ಥಳಕ್ಕೆ ಹೊರಟು ಹೋಗುತ್ತಾ, ಮಾರ್ಗದ್ಯ ದಾರಿಗಳ್ಳನಾದ ಒಬ್ಬ ಬೇಡನನ್ನೂ ಅವನ ಹೆಂಡತಿಯನ್ನೂ ಸಹ ಕಂಡು, ಅವರು ಕಳ್ಳರೆಂದರಿಯದೆ, ಮಾರ್ಗಸ್ಥರೆಂದು ನಂಬಿ, ಅವರಾಡುವ ಮೋಸದ ಮರ್ಯಾದೆ ಮಾತುಗಳಿಗೆ ಬೆರಗಾಗಿ, ತನ್ನ ವರ್ತಮಾನವನ್ನೆಲ್ಲಾ ಮರೆಮಾಜದೆ ಹೇಳಿದನು

ಗ ಅವನ ಬಳಿಯಲ್ಲಿರುವ ಮಾಣಿಕ್ಯವನ್ನು ಅಪಹರಿಸಿ ಕೊಳ್ಳ
ೀಕೆಂಬ ಬುದ್ಧಿ ಅವರಿಗೆ ಹುಟ್ಟಿ, ಬೇಡನು ಕ್ರೂರ ಮನಸ್ಸಿ
ಂದ ವಿದ್ವಾಂಸನನ್ನು ನೋಡಿ, ಹಾದುವನೇ, ನಿನ್ನಲ್ಲಿರುವ ಮಾ
ಣಿಕ್ಯವನ್ನು ಬಳ್ಳೀ ಮಾತಿನಿಂದ ಕೊಡುತ್ತೀಯೋ, ಪ್ರಾಣ
ಳ ಕೊಳ್ಳುತ್ತೀಯೋ? ಎಂದು ಗದ್ದಿಸಿದನು. ಬ್ರಾಹ್ಮಣನು
ುಷ್ಟ ಸಹವಾಸದಿಂದ ನಷ್ಟಕಾಲ ಬಂತೆಂದು ವ್ಯಸನ ಪಟ್ಟು,
ುಪಾಯದಿಂದ ತನ್ನಲ್ಲಿದ್ದ ಮಾಣಿಕ್ಯವನ್ನು ನುಂಗಿ, ಭಯದಿಂ
ಿ ನಡುಗುತ್ತಾ ಬೇಡನನ್ನು ನೋಡಿ, ಅಯ್ಯಾ, ನೀನು ನಾಯ
ಿ ಕುಲದಲ್ಲಿ ಹುಟ್ಟಿ ನಾಯಕ ರತ್ನವೆಂದು ಹೆಸರು ಪಡದು,
ನ್ನನ್ನು ಹಿಂಸಿಸಿ, ಅನಾಯಕನೆಂದೂ ದುರ್ನಾಯಕನೆಂದೂ
ಅಪಕೀರ್ತಿ ಹೊಂದ ಬೇಡ, ನನ್ನ ಕೈಯಲ್ಲಿ ಮಾಣಿಕ್ಯವಿಲ್ಲ,
ನ್ನ ಪ್ರಾಣ ರತ್ನವನ್ನು ಅಪಹರಿಸದೆ ಕಾಪಾಡಿ ಮಾತಿನವಾಶಿ
ುನ್ನೂ ಧರ್ಮವನ್ನೂ ಸಂಪಾದಿಸುವದು ನಿನಗೆ ಬಹು ಬಳ್ಳೀ
ು, ಎಂದು ಅನೇಕ ಪ್ರಕಾರವಾಗಿ ಬೇಡಿ ಕೊಂಡನು. ಬೇಡ
ು ಎಲೈ ಕವೀಶ್ವರನೇ, ಕೈಯಲ್ಲಿದ್ದ ರತ್ನವನ್ನು ನುಂಗಿ ಬಿ
ಟ್ಟು, ನನ್ನಲ್ಲಿಲ್ಲವೆಂದು ಬೇಡಿ ಕೊಳ್ಳುತ್ತೀಯೋ? ಬೇಡ, ನಾವು
ೇಡರೆಂಬುವದು ನಿನಗೆ ತಿಳಿಯಲಿಲ್ಲವೋ? ಬೇಡಿದ್ದನ್ನು ಕೊ
ಡದೆ ಹೋದರೆ ನಿನ್ನನ್ನು ಬಿಟ್ಟು ಬಿಡುವೆವೋ? ಇಂಥಾ ಕು
ುಕ್ತಿಗಳ ನನ್ನಲ್ಲಿ ತೋರಿಸ ಬೇಡ, ನುಂಗಿದ ರತ್ನವನ್ನು
ಕಾರು, ಕಾರದಿದ್ದರೆ ನಾನೇ ಕಾರಿಸುವೆನು, ನೀನು ನುಂಗಿದ್ದ
ನ್ನು ನೀನು ಕಾರಿದರೆ ಪ್ರಾಣದಿಂದ ಊರು ಶೇರುತ್ತೀ, ನಾನು
ಕಾರಿಸಿದರೆ ಕಾಡೇ ಶೇರುತ್ತೀ, ನೋಡಿಕೋ, ಎಂದುಹೆದರಿಸಿ
ನು. ಹೀಂಗೆ ಒಬ್ಬರಿಗೊಬ್ಬರು ವಾಗ್ವಾದ ಮಾಡುತ್ತಿರುವ

ಸವ.ಯದಲ್ಲಿ " ಕಳ್ಳರಿಗೆಲ್ಲಾ ಕಳ್ಳನು ಕಡುಗಳ್ಳನೆಂಬ ನ್ಯಾಯ
ವಾಗಿ " ಈ ದಾರಿ ಕಳ್ಳ ಬೇಡನನ್ನು ಬೆದರಿಸುವದಕ್ಕೆ ಅಡ
ಗಳ್ಳನಾವ ಒಬ್ಬ ಬೇಡನು ದೊಣ್ಣೇ ತೆಕ್ಕೊಂಡು ಓಡಿ ಬಂದು
ನಿಲ್ಲಿ ನಿಲ್ಲಿ, ಅದೇನು ? ಮಾಣಿಕ್ಯವನ್ನು ಕುರಿತು ನೀವಿಬ್ಬರೂ
ವ್ಯಾಜ್ಯವಾಡುತ್ತೀರಲ್ಲಾ ? ಅದು ಯಾರಲ್ಲಿದ್ದರೂ ಸರಿ, ಅದನ್ನು
ನನ್ನೆದುರಿಗೆ ತಂದಿರಿಸಿ ? ನಿಮ್ಮ ವ್ಯಾಜ್ಯವನ್ನು ತೀರಿಸುತ್ತೇನೆ
ಇರಿಸದಿದ್ದರೆ ನಿಮ್ಮನ್ನೇ ತೀರಿಸುತ್ತೇನೆ, ಎಂದು ಘರ್ಜಿಸಿ
ಮಾತ್ರದಲ್ಲೇ ಬ್ರಾಹ್ಮಣನು ಬಾಯಿತೊದಲಿ ಭಯದಿಂದ ಮೈ
ಮರತು ಬಿದ್ದನು. ಬೇಡನು ಭಯದಿಂದ ನಾಲಿಗೆ ತುಟಿ ಬಿ
ಗಿ ಕೈಕಾಲು ನಡುಗುತ್ತಾ ಮೈಯೆಲ್ಲಾ ಬೆವರು ಹುಟ್ಟಿ, ಅ
ಯ್ಯೋ! ವ್ಯರ್ಥವಾಗಿ ಬ್ರಾಹ್ಮಣನನ್ನು ಕೊಲ್ಲಿಸುವ ಪಾಪವನ್ನು
ಬಡಲಲ್ಲಿ ಕಟ್ಟಿ ಕೊಂಡು, ಈ ಸರಿಯಾಳಾದ ಬೇಡನ ಕೈಲೇ
ಸತ್ತು ಪಿಶಾಚದ ಬಾಯಿಗೆ ಗೊತ್ತಾದ ತುತ್ತಾಗಿ ಹೋಗ ಬೇ
ಕಾಯಿತಲ್ಲಾ, ಎಂದು ತತ್ತರ ಪಟ್ಟು, ಪಶ್ಚಾತ್ತಾಪದಿಂದ ಅಡ
ಗಳ್ಳನನ್ನು ಕುರಿತು ಅಣ್ಣಾ, ನಾವಿಬ್ಬರೂ ದಾರಿಯಲ್ಲಿ ಹೋಗು
ತ್ತಾ ಹೋಗುತ್ತಾ ದಾರಿ ಸಾಗುವದಕ್ಕಾಗಿ ಭಾವ ಮೈದಂದಿ
ಸರಸವಾದ ವಿನೋದ ಮಾತುಗಳನ್ನು ವ್ಯಾಜ್ಯವಾಡುವ ಹಾಗೆ
ನಗಾಟಕ್ಕೆ ನುಡಿದೆವೇ ಹೊರ್ತು, ಇದು ಹಗೆ ಸಾರವಲ್ಲ
ನಗುಸಾರವೆಂದು ತಿಳುಕೋ, ಅಪ್ಪರ ತಾಳಮೆ ನಿನಗೆ ಇಲ್ಲದಿ
ದ್ದರೆ ನನ್ನನ್ನು ಪ್ರಾಣ ಬೆರಿಶೆಯಾಗಿ ಶೀಳಿ ಕೊಂದು ಮುಂಚಿತ
ವಾಗಿ ಶೋಧಿಸಿಕೋ, ನನ್ನಲ್ಲಿ ಏನೂ ನಿನಗೆ ಶಿಕ್ಕದ ಪಕ್ಷಕ್ಕೆ
ನನ್ನ ಹಾಗೆಯೇ ಅವನು ಎಂಬದಾಗಿ ಅವನನ್ನು ಕೊಲ್ಲದೆ
ಬಿಟ್ಟು ಬಿಡು, ಇದೇ ನನಗೆ ನಿನ್ನಿಂದ ಆಗ ಬೇಕಾದ ಉಪ

ಕಾರ, ಎಂದು ಧರ್ಮ ಚಿಂತೆಯಿಂದ ಮಾತನಾಡಿದನು. ಅಡವಿ ಕಳ್ಳನು ಎಲಾ ದಾರಿ ಹೋಕರಿರಾ, ನಿಮ್ಮ ಕಳ್ಳ ಮಾತುಗಳು ನಾನು ನಂಬುವದಿಲ್ಲ, ಈ ಹೆಂಗಸಿನ ಮಾತನ್ನು ಕೇಳಿ ತಿಳು ಕೊಳ್ಳುವೆನೆಂದು, ಎಲೇ ತಂಗಿಯೇ, ಈ ಸಂಗತಿಯನ್ನು ಮರ ಮಾಚದೆ ಹೇಳಿಂದು ಕೇಳಿದನು. ಅದಕ್ಕೆ ಬೇಡತಿಯು ತನ್ನ ಗಂಡನನ್ನು ಬದುಕಿಸಿ ಕೊಳ್ಳ ಬೇಕೆಂಬ ಆಶೆಯಿಂದ ಎಲೈ ಅಣ್ಣಾ, ನಿನ್ನ ಸಂಗಡ ಭಯದಿಂದ ನ್ಯಾಯವಾಗಿ ಮಾತನಾಡು ವವನು ನನ್ನ ಗಂಡನು, ಮಾತನಾಡುವದಕ್ಕೆ ಸಹ ಚೈತನ್ಯ ವಿಲ್ಲದೆ ಮೈ ಮರತು ಇರುವವನು ನನಗೆ ಮಾರ್ಗ ಸಹೋದ ರನು, ಇವರಿಬ್ಬರೂ ವಿನೋದಕ್ಕಾಗಿ ಮಾಣಿಕ್ಯವನ್ನು ಕುರಿ ತು ವ್ಯಾಜ್ಯ ವಾಡುವವೇ ಹೊರ್ತು ಬಬ್ಬರಲ್ಲೂ ಮಣಿ ಇಲ್ಲ, ನಮ್ಮನ್ನು ನೀನು ಸುಮ್ಮನೆ ದಣಿಸುವದರಲ್ಲಿ ಏನೂ ಗುಣ ವಿಲ್ಲ, ತೃಣವಷ್ಟು ಪ್ರಯೋಜನವಿಲ್ಲದ ಎಣಿಕೆಯನ್ನು ಎಣಿಸ ಬೇಡವೆಂದು ಹೇಳಿದಳು. ಆ ಮಾತು ನಿಜವೆಂದು ನಂಬಿ ಅ ಡವಿ ಗಳ್ಳನು ಸುಮ್ಮನೆ ಹೊರಟು ಹೋದನು. ಈ ದಾರಿ ಹೋಕರು ಮೂರು ಮಂದಿಯೂ ಒಬ್ಬರಿಗೊಬ್ಬರು ಹಗೆ ಮಾ ಡದೆ ಪ್ರೀತಿಯಾಗಿ ತಮ್ಮ ತಮ್ಮ ಊರುಗಳಿಗೆ ಹೋಗಿ ಕೇರಿ ಕೊಂಡರು. ಆದ ಕಾರಣ ಸಜ್ಜನರ ಸಹವಾಸದಿಂದ ದುರ್ಜ ನರು ಗುಣವಂತರಾಗುವರು.

ಸಂಪೂರ್ಣ.

SERIES OF SCHOOL BOOKS

PUBLISHED AT THE

Mysore Government Press.

FIRST BOOK, for Natives Learning English. Price 1 Anna.

SECOND BOOK, for Natives Learning English. Price 2 Annas 6 Pie.

THIRD BOOK, for Natives Learning English. Price 8 Annas, full cloth 6 Annas paper cover.

A MANUAL OF CONDUCT, containing Moral Essays and Prudential Maxims, on the Formation of Character and other subjects connected with success and happiness in Life. Selected from various Authors. For the use of Schools. Price 8 As. full cloth, 6 As. paper cover.

FIRST GRAMMAR, for Native Youths Learning English. Price 6 Pie.

ENGLISH GRAMMAR, for Native Youths. Part I. Price 1 Anna.

A BRIEF SKETCH OF THE HISTORY OF INDIA, for Junior Classes. Price 2 Annas.

LARGER HISTORY OF INDIA, compiled from the Works of Elphinstone, Wilson, Macaulay, Macfarlane, Campbell, Kaye, and others. By JOHN GARRETT. Price 1 Rupee 4 Annas, full cloth, gilt back. 1 Rupee, half cloth.

AN ABRIDGMENT OF THE ABOVE. Price 8 Annas, full cloth, 6 As. half cloth.

ARITHMETICAL TABLES AND RULES, with examples, British and Indian Moneys, Weights and Measures, &c., &c. also---The Hindu Names of the Years and Months. Price 3 Annas.

GEOGRAPHY, a Brief Description of the Earth and its Inhabitants. For use in Schools. Price 3 Annas.

A FIRST HISTORY OF ENGLAND, for Junior Classes. Price 2 Annas 6 Pie.

LARGER HISTORY OF ENGLAND, for Schools in India, compiled from the works of Hume, Mackintosh, Macaulay, Smith, and other writers. By JOHN GARRETT. Price 14 Annas, full cloth, gilt back.

CANARESE.

FIRST BOOK, for the use of Schools. Price 10 Pie.

SECOND PROSE READER, in Canarese. Three and quarter Annas.

The KATHA MANJARI, or BUNCH OF STORIES. Price 1 Rupee in stiff covers, and 1 Rupee 4 Annas full cloth, gilt back.

A FIRST HISTORY OF ENGLAND, for Junior Classes. Price 3 Annas.

A MANUAL CANARESE AND ENGLISH DICTIONARY. Abridged from the Rev. W. Reeve's Carnataca and English Dictionary. By JOHN GARRETT. Second Edition. Price 2 Rupees and 8 Annas full cloth. 12mo.

A BRIEF SKETCH OF THE HISTORY OF INDIA. Price 2 Annas.

In the Press.

THE THIRD BOOK OF LESSONS, in Canarese.

PANCHATANTRA, in Canarese.

ENGLISH AND CANARESE DICTIONARY.

LIBRARY OF CONGRESS
0 039 308 264 1